
Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–40 | ಸೆಪ್ಟೆಂಬರ್ 30–ಅಕ್ಟೋಬರ್ 6, 2024 | ಪುಟ 16 | ರೂ.10/–
Volume-18 | Issue-40 | September 30-October 6, 2024 | Pages:16 | Price: 10/-



ಶ್ರೀಲಂಕಾ ಅಧ್ಯಕ್ಷ ಚುನಾವಣೆ: ಪರ್ಯಾಯಕ್ಕೆ ಜನರ ಮತ




ಬಂಡವಾಳಗಾರರ ಕೈಗೆ ಶಿಕ್ಷಣ: ತೀವ್ರ ಪ್ರತಿರೋಧಕ್ಕೆ ಕರೆ

ಮುಡಾ ಹಗರಣ: ರಾಜಕೀಯ ಷಡ್ಯಂತ್ರದ ಮೇಲಾಟಗಳು

ಕಲಬೆರಕೆ ಲಡ್ಡು: ಭಕ್ತರ ಭಾವನೆಗಳ ಜೊತೆ ಆಡುವುದು ಬೇಡ

ತಿರುಪತಿ ಲಡ್ಡು ಕಲಬೆರಕೆ: ಭಕ್ತರ ಭಾವನೆಗಳ ಜೊತೆ ಆಟವಾಡುವುದು ಬೇಡ, ನಿಜ ಏನೆಂದು ತಿಳಿಯಬೇಕಿದೆ

ತಿರುಮಲ ಲಡ್ಡುಗಳ ತಯಾರಿಕೆಗೆ ಬಳಸುವ ತುಪ್ಪದಲ್ಲಿ ಪ್ರಾಣಿಗಳ ಕೊಬ್ಬನ್ನು ಬೆರೆಸಲಾಗಿದೆ ಎಂಬ ವರದಿಯು ಕೋಟ್ಯಂತರ ತಿರುಮಲ ಭಕ್ತರನ್ನು ತೀವ್ರ ಚಿಂತೆಗೀಡುಮಾಡಿದೆ. ಲಡ್ಡು ಜತೆಗೆ ಟಿಟಿಡಿಯಲ್ಲಿ ನಡೆಯುತ್ತಿರುವ ಹಲವು ಭ್ರಷ್ಟಾಚಾರ, ಅವ್ಯವಹಾರಗಳ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು. ಟಿಟಿಡಿಯಲ್ಲಿ ಹಲವು ಅಕ್ರಮಗಳು ನಡೆಯುತ್ತಿದ್ದರೆ ಆ ಮಂಡಳಿಯ ಸದಸ್ಯರಾಗಿರುವ ಬಿಜೆಪಿ ನಾಯಕರು ಏನು ಮಾಡುತ್ತಿದ್ದರು? ಭಕ್ತರಿಗೆ ಬೇಕಾಗಿರುವುದು ಮತಾಂಧತೆ ಅಲ್ಲ. ರಾಜಕೀಯ ನಾಯಕರ ಸವಾಲುಗಳು, ಪ್ರತಿ ಸವಾಲುಗಳಲ್ಲ. ವೈಯುಕ್ತಿಕ ನಂಬಿಕೆಯಾಗಿರಬೇಕಿದ್ದ ಭಕ್ತಿಯನ್ನು ವ್ಯಾಪಾರ–ರಾಜಕೀಯವಾಗಿ ಪರಿವರ್ತಿಸಿ, ಭಕ್ತಿಗಿಂತ ಸ್ವಾರ್ಥ ವ್ಯಾಪಾರ, ರಾಜಕೀಯ ಹಿತಾಸಕ್ತಿಯಲ್ಲಿಯೇ ಹೆಚ್ಚು ಆಸಕ್ತಿ ತೋರುತ್ತಿವೆ.



ತಿರುಮಲ ಲಡ್ಡುಗಳ ತಯ್ಯಾರಿಕೆಗೆ ಬಳಸುವ ತುಪ್ಪದಲ್ಲಿ ಪ್ರಾಣಿಗಳ ಕೊಬ್ಬನ್ನು ಬೆರೆಸಲಾಗಿದೆ ಎಂಬ ವರದಿಯು ಸಾಕಷ್ಟು ಕೋಲಾಹಲವನ್ನು ಹುಟ್ಟುಹಾಕಿದೆ. ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಈ ಕುರಿತು ಹಿಂದಿನ ಸರ್ಕಾರದ ವಿರುದ್ಧ ಆರೋಪ ಮಾಡಿದ್ದಾರೆ. ಕೆಲವು ರಾಜಕಾರಣಿಗಳು, ಹಿಂದುತ್ವ ಸಂಘಟನೆಗಳ ನಾಯಕರು ಇದನ್ನು "ಹಿಂದೂ ಜನಾಂಗದ ಮೇಲಿನ ಕಳಂಕ", “ನಮ್ಮ ಸನಾತನ ಧರ್ಮವನ್ನು ಹಾಳುಗೆಡವಲು ಹಿಂದೂ ವಿರೋಧಿಗಳು ಮಾಡುವ ಕುತಂತ್ರ” ಎಂದೆಲ್ಲಾ ಆಕ್ರೋಶಭರಿತವಾಗಿ ಮಾತನಾಡುತ್ತಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ವೆಂಕಟೇಶ್ವರನ ಭಕ್ತರ ಮನಸ್ಸನ್ನು ಈ ವರದಿ ತೀವ್ರವಾಗಿ ಕಲಕಿದೆ. ಅದು ನಡೆದಿದ್ದರೆ ಅದೊಂದು ಕ್ರಿಮಿನಲ್ ಕೃತ್ಯವಾಗುತ್ತದೆ. ಅದಕ್ಕೆ ಕಾರಣರಾಗಿರುವ ಅಪರಾಧಿಗಳನ್ನು ಕಾನೂನಿನ ಕುಣಿಕೆಯಲ್ಲಿ ಸಿಲುಕಿಸಿ ಶಿಕ್ಷೆಗೆ ಗುರಿಪಡಿಸುವ ಕೆಲಸ ಮಾಡಬೇಕು. ಆದರೆ, ಅಂತಹ ಕ್ರಿಮಿನಲ್ ಕೃತ್ಯಗಳನ್ನು ಪವನ್ ಕಲ್ಯಾಣ್ ಭಾವನಾತ್ಮಕವಾಗಿ ಬಳಸಿಕೊಳ್ಳಲು ಮುಂದಾಗಿದ್ದಾರೆ.

ವ್ಯಾಪಾರ–ರಾಜಕೀಯವಾಗಿ ಪರಿವರ್ತನೆ

ತಿರುಮಲ ತಿರುಪತಿ ದೇವಸ್ಥಾನವು ದೇಶದ ಅತ್ಯಂತ ಶ್ರೀಮಂತ ದೇವಾಲಯಗಳಲ್ಲಿ ಒಂದು. ಪ್ರತಿ ವರ್ಷ ರೂ.5000 ಕೋಟಿ ರೂ.ಗಳ ಬಜೆಟ್, 18,000 ಕೋಟಿ ರೂ.ಗಳ ಠೇವಣಿ ಮತ್ತು ಸಾವಿರ ಕಿಲೋ ಚಿನ್ನವನ್ನು ಹೊಂದಿರುವ ಶ್ರೀಮಂತ ದೇವಸ್ಥಾನ. ಇಲ್ಲಿ ಪ್ರತಿನಿತ್ಯ ಕೋಟ್ಯಂತರ ರೂಪಾಯಿ ಖರೀದಿ ಮತ್ತು ಮಾರಾಟ ವ್ಯವಹಾರ ನಡೆಯುತ್ತಿದೆ. ಹೀಗಾಗಿ ಟಿಟಿಡಿ ಅಧ್ಯಕ್ಷ ಸ್ಥಾನ ಹಾಗೂ ಅದರ ಸದಸ್ಯರಾಗಲು ರಾಜಕೀಯ ನಿರುದ್ಯೋಗಿಗಳು, ದೊಡ್ಡ ಉದ್ಯಮಿಗಳು, ಭ್ರಷ್ಟ ಮಾಜಿ ಅಧಿಕಾರಿಗಳು ದೊಡ್ಡ ಮಟ್ಟದಲ್ಲಿ ಪೈಪೋಟಿ ನಡೆಸುತ್ತಾರೆ. ಆಡಳಿತ ಪಕ್ಷಗಳ ನಾಯಕರು ಕೋಟ್ಯಂತರ ರೂಪಾಯಿ ಕೊಟ್ಟು ಟಿಟಿಡಿ (ತಿರುಮಲ ತಿರುಪತಿ ದೇವಸ್ಥಾನಮ್) ಟ್ರಸ್ಟ್ ಹುದ್ದೆ ಗಿಟ್ಟಿಸಿಕೊಳ್ಳುತ್ತಿದ್ದಾರೆ ಎಂಬ ಟೀಕೆಗಳಿವೆ. ವೈಯುಕ್ತಿಕ ನಂಬಿಕೆಯಾಗಿರಬೇಕಿದ್ದ ಭಕ್ತಿಯನ್ನು ವ್ಯಾಪಾರ–ರಾಜಕೀಯವಾಗಿ ಪರಿವರ್ತಿಸಿ ಹಣ ಗಳಿಸುತ್ತಿರುವ ಪಕ್ಷಗಳು ಈಗ ಭಕ್ತಿಗಿಂತ ಸ್ವಾರ್ಥಕ್ಕಾಗಿ ವ್ಯಾಪಾರ ಮತ್ತು ರಾಜಕೀಯ ಹಿತಾಸಕ್ತಿಯಲ್ಲಿಯೇ ಹೆಚ್ಚು ಆಸಕ್ತಿ ತೋರುತ್ತಿವೆ.

ಲಾಭ ಬರುವುದಿದ್ದರೆ ಏನನ್ನಾದರೂ ಕಲಬೆರಕೆ ಮಾಡುತ್ತಾರೆ

ಹೆಚ್ಚೆಚ್ಚು ಲಾಭ ಗಳಿಸಬೇಕೆಂಬ ವ್ಯಾಪಾರಿಗಳು ಮತ್ತು ಉದ್ಯಮಿಗಳ ದುರಾಸೆ, ಪ್ರತಿಯೊಂದು ವ್ಯವಹಾರದಲ್ಲಿಯೂ ಕಮಿಷನ್ ಪಡೆಯಲೇ ಬೇಕೆಂಬ ಭ್ರಷ್ಟ ಜನಪ್ರತಿನಿಧಿಗಳು ಮತ್ತು ಭ್ರಷ್ಟ ಅಧಿಕಾರಿಗಳು, ಧಾರ್ಮಿಕ ಭಾವನೆಗಳನ್ನು ಕೆರಳಿಸಿ ರಾಜಕೀಯ ಲಾಭ ಮಾಡಿಕೊಳ್ಳುವ ರಾಜಕಾರಣಿಗಳು ಹಾಗೂ ಧಾರ್ಮಿಕ ಮೂಲಭೂತವಾದಿಗಳ ಆಟದಲ್ಲಿ ನಿಜವಾದ ದೈವ ಭಕ್ತರು ಬಲಿಪಶುಗಳಾಗಿದ್ದಾರೆ. ಒಂದು ಲಡ್ಡುವೇ ಅಲ್ಲ, ಯಾವುದಾದರೂ ಕಲಬೆರಕೆ ನಡೆಯುತ್ತಿದೆ ಎಂದರೆ ಅದು ಲಾಭಕ್ಕಾಗಿಯೇ ತಾನೆ. ಗುಣಮಟ್ಟಕ್ಕಿಂತ ಕಲಬೆರಕೆ ಮಾಡುವುದು ಅದರ ತಯ್ಯಾರಿಕೆಯ ವೆಚ್ಚವನ್ನು ಕಡಿಮೆ ಮಾಡುತ್ತದೆ ಮತ್ತು ಇದರಿಂದ ಲಾಭ ಹೆಚ್ಚಾಗುತ್ತದೆ. ತಿರುಪತಿಗೆ ಸರಬರಾಜಾಗುತ್ತಿರುವ ಸರಕುಗಳಲ್ಲಿ ಗುಣಮಟ್ಟವಿಲ್ಲ ಎನ್ನುವುದಾದರೆ, ಅಲ್ಲಿನ ಭಕ್ತರ ಭಾವನೆಗಳಿಗಿಂತ ತಮ್ಮ ಲಾಭವೇ ಮುಖ್ಯ ಎಂದು ಕೆಲ ವ್ಯಾಪಾರಿಗಳು ಭಾವಿಸಿದ್ದಾರೆ ಎಂದಾಯಿತು. ಇಂತಹ ವಂಚಕರು ಲಾಭ ಬರುವುದಿದ್ದರೆ ಏನನ್ನಾದರೂ, ಯಾವುದಕ್ಕಾದರೂ ಕಲಬೆರಕೆ ಮಾಡುತ್ತಾರೆ. ಇವರ ಅಕ್ರಮಗಳನ್ನು ನೋಡಿಯೂ ಮೌನವಾಗಿದ್ದ ಟಿಟಿಡಿಯ ಮುಖ್ಯಸ್ಥರು, ಅದರ ಸದಸ್ಯರು ಮತ್ತು ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ ಎಂದಾಗುತ್ತದೆ.

ಗುಜರಾತ್ ಲ್ಯಾಬ್‌ಗೆ ಕಳುಹಿಸಿದ್ದೇಕೆ!!

ಈ ವರ್ಷ ಜೂನ್ 14ರಂದು ಟಿಟಿಡಿ ಇಒ ಆಗಿ ಅಧಿಕಾರ ವಹಿಸಿಕೊಂಡ ಶ್ಯಾಮಲಾ ರಾವ್, ಅದೇ ದಿನ ತಿರುಮಲದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡುತ್ತಾ, ಲಡ್ಡು ಗುಣಮಟ್ಟದ ಬಗ್ಗೆ ಭಕ್ತರು ಮತ್ತು ಲಡ್ಡು ತಯಾರಿಸುವ ಕಾರ್ಮಿಕರು ಅನೇಕ ಅನುಮಾನಗಳನ್ನು ವ್ಯಕ್ತಪಡಿಸುತ್ತಿದ್ದಾರೆಂದೂ, ಲಡ್ಡು ಗುಣಮಟ್ಟವನ್ನು ಕಾಪಾಡಿಕೊಳ್ಳುವಲ್ಲಿ ಯಾವುದೇ ರಾಜಿ ಇಲ್ಲ ಎಂದೂ ಘೋಷಿಸಿದರು. ಅವರು ಹೇಳಿದಂತೆ, ಎ.ಆರ್. ಡೈರಿ ಫುಡ್ಸ್ ಸರಬರಾಜು ಮಾಡಿದ ತುಪ್ಪದಿಂದ ನಾಲ್ಕು ಮಾದರಿಗಳನ್ನು ಗುಜರಾತಿನ ನ್ಯಾಷನಲ್ ಡೈರಿ ಡೆವಲಪ್ ಮೆಂಟ್ ಬೋರ್ಡ್‌ಗೆ ಸೇರಿದ ಸಿಎಎಲ್‌ಎಫ್‌ಗೆ ಕಳುಹಿಸಿದರು. ಆಂಧ್ರದಲ್ಲೇ ಹಲವು ಲ್ಯಾಬ್ ಗಳು ಲಭ್ಯವಿರುವಾಗ, ಯಾವತ್ತೂ ಕಳುಹಿಸದ ಈ ಗುಜರಾತ್ ಲ್ಯಾಬ್ ಗೆ ಸ್ಯಾಂಪಲ್ ಗಳನ್ನು ಏಕೆ ಕಳುಹಿಸಿದರು ಎಂಬ ಪ್ರಶ್ನೆ ಮೂಡುತ್ತದೆ. ಈ ತುಪ್ಪದಲ್ಲಿ ಸಸ್ಯಜನ್ಯ ಎಣ್ಣೆ, ಪ್ರಾಣಿಗಳ ಕೊಬ್ಬು, ಮೀನಿನ ಎಣ್ಣೆ ಮತ್ತಿತರ ಪದಾರ್ಥಗಳು ಕಲಬೆರಕೆಯಾಗಿದೆ ಎಂಬ ವರದಿಯನ್ನು ಎನ್‌ಡಿಡಿಬಿ ಕೊಟ್ಟಿದೆ ಎಂದು ತೆಲುಗು ದೇಶಂ ನಾಯಕರು, ಆ ನಂತರ ಟಿಟಿಡಿ ಇಒ ಸೆಪ್ಟೆಂಬರ್ 20ರಂದು ಪ್ರಕಟಿಸಿದರು. ತಕ್ಷಣವೇ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ನೀಡಿದ ಇದೇ ಹೇಳಿಕೆ ದೇಶದೆಲ್ಲೆಡೆ ಸಂಚಲನ ಉಂಟುಮಾಡಿತು.

ಏಳರಿಂದ ಎಂಟು ಹಂತಗಳಲ್ಲಿ ತಪಾಸಣೆ

ಇಲ್ಲಿಗೆ ಬರುವ ಭಕ್ತರು ಲಡ್ಡು ತೆಗೆದುಕೊಳ್ಳದೆ ವಾಪಸ್ ಹೋಗುವುದಿಲ್ಲ. ಅದಕ್ಕಾಗಿಯೇ ತಿರುಮಲದಲ್ಲಿ ಪ್ರತಿದಿನ ಸರಾಸರಿ 15 ಸಾವಿರ ಕೆಜಿ ತುಪ್ಪದಿಂದ ಸುಮಾರು ಮೂರೂವರೆ ಲಕ್ಷ ಲಡ್ಡುಗಳನ್ನು ತಯಾರಿಸಲಾಗುತ್ತದೆ. ಈ ಲಡ್ಡುಗಳನ್ನು ತಯಾರಿಸಲು ಕಡಲೆಬೇಳೆ ಹಿಟ್ಟು, ಸಕ್ಕರೆ, ಏಲಕ್ಕಿ, ಒಣದ್ರಾಕ್ಷಿ, ಕಲಕಂಡ ಮತ್ತು ಗೋಡಂಬಿ ಜೊತೆಗೆ ಹಸುವಿನ ತುಪ್ಪವನ್ನು ಬಳಸಲಾಗುತ್ತದೆ. ಈ ಎಲ್ಲಾ ಸರಕುಗಳನ್ನು ಟಿಟಿಡಿ ಆಡಳಿತ ಮಂಡಳಿಯು ಆರು ತಿಂಗಳಿಗೊಮ್ಮೆ ಇ–ಟೆಂಡರ್ ಮೂಲಕ ಖರೀದಿಸುತ್ತದೆ. ಒಳಬರುವ ಸರಕುಗಳ ಗುಣಮಟ್ಟವನ್ನು ಪರೀಕ್ಷಿಸಲು ಟಿಟಿಡಿ ಹಲವು ವರ್ಷಗಳ ಹಿಂದೆ ವ್ಯವಸ್ಥೆಯನ್ನು ಸ್ಥಾಪಿಸಿಕೊಂಡಿದೆ. ಏಳರಿಂದ ಎಂಟು ಹಂತಗಳಲ್ಲಿ ತಪಾಸಣೆ ಮಾಡಲಾಗುತ್ತದೆ.

ಪ್ರಸ್ತುತ ಐದು ಕಂಪನಿಗಳು ‘ಪ್ರೀಮಿಯರ್ ಅಗ್ರಿ ಫುಡ್ಸ್’, ಕೃಪರಮ್ ಡೈರಿ, ವೈಷ್ಣವಿ, ಶ್ರೀ ಪರಾಗ್ ಮಿಲ್ಕ್ ಮತ್ತು ಎಆರ್ ಡೈರಿ ಇವುಗಳು ಲಡ್ಡುಗಳಿಗೆ ಬಳಸುವ ತುಪ್ಪವನ್ನು ಪೂರೈಸುತ್ತಿವೆ. ಮಾರ್ಚ್ 12, 2024ರಂದು ನಡೆದ ಟೆಂಡರ್‌ಗಳಲ್ಲಿ ತುಪ್ಪ ಪೂರೈಕೆಯ ಗುತ್ತಿಗೆ ಪಡೆದ ತಮಿಳುನಾಡಿನ ಎಆರ್ ಡೈರಿ ಫುಡ್ಸ್ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್ ಕಂಪನಿಯು ಜುಲೈ 6 ಮತ್ತು ಜುಲೈ 12ರಂದು ತಿರುಮಲಕ್ಕೆ ನಾಲ್ಕು ಟ್ಯಾಂಕರ್ ತುಪ್ಪವನ್ನು ಕಳುಹಿಸಿದೆ. ಈ ತುಪ್ಪವೇ ಪ್ರಸ್ತುತ ವಿವಾದದ ಕೇಂದ್ರವಾಗಿದೆ. ತಿರುಮಲದಲ್ಲಿ ಲಡ್ಡು ತಯಾರಿಕೆ ಸೇರಿದಂತೆ, ದೇವಾಲಯದಲ್ಲಿ ಬಳಸುವ ಎಲ್ಲಾ ರೀತಿಯ ವಸ್ತುಗಳನ್ನು ಟೆಂಡರ್ ಮೂಲಕ ಖರೀದಿಸಲಾಗುತ್ತದೆ. ಕಡಿಮೆ ಬೆಲೆಗೆ ಟೆಂಡರ್ ಮಾಡಿದವರಿಂದ ಸರಕುಗಳನ್ನು ಖರೀದಿಸಲಾಗುತ್ತದೆ.

ತುಪ್ಪವನ್ನು ಪೂರೈಸುವ ಯಾವುದೇ ಕಂಪನಿಯು ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ (ಸಿಎಫ್‌ಟಿಆರ್‌ಐ) ಮೈಸೂರಿನಲ್ಲಿ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸುತ್ತದೆ ಮತ್ತು ಟ್ಯಾಂಕರ್ ತಿರುಪತಿಗೆ ಹೊರಡುವ ಮೊದಲು ಅದರ ಪ್ರಮಾಣಪತ್ರದೊಂದಿಗೆ ತಿರುಪತಿಗೆ ಬರುತ್ತದೆ. ಅಲ್ಲಿಗೆ ಬರುವ ಟ್ಯಾಂಕರ್‌ಗಳನ್ನು ಟಿಟಿಡಿ ತಹಶೀಲ್ದಾರರು ಒಮ್ಮೆ ತಿರುಮಲ ಬೆಟ್ಟದ ಕೆಳಗೆ, ಮತ್ತೊಮ್ಮೆ ತಿರುಮಲದಲ್ಲಿ ಗುಣಮಟ್ಟದ ಪರೀಕ್ಷೆ ಮಾಡುತ್ತಾರೆ. ಪ್ರಸ್ತುತ ಅಂತಹ ಪರೀಕ್ಷೆಗಳನ್ನು ನಡೆಸಲು ಸಿಎಫ್‌ಟಿಆರ್‌ಐನಲ್ಲಿ 12 ಲ್ಯಾಬ್ ತಜ್ಞರು ಮತ್ತು ಒಬ್ಬ ನಿವೃತ್ತ ಹಿರಿಯ ವಿಜ್ಞಾನಿ ಸೇರಿದಂತೆ 13 ಸಿಬ್ಬಂದಿ ಇದ್ದಾರೆ. ಸರಕುಗಳ ಗುಣಮಟ್ಟದ ಬಗ್ಗೆ ಅವರಿಗೆ ಯಾವುದೇ ಅನುಮಾನಗಳಿದ್ದರೆ, ಅವರು ಮಾದರಿಗಳನ್ನು ತೆಗೆದುಕೊಂಡು ದೃಢೀಕರಿಸಲು ವಿವಿಧ ಪ್ರಯೋಗಾಲಯಗಳಿಗೆ ಕಳುಹಿಸುತ್ತಾರೆ.

ಪ್ರಮುಖರಿಗೆ ತಿಳಿಯದಂತೆ ಏನನ್ನೂ ಖರೀದಿಸುವುದಿಲ್ಲ

ಕೇಂದ್ರ ಗೃಹ ಸಚಿವರ ಶಿಫಾರಸಿನ ಮೇರೆಗೆ ಏಳು ವರ್ಷಗಳಿಂದ ಟಿಟಿಡಿ ಆಡಳಿತ ಮಂಡಳಿ ಸದಸ್ಯರಾಗಿರುವ ಪ್ರಮುಖರಿಗೆ ತಿಳಿಯದಂತೆ ಏನನ್ನೂ ಖರೀದಿಸುವುದಿಲ್ಲ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಬಿಜೆಪಿ ಉನ್ನತ ನಾಯಕರಿಗೆ ಗೊತ್ತಿರುವ ಸತ್ಯ ಇದು. ಹಾಗಾಗಿಯೇ ಜಗನ್ ಮೋಹನ್ ರೆಡ್ಡಿಯವರ ‘ಟಿಟಿಡಿಯಲ್ಲಿ ಏನಾಗುತ್ತಿದೆ ಎಂದು ಬಿಜೆಪಿಗೆ ಗೊತ್ತಿಲ್ಲವೇ, ಅದರಲ್ಲಿ ನಿಮ್ಮ ಬಿಜೆಪಿಯ ಎಷ್ಟು ಮಂದಿ ಇದ್ದಾರೆ ಎಂದು ನಿಮಗೆ ಗೊತ್ತಿಲ್ಲವೇ’ ಎಂಬ ಪ್ರಶ್ನೆಗಳು ಸಾಮಾನ್ಯ ಭಕ್ತರಿಗೆ ಅರ್ಥವಾಗದಿದ್ದರೂ ಭಕ್ತರ ವೇಷದಲ್ಲಿರುವ ವಂಚಕರಿಗೆ ಚೆನ್ನಾಗಿ ಅರ್ಥವಾಗುತ್ತದೆ.

ಟಿಟಿಡಿ ಸದಸ್ಯರಾಗಿರುವ ಬಿಜೆಪಿ ನಾಯಕರು ಏನು ಮಾಡುತ್ತಿದ್ದರು?

ಟಿಟಿಡಿಯಲ್ಲಿ ಹಲವು ಅಕ್ರಮಗಳು ನಡೆಯುತ್ತಿದ್ದರೆ ಆ ಮಂಡಳಿಯ ಸದಸ್ಯರಾಗಿರುವ ಬಿಜೆಪಿ ನಾಯಕರು ಏನು ಮಾಡುತ್ತಿದ್ದರು? ಜುಲೈ 23 ರಂದೇ ರಾಷ್ಟ್ರೀಯ ಡೈರಿ ಅಭಿವೃದ್ಧಿ ಮಂಡಳಿ (ಎನ್‌ಡಿಡಿಬಿ) ವರದಿ ನೀಡಿದೆ. ಇದನ್ನು ಸುಮಾರು ಎರಡು ತಿಂಗಳ ಕಾಲ ಮುಚ್ಚಿಟ್ಟಿದ್ದೇಕೆ? ದೇಶಾದ್ಯಂತ ಚರ್ಚೆಯಾಗುತ್ತಿರುವ ಈ ಕಲಬೆರಕೆ ಪ್ರಕರಣದ ಬಗ್ಗೆ ಕಾನೂನು, ಅದರಲ್ಲೂ ದೇವಸ್ಥಾನದ ಅರ್ಚಕರು, ದೇವಸ್ಥಾನದ ತನಿಖಾಧಿಕಾರಿಗಳು ಮೌನವಾಗಿರುವುದೇಕೆ? ಇಂತಹ ಹಲವು ಅನುಮಾನಗಳನ್ನು ಕೂಡಲೇ ನಿವಾರಿಸಬೇಕಿದೆ.

ಲಡ್ಡು ಜತೆಗೆ ಟಿಟಿಡಿಯಲ್ಲಿ ನಡೆಯುತ್ತಿರುವ ಹಲವು ಭ್ರಷ್ಟಾಚಾರ, ಅವ್ಯವಹಾರಗಳ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು. ಅದಕ್ಕಾಗಿ ಕಾನೂನು ತನ್ನ ಕೆಲಸವನ್ನು ಮಾಡಬೇಕು. ಈ ಕೆಲಸವನ್ನು ಸರಿಯಾಗಿ ಮಾಡಬೇಕಾದ ಆಡಳಿತಗಾರರು ಅನ್ಯ ಧರ್ಮದವರನ್ನು ಕೆರಳಿಸುವ ಮಾತುಗಳನ್ನಾಡುವ ಮೂಲಕ ಧಾರ್ಮಿಕ ಸೌಹಾರ್ದತೆಗೆ ಧಕ್ಕೆ ತರುವ ಪ್ರಯತ್ನ ಮಾಡತೊಡಗಿದ್ದಾರೆ. ಇಂತಹ ಚಟುವಟಿಕೆಗಳು ಭಯೋತ್ಪಾದಕ ಸಂಘಟನೆಗಳ ಬಲವರ್ಧನೆಗೆ ಸಹಕಾರಿಯಾಗುತ್ತದೆ ಎಂಬ ಪ್ರಜ್ಞೆ ಇಲ್ಲದಂತೆ ಕೆಲವು ರಾಜಕೀಯ ಪಕ್ಷಗಳು ನಡೆದುಕೊಳ್ಳುತ್ತಿವೆ. ಮತಾಂಧ ಶಕ್ತಿಗಳು ಕೋಮುಗಲಭೆಗಳನ್ನು ಪ್ರಚೋದಿಸುವ ಅವಕಾಶವನ್ನಾಗಿ ಇದನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಿವೆ.

ಭಕ್ತರಿಗೆ ಬೇಕಾಗಿರುವುದು ಮತಾಂಧತೆ ಅಲ್ಲ. ಸವಾಲುಗಳು, ಪ್ರತಿ ಸವಾಲುಗಳಲ್ಲ. ದೀಕ್ಷೆಗಳು ಮತ್ತು ಪ್ರಮಾಣಗಳು ಬೇಕಿಲ್ಲ. ಜನರಿಗೆ ನಿಜ ಏನೆಂದು ತಿಳಿಯಬೇಕು. ಲಡ್ಡು ತಯಾರಿಕೆಯಲ್ಲಿ ಏನು ನಡೆದಿದೆ ಎಂಬುದು ತಿಳಿಯಬೇಕು. ಆ ಸತ್ಯವನ್ನು ತಜ್ಞರ ಪರೀಕ್ಷೆಗಳಿಂದ ದೃಢಪಡಿಸಬೇಕಾಗಿದೆ. ಸತ್ಯ ಹೊರಬರುವವರೆಗೂ ರಾಜಕಾರಣಿಗಳ ಬಾಯಿ ಮುಚ್ಚಿಸಬೇಕು, ಮತಾಂಧತೆಯ ಹುಚ್ಚಾಟಿಕೆ ಹೇಳಿಕೆಗಳಿಗೆ ಕಡಿವಾಣ ಹಾಕಬೇಕು. ರಾಜಕಾರಣಿಗಳ ಈ ಷಡ್ಯಂತ್ರಗಳಿಗೆ ಬಲಿಯಾಗದಂತೆ ಜನರು ಮತ್ತು ಭಕ್ತರನ್ನು ರಕ್ಷಿಸಬೇಕಿದೆ.

–ಸಿ.ಸಿದ್ದಯ್ಯ

ಮುಡಾ ಹಗರಣ: ರಾಜಕೀಯ ಷಡ್ಯಂತ್ರದ ಮೇಲಾಟಗಳು

ಸಂಪಾದಕೀಯ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ದ ನಿವೇಶನ ಹಂಚಿಕೆಯ ವಿವಾದದ ಪ್ರಕರಣದಲ್ಲಿ ಮೊಕದ್ದಮೆ ದಾಖಲಿಸಲು ರಾಜ್ಯಪಾಲರು ಅನುಮತಿ ನೀಡಿದ ಕ್ರಮವನ್ನು ಹೈಕೋರ್ಟ್ ಎತ್ತಿ ಹಿಡಿದ ಬಳಿಕ ಬೆಳವಣಿಗೆಗಳು ತೀವ್ರಗೊಂಡಿವೆ. ಇದನ್ನು ಅನುಸರಿಸಿ ಮೈಸೂರಿನ ಲೋಕಾಯುಕ್ತ ಅಧಿಕಾರಿ ಪ್ರಕರಣ ದಾಖಲಿಸಿಕೊಂಡು ವಿಚಾರಣಾ ಪ್ರಕ್ರಿಯೆಯನ್ನು ಅರಂಭಿಸಿದ್ದಾರೆ. ಇವೆಲ್ಲ ಸಹಜವಾದ ಪ್ರಕ್ರಿಯೆಗಳು ಎನ್ನಬಹುದಾದರೂ ಪ್ರಕರಣ ಇಷ್ಟಕ್ಕೆ ನಿಂತಿಲ್ಲ. ಕಾನೂನಾತ್ಮಕ ಪ್ರಕ್ರಿಯೆಯ ಮೂಲಕ ತನಿಖೆ, ಆದ ತಪ್ಪುಗಳು, ತಪ್ಪಿತಸ್ಥರನ್ನು ಪತ್ತೆ ಮಾಡುವ ಇಲ್ಲವೇ ನಿಜವನ್ನು ತೆರೆದು ತೋರುವುದಕ್ಕೆ, ಸಾರ್ವಜನಿಕ ಹಿತಾಸಕ್ತಿಯ ರಕ್ಷಣೆಗೆ ಈ ಕ್ರಮಗಳು ಸೀಮಿತವಾಗಿರುತ್ತವೆಯೇ ಎನ್ನುವ ಪ್ರಶ್ನೆ ಏಳುತ್ತದೆ. ಈಗ ಆಗುತ್ತಿರುವ ಬೆಳವಣಿಗೆಗಳನ್ನು ಗಮನಿಸಿದರೆ ಅವೆಲ್ಲವನ್ನೂ ಮೀರಿದ ಸಂಕುಚಿತ ರಾಜಕೀಯ ಉದ್ದೇಶ ಸಾಧನೆಯೇ ಮೇಲುಗೈ ಪಡೆಯುತ್ತಿರುವಂತೆ ಕಾಣುತ್ತಿದೆ.

'ಮುಡಾ'ದ ವಿವಾದ ಸಾರ್ವಜನಿಕವಾಗಿ ಹೊರ ಬಂದ ಆರಂಭದಿಂದಲೂ ಮುಖ್ಯಮಂತ್ರಿ ಸಿದ್ಧರಾಮಯ್ಯ ನವರ ರಾಜೀನಾಮೆ ಕೇಳುತ್ತಿರುವ ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿ ಎಸ್ ಗಳು ಮತ್ತಷ್ಟೂ ಅಬ್ಬರ ಮಾಡುತ್ತಿವೆ. ಮುಖ್ಯಮಂತ್ರಿಗಳ ಪಾತ್ರ ನೇರ ಇಲ್ಲ ಎನ್ನುತ್ತಿರುವಾಗಲೇ, ಅಧಿಕಾರದಲ್ಲಿ ಅವರು ಇದ್ದುದರಿಂದ ಪ್ರಭಾವ ಬೀರಿದ ಸಾಧ್ಯತೆಗಳ ಬಗ್ಗೆ ತನಿಖೆ ನಡೆಸಲು ನ್ಯಾಯಾಲಯ ಸೂಚಿಸಿದೆ. ಈಗಾಗಲೇ ರಾಜ್ಯ ಸರ್ಕಾರವೇ ನಿವೃತ್ತ ನ್ಯಾಯಮೂರ್ತಿ ದೇಸಾಯಿಯವರ ವಿಚಾರಣಾ ಆಯೋಗ ರಚಿಸಿರುವಾಗಲೂ ಜನಪ್ರಾತಿನಿಧ್ಯ ಕಾನೂನಿನಂತೆ ವಿಚಾರಣೆ ನಡೆಸಲಾಗುವುದು. ಹೀಗಿರುವಾಗಲೇ ಕೇಂದ್ರದ ಜಾರಿ ನಿರ್ದೇಶನಾಲಯವೂ ಸಿದ್ಧರಾಮಯ್ಯನವರನ್ನು ವಿಚಾರಣೆಗೆ ಒಳಪಡಿಸುವುದರ ಔಚಿತ್ಯ ಏನಿದೆ? ಇ.ಡಿ. ವಿಚಾರಣೆ, ಸಿ.ಬಿ.ಐ. ವಿಚಾರಣೆ ಎಮ್ನುವುದು ಒಂದು ಸಹಜ ನ್ಯಾಯ ಪಡೆಯಲು ಎನ್ನುವುದಕ್ಕಿಂತ ರಾಜಕೀಯ ಸೇಡಿನ ಬಳಕೆಗೆ ದುರುಪಯೋಗ ಆಗುತ್ತಿರುವುದು ಇಂದಿನ ವಾಸ್ತವ. ಇದಕ್ಕೆ ಸರಿ ಹೊಂದುವಂತೆ ವಿರೋಧ ಪಕ್ಷಗಳ ಎಲ್ಲೆ ಮೀರಿದ ಷಡ್ಯಂತ್ರದ ವಾಗ್ಯುದ್ಧದ ಧಾಳಿಗಳು ನಡೆಯುತ್ತಿವೆ. ಪರಿಹಾರಾರ್ಥವಾಗಿ ನಿವೇಶನ ಪಡೆದ ಪಾರ್ವತಿಯವರು ಬೆಳೆಯುತ್ತಿರುವ ವಿವಾದದ ಸ್ವರೂಪದಿಂದ ನೊಂದು ಅವನ್ನು ಮುಡಾಕ್ಕೆ ಹಿಂತಿರುಗಿಸಿರುವುದನ್ನು ಸಹ ಅಕ್ರಮ ನಡೆದಿದೆ ಎನ್ನುವುದನ್ನು ಒಪ್ಪಿಕೊಂಡಂತೆ ಆಗಿದೆ ಎಂದೂ ಬಿಜೆಪಿ ನಾಯಕರು ವ್ಯಾಖ್ಯಾನಿಸಲಾಗುತ್ತಿದ್ದಾರೆ. ಇದು ಒಂದು ಅಪವ್ಯಾಖ್ಯಾನ ಎಂದೇ ಹೇಳಬೇಕಾಗುತ್ತದೆ. ಯಾಕೆಂದರೆ ಒಂದು ವೇಳೆ ನಿವೇಶನಗಳ ಹಂಚಿಕೆಯಲ್ಲಿ ಅಕ್ರಮ ಅಥವಾ ಸ್ವಹಿತಾಸಕ್ತಿಯ ಪ್ರಭಾವಗಳು ನಡೆದಿದ್ದರೆ ಅದರ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಿ ನಿರ್ಧಾರ ಕೈಗೊಳ್ಳಬೇಕಾಗಿರುವುದು ಮುಡ–ಮಂಡಳಿ. ಅದಕ್ಕೆ ಫಲಾನುಭವಿ ಅನುವು ಮಾಡಿಕೊಡುವುದು ಸಹ ಸೂಕ್ತವಾದದ್ದು.

ಇದೇ ಹೊತ್ತಿನಲ್ಲಿ ಕೇಂದ್ರದ ಕೈಗಾರಿಕಾ ಸಚಿವ ಮಾಜಿ ಮುಖ್ಯಮಂತ್ರಿ ಎಚ್ ಡಿ ಕುಮಾರಸ್ವಾಮಿಯವರು ಬೆಂಗಳೂರಿನ ರೌಡಿಶೀಟರ್ ಅಮಾನತುಗೊಂಡ ಮತ್ತೊಂದಡೆಯಲ್ಲಿ

ರೌಡಿಶೀಟರ್ ರಾಜ್ಯಪಾಲರು ಮತ್ತು ಅಮಾನತುಗೊಂಡ ಪೊಲೀಸ್ ಇನ್ಸ್‌ಪೆಕ್ಟರ್ ಒಬ್ಬರನ್ನ ಬಳಸಿಕೊಂಡು ಲೋಕಾಯುಕ್ತ ಎಡಿಜಿಪಿ– ತನಿಖಾಧಿಕಾರಿ ಚಂದ್ರಶೇಖರ್ ಐಪಿಎಸ್ ರವರ ಮೇಲೆ ತೀವ್ರತರ ದಾಳಿಯನ್ನು ನಡೆಸಿರುವುದು ಖಂಡನೀಯ. ಬೆಂಗಳೂರಿನ ತಣಿಸಂದ್ರದಲ್ಲಿನ 3.8 ಎಕರೆ ಡಿನೋಟಿಫಿಕೇಷನ್ ಪ್ರಕರಣದ ವಿಚಾರಣಾಧಿಕಾರಿ ಆಗಿರುವವರ ಮೇಲೆ ಇಂತಹ ದಾಳಿಗಳನ್ನು ನಡೆಸಿ ಅಧೀರರಾಗುವಂತೆ ಒತ್ತಡ ಹೇರುವುದು ಬ್ಲಾಕ್ ಮೇಲ್ ತಂತ್ರದ ಭಾಗವೆಂದೇ ಭಾವಿಸಬೇಕಾಗುತ್ತದೆ. ವಿಚಾರಣೆ ಅವರ ಮೇಲೆ ಬಾಕಿ ಇರುವಾಗ ಅದನ್ನು ಒಪ್ಪಿಕೊಂಡು ಆ ವಿಚಾರಣೆಗೆ ಎಲ್ಲ ರೀತಿಯಿಂದಲೂ ಸಹಕಾರ ಕೊಡಬೇಕಾಗಿರುವುದು ಒಬ್ಬ ನಾಗರಿಕನ ಕರ್ತವ್ಯ. ಅದರಲ್ಲೂ ಸಂವಿಧಾನದ ಮೇಲೆ ಪ್ರಮಾಣ ಮಾಡಿ ಕಾನೂನು ಸಂವಿಧಾನವನ್ನ ಪಾಲಿಸುವುದಾಗಿ ಹೇಳಿದ ಸಚಿವ ಕುಮಾರಸ್ವಾಮಿಯವರಿಗೆ ಅತಿ ಹೆಚ್ಚಿನ ಹೊಣೆಗಾರಿಕೆ ಇದೆ. ಈಗಿನ ಅವರ ವರ್ತನೆ ನಾಗರಿಕ ನಡವಳಿಕೆಗೆ ವಿರುದ್ಧವಾದುದು ಮತ್ತು ಅವರು ಎಸೆಗಿರುವ ತಪ್ಪು ಹಾಗೂ ಅಕ್ರಮದ ವಿಷಯದಲ್ಲಿ ವಾಸ್ತವಿಕ ವಿಚಾರಗಳು ಹೊರಬರಬಹುದೇ ಎಂದು ಭಯಪಟ್ಟಿರುವುದು ಕೂಡ ಕಾಣುತ್ತದೆ. ಈ ಹಿನ್ನೆಲೆಯಲ್ಲಿ ಕುಮಾರಸ್ವಾಮಿ ಅವರು ಸೌಜನ್ಯ ಮೀರಿದ ಮತ್ತು ಬ್ಲಾಕ್ ಮೇಲ್ ತಂತ್ರದ ನೇರ ದಾಳಿಗಳಿಗೆ ಇಳಿಯುವುದು ಕೂಡಲೇ ನಿಲ್ಲಿಸಬೇಕು. ಅವರ ನಡೆ ವಿಚಾರಣಾ ಅಧಿಕಾರಿಗಳನ್ನು ಹೆದರಿಸುವ ಒಂದು ತಂತ್ರವಾಗಿದೆ. ಕುಮಾರಸ್ವಾಮಿ ಯವರ ವರ್ತನೆಗಳು ಅಪಾರ್ಥಕ್ಕೆ ಎಡೆ ಮಾಡುವಂತಿವೆ.

ಇದೇ ಹೊತ್ತಿನಲ್ಲಿ ಕುಮಾರಸ್ವಾಮಿಯವರ ಟೀಕೆಗಳಿಗೆ ಅಧಿಕಾರಿ ಚಂದ್ರಶೇಖರ್ ಅವರು ತಮ್ಮ ಟೀಕೆ ಅಥವಾ ಪ್ರತ್ಯುತ್ತರ ಬಹಿರಂಗವಾಗಲು ಅವಕಾಶ ನೀಡಬಾರದಾಗಿತ್ತು. ಮತ್ತು ಅವರಿಗೆ ವಹಿಸಲಾದ ಕರ್ತವ್ಯವನ್ನು ಸಮಚಿತ್ತದಿಂದ ನಡೆಸಿಕೊಂಡು ಹೋಗಬೇಕಾದದ್ದು ಅತ್ಯಗತ್ಯ.

ಇಲ್ಲಿ ಮತ್ತೊಂದು ಸಂಗತಿಯನ್ನು ಗಮನಿಸುವುದು ಅಗತ್ಯ.

ಮುಡಾ ಚಾರ್ಜ್ ಶೀಟ್ ಹಾಕುವಾಗ ಮೇಲ್ನೋಟಕ್ಕೆ ಸಿದ್ದರಾಮಯ್ಯನವರ ಪಾತ್ರ ಇದೆ ಎಂದು ಕಂಡು ಬಂದಲ್ಲಿ ರಾಜಿನಾಮೆ ಕೊಡ ಬೇಕಾಗಬಹುದು. ಸಿ.ಎಂ. ಅವರಿಗೆ ಬಹುದೊಡ್ಡ ನೈತಿಕ ಪ್ರಶ್ನೆಯಾಗಿ ಇದು ಉದ್ಭವಿಸುತ್ತದೆ.

ಕರ್ನಾಟಕದ ಇಂದಿನ ದುರಂತ ಎಂದರೆ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಚುನಾಯಿತವಾದ, ಅತ್ಯಂತ ಹೆಚ್ಚಿನ ಬಹುಮತ ಇರುವ ವಿರೋಧ ಪಕ್ಷದ ಒಂದು ಸರ್ಕಾರವನ್ನು ಉರುಳಿಸಲು ಇನ್ನಿಲ್ಲದ ಕಸರತ್ತನ್ನು ನಡೆಸುತ್ತಿದ್ದಾರೆ ಎನ್ನುವುದು ಸ್ಪಷ್ಟವಾಗಿ ಕಾಣುತ್ತದೆ. ಇದರಲ್ಲಿ ನೇರವಾಗಿ, ಪ್ರಧಾನಿ ಹಾಗೂ ಗೃಹ ಸಚಿವರು ಭಾಗಿಯಾಗಿರುವುದು ಕಾಣುತ್ತದೆ. ಇಲ್ಲಿನ ಸರ್ಕಾರವನ್ನು ಉರುಳಿಸಲು ಸಾವಿರ ಕೋಟಿ ರೂಪಾಯಿಗಳನ್ನು ಇಟ್ಟುಕೊಂಡು ಪ್ರಯತ್ನಿಸುತ್ತಿದ್ದಾರೆ ಎನ್ನುವ ಮಾತನ್ನು ಬಿಜೆಪಿಯ ಹಿರಿಯ ನಾಯಕ, ಶಾಸಕ ಬಸವರಾಜ ಪಾಟೀಲ್ ಯತ್ನಾಳ್ ಹೇಳಿರುವುದು ಒಂದು ಗಂಭೀರವಾದ ವಿಚಾರ. ಈ ಅಧಿಕಾರ ದಾಹದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಜನಸಾಮಾನ್ಯರು ಅನುಭವಿಸುತ್ತಿರುವ ಯಾವ ಪ್ರಶ್ನೆಗಳಿಗೂ ಗಮನ ನೀಡದೆ ಸರ್ಕಾರ ಅತಂತ್ರವಾಗಿದೆ ಎನ್ನುವ ಭಾವನೆಯನ್ನು ಹುಟ್ಟು ಹಾಕುವ ಮೂಲಕ ಇಡೀ ಸರ್ಕಾರದ ಆಡಳಿತ ಯಂತ್ರ ಗರ ಬಡಿದಂತಾಗಲು ಬಿಜೆಪಿ ಜೆಡಿಎಸ್ ಪಕ್ಷಗಳು ಪ್ರಯತ್ನಿಸುತ್ತಿರುವುದು ತೀವ್ರ ಖಂಡನೀಯ. ಕರ್ನಾಟಕದ ಜನತೆ ಈ ಎಲ್ಲ ನಕಾರಾತ್ಮಕ ಬೆಳವಣಿಗೆಗಳನ್ನು ಅರ್ಥ ಮಾಡಿಕೊಳ್ಳಬೇಕು ಮತ್ತು ಕ್ರಿಯಾಶೀಲವಾಗಿ ಪ್ರತಿಕ್ರಿಯಿಸಬೇಕು. ಇದು ನಾಗರಿಕರ ಮೇಲಿನ ಅತಿ ದೊಡ್ಡ ಹೊಣೆಗಾರಿಕೆಯಾಗಿದೆ.

'ಸೌಹಾರ್ದ ಕರ್ನಾಟಕ'ದ ಮುಂದಿನ ಕ್ರಿಯಾ ಯೋಜನೆ

'ಸೌಹಾರ್ದ ಕರ್ನಾಟಕ'ದ ವತಿಯಿಂದ ಸಂಘಟಿಸಲಾದ 'ಸೌಹಾರ್ದತೆ: ವೈವಿಧ್ಯತೆ' ರಾಜ್ಯ ಮಟ್ಟದ ಚಿಂತನ ಶಿಬಿರ ಇದೇ ಸೆಪ್ಟಂಬರ್ 28 ಮತ್ತು 29, 2024 ರಂದು ಬೆಂಗಳೂರಿನಲ್ಲಿ ನಡೆಯಿತು. ಈ ಶಿಬಿರದಲ್ಲಿ ಚರ್ಚಿಸಿ ಅಂಗೀಕರಿಸಲಾದ ಕ್ರಿಯಾ ಯೋಜನೆ ಇಲ್ಲಿದೆ.

ಸಮಾರೋಪ ಸಮಾರಂಭಕ್ಕೆ ಮುಂಚೆ ವಿವಿಧ ಗೋಷ್ಠಿಗಳ ಕೊನೆಯಲ್ಲಿ 'ಸೌಹಾರ್ದ ಚಳವಳಿ ಮುನ್ನೋಟ' ಎಂಬ ಭವಿಷ್ಯದ ಕ್ರಿಯಾ ಯೋಜನೆಯ ಮೇಲಿನ ಗೋಷ್ಠಿ ನಡೆಯಿತು. ಮೊದಲಿಗೆ 'ಸೌಹಾರ್ದ ಚಳವಳಿ ಮುನ್ನೋಟ' ಕುರಿತು ಲಿಖಿತ ಕರಡನ್ನು ಸೌಹಾರ್ದ ಕರ್ನಾಟಕದ ಸಂಯೋಜಕರಾದ ಬಿ. ರಾಜಶೇಖರಮೂರ್ತಿ ಮಂಡಿಸಿದರು. ವಿವಿಧ ಜಿಲ್ಲೆಗಳು ಹಾಗೂ ವಿವಿಧ ವಿಭಾಗಗಳನ್ನು ಪ್ರತಿನಿಧಿಸಿ ಪಾಲ್ಗೊಂಡಿದ್ದ ಪ್ರತಿನಿಧಿಗಳು ಕರಡು ಸೂಚನೆಗೆ ಪೂರಕವಾಗಿ ಪ್ರತಿಕ್ರಿಯೆ ನೀಡಿ ಚರ್ಚಿಸಿ ಯೋಜನೆಯನ್ನು ಶ್ರೀಮಂತಗೊಳಿಸಿದರು. ನಂತರ 'ಮಾತುಕತೆ' ಮಾಸಿಕದ ಸಂಪಾದಕಿ ಡಾ. ರೀಟಾ ರಿನಿ ಅವರು ಕರಡು ವರದಿ ಹಾಗೂ ಕರಡು ವರದಿಗೆ ಸ್ಪಂದಿಸಿ ಮಾತನಾಡಿದರು. ಸಮಕಾಲೀನ ಸಾಮಾಜಿಕ ಸಾಂಸ್ಕೃತಿಕ ವೇದಿಕೆಯ ಅಧ್ಯಕ್ಷರು, ಚಿಂತಕರೂ ಆದ ಡಾ.ಬಿ.ಆರ್. ಮಂಜುನಾಥ್ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು.

ಶಿಬಿರಾರ್ಥಿಗಳ ಮತ್ತು ವಿವಿಧ ಚಿಂತಕರ ಸಲಹೆಗಳನ್ನಾಧರಿಸಿ ವಿದ್ಯಾರ್ಥಿ ಯುವಜನರಿಗೆ ಸೌಹಾರ್ದ ಸಂದೇಶವನ್ನು ತಲುಪಿಸುವಂತಹ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಬೇಕು, ಸಾಮಾಜಿಕ ಮಾಧ್ಯಮದಲ್ಲಿ ಕೋಮುವಾದಿ ಪ್ರಚಾರಗಳಿಗೆ ಸಮರ್ಥ ಪ್ರತ್ಯುತ್ತರ ನೀಡುವಂತಹ ಪ್ರಚಾರ ಸಾಹಿತ್ಯವನ್ನು ರೂಪಿಸಿ ಪಸರಿಸಬೇಕು ಎಂಬುದು ಸೇರಿದಂತೆ ಸಮಾಜದ ಎಲ್ಲಾ ಜನಪರ ವಿಭಾಗಗಳನ್ನು ಒಂದಡೆ ಐಕ್ಯವಾಗಿ ಅಣಿನೆರಸಿ 'ಸೌಹಾರ್ದ ಕರ್ನಾಟಕವಾಗಿ' ಧರ್ಮ ಮತ್ತು ಜಾತಿ, ಕೋಮುವಾದಗಳಿಂದ ಪರಸ್ಪರ ಕಚ್ಚಾಡುವುದನ್ನು ನಿಲ್ಲಿಸಿ, ಎಲ್ಲಾ ಜನ ವಿಭಾಗದ ಸಮಸ್ಯೆಗಳ ಪರಿಹಾರೋಪಾಯಗಳಿಗೆ ಪೂರಕ ದಾರಿಯ ಕಡೆ ಸಾಗುವಂತಹ ರೀತಿಯಲ್ಲಿ ಸೌಹಾರ್ದ ಕರ್ನಾಟಕ ಕಾರ್ಯ ಚಟುವಟಿಕೆಗಳನ್ನು ರೂಪಿಸುವ ಉದ್ದೇಶದೊಂದಿಗೆ ಈ ಕೆಳಕಂಡಂತೆ ಕಾರ್ಯಯೋಜನೆಯನ್ನು ಅಂಗೀಕರಿಸಲಾಗಿದೆ. ವಿವಿಧ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ.

ಕಾರ್ಯ ಯೋಜನೆ


1. ಎಲ್ಲಾ ಪ್ರಮುಖ ಜನಪರ ಸಂಘಟನೆಗಳು–ವ್ಯಕ್ತಿಗಳನ್ನು ಸೇರಿಸಿ ತಾಲ್ಲೂಕು–ಜಿಲ್ಲಾ ಕೇಂದ್ರಗಳಲ್ಲಿ ಸೌಹಾರ್ದ ಸಭೆಗಳನ್ನು ನಡೆಸುವುದು. (ಸೌಹಾರ್ದ ಕರ್ನಾಟಕ ಚಹ ಕೂಟ, ಸೌಹಾರ್ದ ಕರ್ನಾಟಕ ಸಂಜೆ ಕೂಟ ಇತ್ಯಾದಿ)
2. ಜಿಲ್ಲಾ ಮಟ್ಟದ ಚಿಂತನಾ ಗೋಷ್ಠಿಗಳನ್ನು ನಡೆಸುವುದು (ಸ್ಥಳೀಯ ಮತ್ತು ರಾಜ್ಯ ಮಟ್ಟದ ಸಾಹಿತಿ, ಕಲಾವಿದರು ಸೇರಿದಂತೆ ಎಲ್ಲಾ ಜನ ವಿಭಾಗಗಳನ್ನು ಸೇರಿಸುವುದು)
3. ಜಿಲ್ಲಾ ಸೌಹಾರ್ದ ತಾಣಗಳ ಭೇಟಿ (ರಾಜ್ಯ ಕೇಂದ್ರ ಸೌಹಾರ್ದ ಸಂಗಾತಿಗಳ ಜೊತೆ, ಸ್ಥಳೀಯರೂ ಸೇರಿಕೊಂಡು ಹಗಲು–ರಾತ್ರಿ ತಂಗುದಾಣವಾಗಿಸಿಕೊಂಡು ಅಲ್ಲಿಯ ಸ್ಥಳದ ಸೌಹಾರ್ದ ಪರರಂಪರೆಯ ಇತಿಹಾಸವನ್ನು ಅಧ್ಯಯನ ಮಾಡುವುದು, ಜನರೊಟ್ಟಿಗೆ ಸಂವಾದ ನಡೆಸುವುದು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದು.)
4. ಜಿಲ್ಲಾ ಸೌಹಾರ್ದ ಕರ್ನಾಟಕದಿಂದ ಗಾಂಧಿ ಜಯಂತಿ, ಗಾಂಧಿ ಹುತಾತ್ಮ ದಿನ ಹಾಗೂ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ ದಿನದ ಮಹತ್ವಗಳನ್ನು ಹಾಗೂ ಆಗಸ್ಟ್ 9 ರಂದು 'ಯುದ್ಧ ಬೇಡ ಶಾಂತಿ ಬೇಕು' ಎಂಬ ಹೆಸರಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸುವುದು.
5. ದಸರಾ, ದೀಪಾವಳಿ, ರಂಜಾನ್, ಕ್ರಿಸ್ಮಸ್, ಯುಗಾದಿ ಹಬ್ಬಗಳನ್ನು ಸೌಹಾರ್ದ ಹಬ್ಬಗಳನ್ನಾಗಿಸಿ, ಸೌಹಾರ್ದ ಭೋಜನ ಕೂಟಗಳನ್ನು ಆಯೋಜಿಸುವುದು.
6. ಸೌಹಾರ್ದ ಸಾಹಿತ್ಯ ಗೋಷ್ಠಿ, ಕವಿ ಗೋಷ್ಠಿ, ಗೀತಗಾಯನ, ನಾಟಕೋತ್ಸವಗಳು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದು.

ರಾಜ್ಯಮಟ್ಟದಲ್ಲಿ

1. ಸೌಹಾರ್ದತೆ–ಸಾಮರಸ್ಯಕ್ಕೆ ಹೆಸರಾಗಿರುವ ಕಲ್ಯಾಣ ಕರ್ನಾಟಕದಲ್ಲಿ ವಚನಗಳ ಮೂಲಕ ಸೌಹಾರ್ದತೆ ಸಾರುವ ಕಾರ್ಯಕ್ರಮವನ್ನು ಆಯೋಜಿಸಿ, ವಚನಗಳ ಮೂಲಕ ಸೌಹಾರ್ದತೆಯನ್ನು ಸಾರುವ ಜನಾಂದೋಲವನ್ನು ರಾಜ್ಯ ಮಟ್ಟದಲ್ಲಿ ರೂಪಿಸುವುದು.
2. ಉತ್ತರ ಕರ್ನಾಟಕದಲ್ಲಿ ಶಿಶುನಾಳ ಶರೀಫ ಮುಂತಾದ ಸೌಹಾರ್ದ ಸಂತರ ಸಾಹಿತ್ಯವನ್ನು ಪ್ರಚಾರ ಪಡಿಸುವಂತಹ ರಾಜ್ಯಮಟ್ಟದ ಕಾರ್ಯಕ್ರಮ ರೂಪಿಸುವುದು.
3. ಮೈಸೂರು ಜಿಲ್ಲೆಯಲ್ಲಿ ಕುವೆಂಪು ಅವರ ಸರ್ವಜನಾಂಗದ ಶಾಂತಿಯ ತೋಟದ ಆಶಯವನ್ನು ಪ್ರಚಾರಪಡಿಸುವುದು.
4. ಕರಾವಳಿ ಪ್ರದೇಶದಲ್ಲಿ ಶಾಂತಿ ಸೌಹಾರ್ದತೆಗೆ ಹೆಸರಾಗಿರುವ ಪರಂಪರೆಯನ್ನು ಪ್ರಚಾರಪಡಿಸುವ ಕಾರ್ಯ ಯೋಜನೆಗಳನ್ನು ರೂಪಿಸುವುದು.
5. ರಾಜ್ಯಮಟ್ಟದಲ್ಲಿ ನೂರು ಜನ ಆಯ್ದ ಯುವ ಬರಹಗಾರರ ಸೌಹಾರ್ದ ಸಾಹಿತ್ಯ ರಚನಾ ಕಾರ್ಯಾಗಾರ ನಡೆಸುವುದು.
6. ಪ್ರತಿಧರ್ಮದ ಮಾನವೀಯ ಮೌಲ್ಯಗಳನ್ನು ಆಧರಿಸಿದ ಆಚರಣೆಗಳನ್ನು, ಪರಸ್ಪರ ಅರಿಯುವಂತಹ ಕಾರ್ಯಕ್ರಮಗಳನ್ನು ರಾಷ್ಟ್ರ ಮಟ್ಟದಲ್ಲಿ ರೂಪಿಸುವುದು.
7. ಜಿಲ್ಲಾ–ರಾಜ್ಯ ಮಟ್ಟದಲ್ಲಿ ಎಲ್ಲಾ ಸಾಹಿತಿ–ಕಲಾವಿದರನ್ನು (ಎಲ್ಲ ವಿಧದ ಮೂಲಭೂತವಾದಿಗಳನ್ನು ಹೊರತುಪಡಿಸಿ ಸೌಹಾರ್ದ ಕರ್ನಾಟಕದಡಿ ಐಕ್ಯಗೊಳಿಸುವುದು.



ಕಾರ್ಲ್ ಮಾರ್ಕ್ಸ್ ಅವರ ಜನ್ಮದ್ವಿಶತಾಬ್ಧಿ ಆಚರಣೆಯ ಸಂದರ್ಭದಲ್ಲಿ ಅವರ ಜನ್ಮದಿನ ಮೇ 5ರಂದು, ಮಾರ್ಕ್ಸ್ ರವರ ಕ್ರಾಂತಿಕಾರಿ ಚಟುವಟಿಕೆಗಳ, ಅಧ್ಯಯನಗಳ ಪ್ರಮುಖ ಕೇಂದ್ರವಾಗಿದ್ದ, ಮತ್ತು ಅವರು ಮಾರ್ಚ್ 14, 1883 ರಂದು ಕೊನೆಯುಸಿರೆಳೆದ ಲಂಡನ್ ನಲ್ಲಿ ಮಾರ್ಕ್ಸ್ ಮೆಮೋರಿಯಲ್ ಲೈಬ್ರೆರಿ "ಮಾರ್ಕ್ಸ್ 200: ಅಂತರ್ರಾಷ್ಟ್ರೀಯ ಸಮ್ಮೇಳನ"ವನ್ನು ಏರ್ಪಡಿಸಿತ್ತು. "ಮಾರ್ಕ್ಸ್‌ವಾದ ಬದಲಾವಣೆಯ ಒಂದು ಶಕ್ತಿಯಾಗಿ ಇಂದು" ಎಂಬ ವಿಷಯ ಕುರಿತ ಪ್ಲೆನರಿ ಅಧಿವೇಶನದಲ್ಲಿ ಮಾತನಾಡಲು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿಯವರನ್ನು ಆಹ್ವಾನಿಸಲಾಗಿತ್ತು. ವಿಶ್ವದ ಮೂಲೆ–ಮೂಲೆಗಳಿಂದ ಬಂದಿದ್ದ ಮಾರ್ಕ್ಸ್‌ವಾದಿಗಳು, ಇತರ ಚಿಂತಕರು ಮತ್ತು ದುಡಿಯುವ ಜನಗಳಿಗೆ ಮತ್ತು ಈ ಸ್ಮಾರಕ ಸಮ್ಮೇಳನವನ್ನು ಏರ್ಪಡಿಸಿದ್ದ ಸಂಘಟಕರಿಗೆ ಭಾರತೀಯ ಕಮ್ಯುನಿಸ್ಟರ ಪರವಾಗಿ ಕ್ರಾಂತಿಕಾರಿ ಶುಭಾಶಯಗಳನ್ನು ಕೋರುತ್ತ, ಯೆಚೂರಿಯವರು ಮಾಡಿದ ಭಾಷಣದ ಅನುವಾದವನ್ನು ನಮ್ಮ ಓದುಗರಿಗಾಗಿ ಇಲ್ಲಿ ಪ್ರಸ್ತುತ ಪಡಿಸುತ್ತಿದ್ದೇವೆ.



ಮಾರ್ಕ್ಸ್‌ವಾದ ಬದಲಾವಣೆಯ ಒಂದು ಶಕ್ತಿಯಾಗಿ ಇಂದು

ಆರಂಭದಲ್ಲಿ, ಭಾರತೀಯ ಕಮ್ಯುನಿಸ್ಟರು, ನಿರ್ದಿಷ್ಟವಾಗಿ ಸಿಪಿಐ(ಎಂ), ಹೇಗೆ ಮಾರ್ಕ್ಸ್‌ವಾದವನ್ನು ಅಂತರ್ಗತ ಮಾಡಿಕೊಂಡಿದ್ದಾರೆ ಎಂಬುದುರ ರೂಪುರೇಷೆಯನ್ನು ಕೊಡ ಬಯಸುತ್ತೇನೆ.

ಮಾರ್ಕ್ಸ್‌ವಾದವನ್ನು ಮೀರಿ ಹೋಗುವುದು ಅದರ ಕಾರ್ಯಸೂಚಿಯನ್ನು ಈಡೇರಿಸಿದಾಗ ಮಾತ್ರ ಸಾಧ್ಯ. ಈ ಅರ್ಥದಲ್ಲಿ ಅದು ಅನನ್ಯವಾಗಿದೆ. ಈ ಕಾರ್ಯಸೂಚಿ ಎಂದರೆ, ಒಂದು ವರ್ಗರಹಿತ ಸಾಮಾಜಿಕ ವ್ಯವಸ್ಥೆಯ ಸ್ಥಾಪನೆ. ನಿರ್ದಿಷ್ಟವಾಗಿ ಬಂಡವಾಳಶಾಹಿಯ ಅಡಿಯಲ್ಲಿ, ಬಂಡವಾಳಶಾಹಿಯ ಬಗ್ಗೆ ಮಾರ್ಕ್ಸ್‌ವಾದದ ತಿಳುವಳಿಕೆಯೇ ಅದರ ಆಚೆಗಿರುವ ಚಾರಿತ್ರಿಕ ಸಾಧ್ಯತೆಗಳನ್ನು ಗ್ರಹಿಸಿಕೊಳ್ಳಲು ಸಾಕಷ್ಟು ಆಮೂಲಾಗ್ರವಾಗಿದೆ. ಆದ್ದರಿಂದ ಬಂಡವಾಳಶಾಹಿಯ ಅಡಿಯಲ್ಲಿ ಅದೆಂದೂ ಅನಗತ್ಯ ಎಂದು ಆಗಲಾರದು–ಬಂಡವಾಳಶಾಹಿಯನ್ನೇ ಮೀರಿ ಹೋಗುವ ವರೆಗೂ. ಬಂಡವಾಳಶಾಹಿಯ ನಂತರವೂ ಮಾರ್ಕ್ಸ್‌ವಾದಿ ತತ್ವಶಾಸ್ತ್ರ ಮತ್ತು ಅದರ ವಿಶ್ವ ಕಣ್ನೋಟ ಸಮಾಜವಾದವನ್ನು ಕಟ್ಟಲು ಮತ್ತು ಕಮ್ಯುನಿಸಂನತ್ತ ಸ್ಥಿತ್ಯಂತರಕ್ಕೆ ಆಧಾರ ಮತ್ತು ವೈಜ್ಞಾನಿಕ ಮಾರ್ಗದರ್ಶಿಯಾಗಿ ಮುಂದುವರೆಯುತ್ತದೆ.

ಮಾರ್ಕ್ಸ್‌ವಾದ ಒಂದು ಕುರುಡುನಂಬಿಕೆಯಲ್ಲ, ಬದಲಿಗೆ ಅದು ಒಂದು 'ಸೃಜನಾತ್ಮಕ ವಿಜ್ಞಾನ". ಅದು "ಮೂರ್ತ ಪರಿಸ್ಥಿತಿಗಳ ಒಂದು ಮೂರ್ತ ವಿಶ್ಲೇಷಣೆ" ಮತ್ತಿತರ ಅಂಶಗಳ ಮೇಲೆ ನಿಂತಿದೆ. ಅದು ಒಟ್ಟಾರೆಯಾಗಿ ಇತಿಹಾಸದ, ನಿರ್ದಿಷ್ಟವಾಗಿ ಬಂಡವಾಳಶಾಹಿಯ ವಿಶ್ಲೇಷಣೆಗೆ ಒಂದು ದಾರಿ. ಇದರ ಆಧಾರದಲ್ಲಿ ಮಾರ್ಕ್ಸ್ ಒದಗಿಸಿದ ಬುನಾದಿಯ ಮೇಲೆ ಕಟ್ಟುತ್ತ ನಾವು ನಿರಂತರವಾಗಿ ಪ್ರಸಕ್ತ ಸಂಧಿಕಾಲವನ್ನು ತಿಳಿಯುವ ಮತ್ತು ಅದು ತೆರೆಯುವ ಭವಿಷ್ಯದ ಸಾಧ್ಯತೆಗಳ ಕುರಿತು ನಮ್ಮ ಸಿದ್ಧಾಂತವನ್ನು ಶ್ರೀಮಂತಗೊಳಿಸುತ್ತಿರುತ್ತೇವೆ. ಮಾರ್ಕ್ಸ್‌ವಾದ ಮುಚ್ಚಿದ ಸೈದ್ಧಾಂತಿಕ ವ್ಯವಸ್ಥೆಯಂತೂ ಖಂಡಿತಾ ಅಲ್ಲ, ಬದಲಿಗೆ ಅದು ನಿರಂತರವಾಗಿ ಸೈದ್ಧಾಂತಿಕವಾಗಿ ಶ್ರೀಮಂತಗೊಳ್ಳುವ ಒಂದು ಪ್ರಕ್ರಿಯೆಯನ್ನು ಪ್ರತಿನಿಧಿಸುತ್ತದೆ.

ಇದರಿಂದಾಗಿಯೇ, ಅಂದರೆ ಒಂದು 'ಸೃಜನಾತ್ಮಕ ವಿಜ್ಞಾನ' ವಾಗಿರುವುದರಿಂದಲೇ, ಚಿರಂತನ ಮಾನವ–ಪ್ರಕೃತಿ ತತ್ವಮೀಮಾಂಸೆಯ ಪರಿಣಾಮಗಳಾದ, ಮಾನವ ಪ್ರಯತ್ನದ ಎಲ್ಲ ಕ್ಷೇತ್ರಗಳನ್ನು ಒಳಗೊಳ್ಳುವ ಬೆಳವಣಿಗೆಗಳ ಪ್ರವೃತ್ತಿಗಳನ್ನು ಮತ್ತು ದಿಕ್ಕುಗಳನ್ನು ಗುರುತಿಸಲು ಮಾರ್ಕ್ಸ್‌ವಾದ ಮಾತ್ರವೇ ಸಮರ್ಥವಾಗಿರುವುದು. ಖಗೋಳ ಭೌತವಿಜ್ಞಾನದಿಂದ ಹಿಡಿದು ಅತ್ಯಂತ ಸಣ್ಣ ಕಣಗಳನ್ನು ಆಧರಿಸಿದ ನ್ಯಾನೊ ತಂತ್ರಜ್ಞಾನದ ವರೆಗೆ ವಿಜ್ಞಾನದ ಪ್ರತಿಯೊಂದು ಆವಿಷ್ಕಾರ ಮತ್ತು ಬೆಳವಣಿಗೆ ಗತಿತಾರ್ಕಿಕ ಭೌತವಾದವನ್ನು ಪುಷ್ಟೀಕರಿಸುತ್ತದೆ. ಮಾನವ–ಕೃತ ಕೃತಕ ಬುದ್ಧಿಮತ್ತೆ ನಮ್ಮ ಬದುಕುಗಳನ್ನು ಕೈವಶ ಮಾಡಿಕೊಂಡು ಹತೋಟಿಗೊಳಪಡಿಸಿಕೊಂಡಾಗ ಉದ್ಭವವಾಗುವ ಸನ್ನಿವೇಶಗಳನ್ನು ಮುಂಗಂಡು, ಅವನ್ನು ನಿರ್ವಹಿಸಲು ನಮ್ಮನ್ನು ಸಜ್ಜುಗೊಳಿಸಲು ಮಾರ್ಕ್ಸ್‌ವಾದಕ್ಕೆ ಮಾತ್ರವೇ ಸಾಧ್ಯ.

ಇಂದಿನ ಜಗತ್ತು–
ಸಾಮ್ರಾಜ್ಯಶಾಹಿ ಜಾಗತೀಕರಣ

ಎರಡನೇ ಜಾಗತಿಕ ಮಹಾಯುದ್ಧಾನಂತರದಲ್ಲಿ, ಶೀತಲ ಸಮರದ ಅವಧಿಯ ದಶಕಗಳಲ್ಲಿ ಜಾಗತಿಕ ಬಂಡವಾಳಶಾಹಿಯ ಶಾಂತಿಯುತ ಬೆಳವಣಿಗೆ ಅಪಾರ ಪ್ರಮಾಣದಲ್ಲಿ ಬಂಡವಾಳವನ್ನು ಶೇಖರಿಸಿತು. ಇದು 20ನೇ ಶತಮಾನದ ಕೊನೆಯಲ್ಲಿ ಸೋವಿಯೆತ್ ಒಕ್ಕೂಟದ ಕುಸಿತ ಹಾಗೂ ಅದು ಮತ್ತು ಪೂರ್ವ ಯುರೋಪಿನ ಸಮಾಜವಾದಿ ದೇಶಗಳು ಮತ್ತೆ ಬಂಡವಾಳಶಾಹಿಯ ಕಕ್ಷೆಗೆ ಮರಳಿದಾಗ ಇನ್ನಷ್ಟು ವೃದ್ಧಿಗೊಂಡಿತು. ಈ ಅಪಾರ ಪ್ರಮಾಣದ ಶೇಖರಣೆ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಮೂಡಿ ಬರಲು ಮತ್ತು ಕ್ರೋಡೀಕರಣಗೊಳ್ಳಲು ಹಾದಿ ಮಾಡಿಕೊಟ್ಟಿತು. ಇದು ಬಂಡವಾಳದ ಶೇಖರಣೆ ಮತ್ತು ಕೇಂದ್ರೀಕರಣವನ್ನು ಇನ್ನೂ ಮೇಲ್ಮಟ್ಟಗಳಿಗೆ ಒಯ್ದಿತು.


ಸಾಮ್ರಾಜ್ಯಶಾಹಿಯ ಹಂತದಲ್ಲಿ ಜಾಗತೀಕರಣದ ಪ್ರಸಕ್ತ ಘಟ್ಟ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ನೇತೃತ್ವದಲ್ಲಿ ಮತ್ತಷ್ಟು ಮೇಲಿನ ಮಟ್ಟಗಳ ವರೆಗೆ ಬಂಡವಾಳದ ಶೇಖರಣೆಗೆ ಹಾದಿ ಮಾಡಿಕೊಡುತ್ತಿದೆ. ಈ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ತನ್ನ ಲಾಭಗಳನ್ನು ಗರಿಷ್ಟ ಮಟ್ಟಕ್ಕೆ ಏರಿಸಿಕೊಳ್ಳುವ ಭರದಲ್ಲಿ ಇಂದು ಕೈಗಾರಿಕಾ ಬಂಡವಾಳ ಮತ್ತು ಬಂಡವಾಳದ ಇತರ ಸ್ವರೂಪಗಳಲ್ಲಿ ತೊಡರಿಕೊಂಡಿದೆ. ಅದೀಗ ಬಂಡವಾಳ ಶೇಖರಣೆಯನ್ನು ಮತ್ತು ಲಾಭಗಳ ಗರಿಷ್ಟ ಮಟ್ಟಗಳನ್ನು ಮತ್ತಷ್ಟು ವಿಸ್ತರಿಸಲು ಹೊಸ ದಾಳಿಗಳನ್ನು ಹರಿಯ ಬಿಡುವ ಗುರಿಸಾಧನಗಳಿಗೆ ನೇತೃತ್ವ ನೀಡುತ್ತಿದೆ.

ಇಂತಹ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ನಿರ್ದೇಶನಗಳ ಅಡಿಯಲ್ಲಿ ಗರಿಷ್ಟ ಲಾಭ ಗಳಿಗೆಗಾಗಿ ವಿಶ್ವದ ಮರುವ್ಯವಸ್ಥೆಯಾಗಿರುವುದನ್ನು ನವ–ಉದಾರವಾದ ನಿರೂಪಿಸುತ್ತದೆ. ಇದು ತನ್ನ ಕಾರ್ಯಾಚರಣೆ ನಡೆಸುತ್ತಿರುವುದು, ಮೊದಲನೆಯದಾಗಿ, ದೇಶಗಳ ಗಡಿಗಳ ಆಚೀಚೆ ಸರಕುಗಳು ಮತ್ತು ಬಂಡವಾಳದ ಹರಿವಿಗೆ ಇರುವ ಅಡೆ–ತಡೆಗಳನ್ನು ನಿವಾರಿಸುವ ಧೋರಣೆಗಳ ಮೂಲಕ. ವ್ಯಾಪಾರ ಉದಾರೀಕರಣ ದೇಶಗಳ ಆಂತರಿಕ ಉತ್ಪಾದಕರನ್ನು ಸ್ಥಾನಪಲ್ಲಟಗೊಳಿಸಿ, ನಿರ್ದಿಷ್ಟವಾಗಿ ಅಭಿವೃದ್ಧಿಶೀಲ ದೇಶಗಳ ದೇಶೀ ಕೈಗಾರಿಕೆಗಳ ನಾಶದ ವಿಕೈಗಾರಿಕೀಕರಣ ಪ್ರಕ್ರಿಯೆಯನ್ನು ಹುಟ್ಟಿಹಾಕುತ್ತದೆ. ಅಭಿವೃದ್ಧಿ ಹೊಂದಿರುವ ದೇಶಗಳಲ್ಲೂ ಉತ್ಪಾದನಾ ಮತ್ತು ವ್ಯಾಪಾರ ಕ್ರಿಯೆಗಳನ್ನು ಆ ದೇಶಗಳ ಹೊರಗೆ ಸ್ಥಳಾಂತರಿಸುವ ಮೂಲಕ ಇದು ಸಂಭವಿಸುತ್ತಿದೆ. ಅದೇ ರೀತಿಯಲ್ಲಿ ಬಂಡವಾಳ ಹರಿವಿನ ಉದಾರೀಕರಣ ಕೂಡ ಬಹುರಾಷ್ಟ್ರೀಯ ಕಾರ್ಪೊರೇಟ್‌ಗಳು ದೇಶೀ ಉತ್ಪಾದಕ ಆಸ್ತಿಗಳನ್ನು (ಭಾರತದ ಸಾರ್ವಜನಿಕ ವಲಯದಂತವುಗಳನ್ನು) ಕೈವಶ ಮಾಡಿಕೊಳ್ಳಲು ಅವಕಾಶ ನೀಡಿ ಬಂಡವಾಳ ಶೇಖರಣೆಯನ್ನು ದೊಡ್ಡಪ್ರಮಾಣದಲ್ಲಿ ವಿಸ್ತರಿಸುತ್ತದೆ.

ಬಂಡವಾಳ ಶೇಖರಣೆಯನ್ನುಕ್ರೋಡೀಕರಿಸುವ ಇತರ ದಾರಿಗಳೆಂದರೆ ಹಣದಿಳಿತ ತರುವ ಧೋರಣೆಗಳನ್ನು ಹೇರುವುದು. ಉದಾಹರಣೆಗೆ, ಹಣಕಾಸು ಶಿಸ್ತಿನ ಹೆಸರಲ್ಲಿ ಸರಕಾರದ ಖರ್ಚುಗಳ ಮೇಲೆ ಮಿತಿಗಳನ್ನು ಹಾಕುವುದು, ಆಮೂಲಕ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ತಮ್ಮ ಸಟ್ಟಾ ವ್ಯವಹಾರಗಳ ಲಾಭಗಳನ್ನು ಹಲವು ಪಟ್ಟು ಹೆಚ್ಚಿಸಿಕೊಳ್ಳಲು ಹೆಚ್ಚೆಚ್ಚು ಪ್ರಮಾಣದಲ್ಲಿ ಹಣವನ್ನು ಲಭ್ಯಗೊಳಿಸುವ ಧೋರಣೆ. ಇದರ ಪರಿಣಾಮವಾಗಿ ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿ ಒಟ್ಟು ಬೇಡಿಕೆಯ ಮಟ್ಟ ಕೆಳಗಿಳಿಯುತ್ತದೆ; ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ವ್ಯಾಪಾರ ಬಲಾಬಲವನ್ನು ರೈತರ ವಿರುದ್ಧ ತಿರುಗಿಸುತ್ತದೆ; ಸಾಮಾಜಿಕ ಸೇವೆಗಳನ್ನು ಒದಗಿಸುವ ಪ್ರಭುತ್ವದ ವಲಯ ಜಾಗತಿಕವಾಗಿ ಹಿಂದಕ್ಕೆ ತಳ್ಳಲ್ಪಡುತ್ತದೆ, ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಇದು ಖಾಸಗೀಕರಣದ ಮೂಲಕ, ಸಾರ್ವಜನಿಕ ಬಳಕೆ ವ್ಯವಸ್ಥೆಗಳ ಹೊಸ ಕ್ಷೇತ್ರಗಳನ್ನು ಖಾಸಗಿಯವರಿಗೆ ದೊಡ್ಡ ಪ್ರಮಾಣದಲ್ಲಿ ತೆರೆದು ಕೊಡುವ ಮೂಲಕ ಕಾಣಿಸಿಕೊಳ್ಳುತ್ತದೆ. ಬೌದ್ಧಿಕ ಆಸ್ತಿ ಹಕ್ಕುಗಳು ಮತ್ತಿತರ ಸ್ವರೂಪಗಳಲ್ಲಿ ಜ್ಞಾನದ ಮೇಲೆ ಗುತ್ತೇದಾರಿಕೆ ಜ್ಞಾನದ ಉತ್ಪಾದನೆ ಮತ್ತು ಪುನರುತ್ಪಾದನೆಯ ಮೇಲೆ ಹತೋಟಿಯ ಮೂಲಕ ಬೃಹತ್ ಪ್ರಮಾಣದಲ್ಲಿ ಲಾಭಗಳನ್ನು ಉತ್ಪತ್ತಿ ಮಾಡುತ್ತದೆ.

ಹೀಗೆ ಸಮಕಾಲೀನ ಸಾಮ್ರಾಜ್ಯಶಾಹಿಯ ಒಂದು ಹೊಸ ಲಕ್ಷಣವೆಂದರೆ ಲಾಭಗಳನ್ನು ಗರಿಷ್ಟ ಮಟ್ಟಕ್ಕೆ ಏರಿಸಿಕೊಳ್ಳುವ ಹೊಸ ಮತ್ತು ಇದುವರೆಗೆ ಅಸ್ತಿತ್ವದಲ್ಲಿ ಇದ್ದಿರದಿದ್ದ ದಾರಿಗಳನ್ನು ಬಲವಂತದಿಂದ ತೆರೆಸಿ ಪಡೆಯುವುದು.

ಬಂಡವಾಳಶಾಹಿಯ ಇತಿಹಾಸದಾದ್ಯಂತ ಶೇಖರಣೆ ಎರಡು ವಿಧಗಳಲ್ಲಿ ನಡೆಯುತ್ತಿದೆ, ಒಂದು, ಅದರ ಉತ್ಪಾದಕ ಪ್ರಕ್ರಿಯೆ ಅನಾವರಣಗೊಳ್ಳುವ ಮೂಲಕ ಬಂಡವಾಳ ವಿಸ್ತರಣೆಯ(ಸ್ವಾಧೀನ ಪಡಿಸಿಕೊಳ್ಳುವ) ಎಂದಿನ ಕ್ರಿಯೆಗಳ ಮೂಲಕ. ಮತ್ತು ಇನ್ನೊಂದು ಬಲಪ್ರಯೋಗಿಸಿ ಮಾಡುವ ಲೂಟಿಯ ಮೂಲಕ. ಮಾರ್ಕ್ಸ್ ಈ ಅಮಾನುಷ ವ್ಯವಹಾರವನ್ನು ಆದಿಕಾಲದ ಬಂಡವಾಳ ಶೇಖರಣೆ ಎಂದು ನಿರೂಪಿಸಿದ್ದಾರೆ. ಆದಿಕಾಲ ಎನ್ನುವುದು ಇತ್ತಿಹಾಸದ ಒಂದು ವಿಧ, ಅಂದರೆ ಅದರ ಕಾಲಮಾನವನ್ನು ತೋರಿಸುವಂತದ್ದು ಎಂದು ತಪ್ಪಾಗಿ ವ್ಯಾಖ್ಯಿಸಲಾಗುತ್ತಿದೆ– ಅಂದರೆ ಆದಿಕಾಲ, ಅದಕ್ಕೆ ಪ್ರತಿಯಾಗಿ ಆಧುನಿಕ ಕಾಲ ಎಂದು. ➚



ಲಂಡನ್ ನಗರದ ಹೈಗೇಟ್ ಸ್ಮಶಾನದಲ್ಲಿ ನ "ಎಲ್ಲಾ ನಾಡುಗಳ ಕಾರ್ಮಿಕರೇ ಒಂದಾಗಿ" ಎಂಬ ಘೋಷಣೆ ಹೊತ್ತ ಕಾರ್ಲ್ ಮಾರ್ಕ್ಸ್ ಸಮಾಧಿ

ಮುಂಬರುವ ದಿನಗಳಲ್ಲಿ ಜಗತ್ತಿನ ಹೆಚ್ಚಿನ ದೇಶಗಳಲ್ಲಿ ಜನತೆಯ ಅಸಂತೃಪ್ತಿಯನ್ನು ತಮ್ಮ ಜೊತೆಗೊಯ್ಯುವಲ್ಲಿ ರಾಜಕೀಯ ಯಶಸ್ಸು ಪಡೆಯುವವರು ಎಡ–ಒಲವಿನ ಜನವಾದೀ ಶಕ್ತಿಗಳೋ ಅಥವ ರಾಜಕೀಯ ಬಲಪಂಥವೋ ಎಂಬುದರ ಮೇಲೆ ಮುಂದಿನ ರಾಜಕೀಯ ದಿಕ್ಕು ನಿರ್ಧಾರಿತವಾಗುತ್ತದೆ.

ಜನಗಳ ಮೇಲೆ ಅಭೂತಪೂರ್ವ ಆರ್ಥಿಕ ಹೊರೆಗಳು, ಅದರಿಂದಾಗಿ ತೀವ್ರವಾಗಿ ಹೆಚ್ಚುತ್ತಿರುವ ಆರ್ಥಿಕ ಅಸಮಾನತೆಗಳು ಬಂಡವಾಳಶಾಹಿಯ ಸುಲಿಗೆಕೋರ ಸ್ವಭಾವ ಇನ್ನಷ್ಟು ನಗ್ನ ಸ್ವರೂಪ ಪಡೆದಿರುವುದನ್ನು ತೋರಿಸುತ್ತದೆ.

ಬಂಡವಾಳಶಾಹಿಯ ಒಳಗೆ ಎಷ್ಟೇ ಸುಧಾರಣೆ ಮಾಡಿದರೂ ಮಾನವಕುಲವನ್ನು ಇಂತಹ ಶೋಷಣೆಯ ಕಪಿಮುಷ್ಟಿಯಿಂದ ವಿಮೋಚನೆಗೊಳಿಸುವುದು ಸಾಧ್ಯವಿಲ್ಲ. ಸಮಾಜವಾದದ ರಾಜಕೀಯ ಪರ್ಯಾಯ ಮಾತ್ರವೇ ಈ ವಿಮೋಚನೆಯ ಗುರಿಯನ್ನು ಸಾಧಿಸಬಲ್ಲುದು. ಇದಕ್ಕೆ ಅಗತ್ಯವಾದ 'ಕರ್ತೃ' ಅಂಶವನ್ನು ಬಲಪಡಿಸಲು ವರ್ಗಹೋರಾಟಗಳನ್ನು ತೀಕ್ಷ್ಣಗೊಳಿಸಲು ಇಂದು ಮಾರ್ಕ್ಸ್‌ವಾದ ಮಾತ್ರವೇ ತಾತ್ವಿಕ ಬುನಾದಿಯನ್ನು ಮತ್ತು ಸೈದ್ಧಾಂತಿಕ ನೆಲೆಗಟ್ಟನ್ನು ಒದಗಿಸಬಲ್ಲದು..

–ಸೀತಾರಾಮ್ ಯೆಚುರಿ

ಆದರೆ ಮಾರ್ಕ್ಸ್‌ಗೆ ಮತ್ತು ಮಾರ್ಕ್ಸ್‌ವಾದಿಗಳಿಗೆ ಅದು ವಿಶ್ಲೇಷಣೆಯ ವಿಧ. ಬಂಡವಾಳಶಾಹಿಯ ಸಾಮಾನ್ಯ ಚಲನೆಯೊಂದಿಗೇ ಈಗಲೂ ಅಸ್ತಿತ್ವದಲ್ಲಿ ಇರುವಂತದ್ದು.

ಆದಿಕಾಲದ ಶೇಖರಣೆಯ ಪ್ರಕ್ರಿಯೆ ಈ ಹಿಂದೆ, ನೇರ ವಸಾಹತುಶಾಹಿಯ ಕಾಲದಲ್ಲೂ, ವಿವಿಧ ಸ್ವರೂಪಗಳನ್ನು ಪಡೆದಿದೆ. ಆದಿಕಾಲದ ಶೋಷಣೆಯ ಆಕ್ರಮಣಶೀಲತೆ ಆಯಾಯ ಕಾಲಘಟ್ಟದಲ್ಲಿ ಅಂತರ್‍ರಾಷ್ಟ್ರೀಯ ವರ್ಗ ಬಲಾಬಲದ ಮೇಲೆ ನೇರವಾಗಿ ಅವಲಂಬಿಸಿರುತ್ತದೆ. ಅಂದರೆ ಅದು ಇಂತಹ ಬಂಡವಾಳಶಾಹಿ ಅಮಾನುಷತೆ ಪ್ರಕಟವಾಗಲು ಅನುವು ಮಾಡಿ ಕೊಡಬಹುದು, ಇಲ್ಲವೇ ಅದರ ಮೇಲೆ ಕಡಿವಾಣ ಹಾಕಬಹುದು. ಸಮಕಾಲೀನ ಸಾಮ್ರಾಜ್ಯಶಾಹಿಯ ಪ್ರಸಕ್ತ ಘಟ್ಟದಲ್ಲಿ ಇಂತಹ ಅಮಾನುಷ ಆದಿಕಾಲದ ಶೇಖರಣೆಯ ಪ್ರಕ್ರಿಯೆ ತೀವ್ರಗೊಂಡಿರುವುದು, ವಿಶ್ವದ ಅಭಿವೃದ್ಧಿಶೀಲ ದೇಶಗಳಲ್ಲೂ, ಅಭಿವೃದ್ಧಿ ಹೊಂದಿರುವ ದೇಶಗಳಲ್ಲೂ ಬಹುಪಾಲು ಜನಸಾಮಾನ್ಯರ ಮೇಲೆ ಹೊಡೆತಗಳನ್ನು ಹಾಕುತ್ತಿದೆ.

ಜಾಗತಿಕವಾಗಿಯೂ, ಪ್ರತಿಯೊಂದು ದೇಶದ ಒಳಗೂ ಆರ್ಥಿಕ ಅಸಮಾನತೆಗಳನ್ನು ತೀಕ್ಷ್ಣ ಸ್ವರೂಪದಲ್ಲಿ ಹೆಚ್ಚಿಸುತ್ತಿರುವುದು ಸದಾ ತನ್ನ ಗರಿಷ್ಟ ಲಾಭಗಳನ್ನು ಗಳಿಸುವ ಈ ಸುಲಿಗೆಕೋರ ಬಂಡವಾಳಶಾಹಿಯ ಸ್ವಭಾವವೇ. ಅದೇ ವೇಳೆಯಲ್ಲಿ, ಇದು ಜಗತ್ತಿನ ಬಹುಪಾಲು ದುಡಿಯುವ ಜನಗಳ ಮೇಲೆ, ಬಡವರ ಮೇಲೆ ಹೆಚ್ಚೆಚ್ಚು ಸಂಕಟಗಳನ್ನು ಹೊರಿಸುತ್ತಿದೆ. ಬಂಡವಾಳಶಾಹಿ ಬೆಳವಣಿಗೆಯ ಸಹಜ ನಿಯಮಗಳ ಪ್ರಕಾರವೇ ಪ್ರಸಕ್ತ ಘಟ್ಟದ ವ್ಯವಸ್ಥೆಯ ಬಿಕ್ಕಟ್ಟಿನಿಂದ ಹೊರಬರುವ ಪ್ರತಿಯೊಂದು ಪ್ರಯತ್ನವೂ ಇನ್ನಷ್ಟು ಆಳವಾದ ಹೊಸದೊಂದು ಬಿಕ್ಕಟ್ಟಿನತ್ತ ಒಯ್ಯುತ್ತಿದೆ.

ನವ–ಉದರವಾದದ ಬಿಕ್ಕಟ್ಟು–
ಬಲಪಂಥದತ್ತ ರಾಜಕಿಯ ಪಲ್ಲಟ

ಸದ್ಯದಲ್ಲಿ ಜಾಗತಿಕ ಹಣಕಾಸು ಕುಸಿತದ ಸುಮಾರು ಒಂದು ದಶಕದ ನಂತರ ಕೂಡ, ನವ–ಉದಾರವಾದವೇ ಬಿಕ್ಕಟ್ಟಿನಲ್ಲಿದೆ.


ನವ–ಉದಾರವಾದದ ಉದಯ, ಒಂದರ್ಥದಲ್ಲಿ ಅಮೆರಿಕಾದಲ್ಲಿ ರೇಗನ್ ಮತ್ತು ಬ್ರಿಟನ್ನಿನಲ್ಲಿ ಥ್ಯಾಚರ್ ಉದಯವನ್ನು ಅನುಸರಿಸಿ ಬಂತು ಎನ್ನಬಹುದು. ಇದು ಎಂತಹ ಆರ್ಥಿಕ ಪರಿಸ್ಥಿತಿಗಳನ್ನು ಸೃಷ್ಟಿಸಿತೆಂದರೆ, ಆರ್ಥಿಕ ಅಭಿವೃದ್ಧಿಯ ಮತ್ತು ಬೆಳವಣಿಗೆಯ ಬಹುಪಾಲನ್ನು ಒಂದು ಅತಿ ಸಣ್ಣ ಗುಂಪು ಮಾತ್ರ ದಕ್ಕಿಸಿಕೊಂಡು ಹೆಚ್ಚಿನ ಜನಗಳಿಗೆ ಹೆಚ್ಚೆಚ್ಚು ಸಂಕಟಗಳನ್ನೇ ತಂದಿತು.

ಎರಡನೇ ಮಹಾಯುದ್ಧಾನಂತರದ ಮೊದಲ ಎರಡೂವರೆ ದಶಕಗಳಲ್ಲಿ ಜಾಗತಿಕ ಬಂಡವಾಳಶಾಹಿಯು ಬೆಳವಣಿಗೆಯ ಒಂದು ಗತಿಶೀಲ ಅವಧಿಯನ್ನು ಕಂಡಿತು. ಇದನ್ನು ಬಂಡವಾಳಶಾಹಿಯ ಸುವರ್ಣಯುಗ ಎನ್ನಲಾಗುತ್ತಿದೆ. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ 1948ರಿಂದ 1972ರ ಅವಧಿಯಲ್ಲಿ ಅಲ್ಲಿಯ ಪ್ರತಿಯೊಂದು ಜನವಿಭಾಗದ ಜೀವನ ಮಟ್ಟ ಏರಿತು. ಆದರೆ 1972ರಿಂದ 2013ರ ನಡುವೆ, ಅತ್ಯಂತ ಕೆಳಗಿನ 10% ಮಂದಿಯ ಆದಾಯಗಳು ಇಳಿಮುಖಗೊಂಡರೆ, ಮೇಲಿನ ಅತಿಶ್ರೀಮಂತ 10% ಮಂದಿಯ ಆದಾಯಗಳು ವಿಪರೀತವಾಗಿ ಏರಿದವು. ಪೂರ್ಣ ಕಾಲದ ಪುರುಷ ದುಡಿಮೆಗಾರರಲ್ಲಿ ಮಧ್ಯದ ನಿಜಆದಾಯ ನಾಲ್ಕು ದಶಕಗಳ ಹಿಂದೆ ಇದ್ದುದಕ್ಕಿಂತಲೂ ಕೆಳಗಿಳಿದಿದೆ. ಕೆಳಗಿನ 90% ಮಂದಿಯ ಆದಾಯ ಕಳೆದ 30 ವರ್ಷಗಳಲ್ಲಿ ಸ್ಥಗಿತಗೊಂಡಿದೆ. 25 ಹೆಚ್ಚು ಆದಾಯದ ಆರ್ಥಿಕ ವ್ಯವಸ್ಥೆಗಳಲ್ಲಿ ಸರಾಸರಿಯಾಗಿ 65 ರಿಂದ 70 ಶೇಕಡಾ ಕುಟುಂಬಗಳ ನಿಜಆದಾಯ 2005ರಿಂದ 2014ರ ನಡುವೆ ಏರಲೇ ಇಲ್ಲ, ಇಲ್ಲವೇ ಇಳಿದಿದೆ. 2000ದಲ್ಲಿ ನಡೆಸಿದ ಒಂದು ಗಣನೆಯ ಪ್ರಕಾರ 33% ಅಮೆರಿಕನ್ನರು ಮಾತ್ರ ತಮ್ಮನ್ನು ಕಾರ್ಮಿಕ ವರ್ಗ ಎಂದು ಕರೆದುಕೊಂಡಿದ್ದರು. 2015ರ ವೇಳೆಗೆ ಸುಮಾರು ಅರ್ಧದಷ್ಟು, 48% ಅಮೆರಿಕನ್ನರು ತಮ್ಮನ್ನು ಕಾರ್ಮಿಕ ವರ್ಗ ಎಂದು ಹೇಳಿಕೊಂಡರು.

ಜಾಗತಿಕವಾಗಿ ಈ ವಿಶಾಲ ಜನವಿಭಾಗದ ಸಂಕಟಗಳು ದೊಡ್ಡಪ್ರಮಾಣದಲ್ಲಿ ಅಸಂತೃಪ್ತಿಯನ್ನು ಉಂಟು ಮಾಡಿವೆ. ಇದು ರಾಜಕೀಯವಾಗಿ ಅಭಿವ್ಯಕ್ತಗೊಳ್ಳಲು ಪ್ರಯತ್ನಿಸುತ್ತಿದೆ.

ನವ–ಉದಾರವಾದ ಸೃಷ್ಟಿಸಿದ ಈ ಬಿಕ್ಕಟ್ಟು ಸಾಮ್ರಾಜ್ಯಶಾಹಿ ದೇಶಗಳಲ್ಲಿ ಬ್ರೆಕ್ಸಿಟ್‌ನಂತಹ ಒಡಕುಗಳು, ಸಂಘರ್ಷಗಳಿಗೆ ಹಾದಿ ಮಾಡಿಕೊಟ್ಟಿದೆ. ಹೊಸ ರಾಜಕೀಯ ಶಕ್ತಿಗಳ ಉದಯ, ಹೆಚ್ಚೆಚ್ಚು ಉದ್ವಿಗ್ನತೆ ಈ ದಿನಗಳಲ್ಲಿ ಸಾಮಾನ್ಯ ಸಂಗತಿಯಾಗುತ್ತಿವೆ.

ಪ್ರಸಕ್ತ ಅವಧಿ ಜಗತ್ತಿನ ಬಹಳಷ್ಟು ಭಾಗಗಳಲ್ಲಿ ಇನ್ನಷ್ಟು ರಾಜಕೀಯ ಬಲಪಂಥದತ್ತ ಪಲ್ಲಟವನ್ನು ಕಾಣುತ್ತಿದೆ. ಪ್ರಸಕ್ತ ಬಿಕ್ಕಟ್ಟಿನ ಎದುರಲ್ಲಿ, ಸಾಮ್ರಾಜ್ಯಶಾಹಿ ಆಕ್ರಮಣಕಾರೀ ನವ–ಉದಾರವಾದವನ್ನು ಅನುಸರಿಸುವ ಜತೆಗೆ ಒಂದು ಜಾಗತಿಕ ವಿಭಜನಕಾರೀ ಅಜೆಂಡಾವನ್ನೂ ಅನುಸರಿಸುತ್ತಿದೆ. ಇದು ದೇಶಗಳೊಳಗೆ, ಸ್ಥಳೀಯ ಮತ್ತು ಪ್ರಾದೇಶಿಕ ಉದ್ವಿಗ್ನತೆಗಳನ್ನು ಪೋಷಿಸುವ ಅಜೆಂಡಾ. ಜಾಗತಿಕ ಯಜಮಾನಿಕೆಯನ್ನು ಕ್ರೋಡೀಕರಿಸಲು ಮತ್ತು ಪಶ್ಚಿಮ ಏಶ್ಯಾದಲ್ಲಿ ತೈಲಸಂಪನ್ಮೂಲದಂತಹ ಆರ್ಥಿಕ ಸಂಪನ್ಮೂಲಗಳ



ಮೇಲೆ ಹತೋಟಿ ಹೊಂದಲು ಅದು ಮಿಲಿಟರಿ ಮಧ್ಯಪ್ರವೇಶಗಳಲ್ಲಿ ತೊಡಗಿದೆ, ಜನಾಂಗದ್ವೇಷ ವಿದೇಶಗಳವರ ಬಗ್ಗೆ ದ್ವೇಷ ಮತ್ತು ಉಗ್ರ ಫ್ಯಾಸಿಸ್ಟ್ ಪ್ರವೃತ್ತಿಗಳು ಹೆಚ್ಚುವಂತೆ ಮಾಡುತ್ತಿದೆ.

ಅಮೆರಿಕಾದ ಚುನಾವಣೆಗಳಲ್ಲಿ ಡೊನಾಲ್ಡ್ ಟ್ರಂಪ್ ವಿಜಯ, ಬ್ರಿಟನ್ನಿನಲ್ಲಿ ಬ್ರೆಕ್ಸಿಟ್ ವೋಟಿನಲ್ಲಿ ಬಲಪಂಥೀಯ ಅಣಿನೆರಿಕೆ, ಫ್ರಾನ್ಸಿನಲ್ಲಿ ಉಗ್ರ ಬಲಪಂಥೀಯ ನ್ಯಾಶನಲ್ ಫ್ರಂಟ್‌ನ ಮರಿನೆ ಲೆ ಪೆನ್ ಗಳಿಕೆಗಳು, ಜರ್ಮನಿಯಲ್ಲಿ "ಡೊಯಿಟ್ಶ್‌ಲ್ಯಾಂಡ್‌ಗೆ ಪರ್ಯಾಯ' ಎಂಬ ಗುಂಪಿನ ಮುನ್ನಡೆ, ಆಸ್ಟ್ರಿಯಾದಲ್ಲಿ ಒಂದು ಬಲಪಂಥೀಯ ಸರಕಾರದ ರಚನೆ, ಅದರಲ್ಲಿ ಬಲಪಂಥೀಯ ಉಗ್ರಗಾಮಿ ಫ್ರೀಡಂ ಪಾರ್ಟಿಯ ಪ್ರತಿನಿಧಿಗಳೂ ಸೇರಿರುವುದು, ಮತ್ತು ಯುರೋಪಿಯನ್ ಪಾರ್ಲಿಮೆಂಟಿನಲ್ಲಿ ಸುಮಾರು ಮೂರನೇ ಒಂದರಷ್ಟು ಬಲಪಂಥೀಯ ಮತ್ತು ಉಗ್ರ ಬಲಪಂಥೀಯ ಪಕ್ಷಗಳ ಸದಸ್ಯರು ಪ್ರತಿನಿಧಿ ಗಳಾಗಿರುವುದು ಈ ಬಲಪಂಥದತ್ತ ಪಲ್ಲಟವನ್ನು ಬಿಂಬಿಸುತ್ತದೆ. ಈ ಪ್ರವೃತ್ತಿ ಇದರ ಪರಿಣಾಮವಾಗಿ ಭಾರತದ ರಾಜಕಾರಣದಲ್ಲೂ ಕಂಡು ಬಂದಿದೆ.

ತೀವ್ರ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಸಮಯಗಳಲ್ಲಿ ಹೆಚ್ಚುತ್ತಿರುವ ಜನಗಳ ಅಸಂತೃಪ್ತಿಯನ್ನು ಯಾರು ತಮ್ಮದಾಗಿಸಿಕೊಳ್ಳಬೇಕು ಎಂಬ ಒಂದು ರಾಜಕೀಯ ಸಮರ ಎದ್ದು ಬರುತ್ತದೆ. ಜನಗಳ ಆಕ್ರೋಶವನ್ನು ಅಣಿನೆರೆಸಿ ಮತ್ತು ಎಡಪಂಥೀಯ ಹಾಗೂ ಪ್ರಗತಿಶೀಲ ಶಕ್ತಿಗಳು ಪ್ರಧಾನ ರಾಜಕೀಯ ಶಕ್ತಿಯಾಗಿ ಮೂಡಿ ಬರದಂತೆ ನೋಡಿಕೊಳ್ಳುವ ಮೂಲಕ ರಾಜಕೀಯ ಬಲಪಂಥ ಮುನ್ನಡೆ ಸಾಧಿಸುತ್ತದೆ. ಜನಗಳ ಆಕ್ರೋಶವನ್ನು ಬಂಡವಾಳ ಮಾಡಿಕೊಳ್ಳುವ ಈ ಬಲಪಂಥೀಯ ಶಕ್ತಿಗಳು ಕೊನೆಗೆ ಈ ಆರ್ಥಿಕ ಬಿಕ್ಕಟ್ಟಿಗೆ ಕಾರಣವಾದ, ಜನಗಳ ಮೇಲೆ ಅಭೂತಪೂರ್ವ ಹೊರೆಗಳನ್ನು ಹಾಕಿ ಅಸಂತೃಪ್ತಿ ಹೆಚ್ಚುವಂತೆ ಮಾಡಿದ ಆರ್ಥಿಕ ಧೋರಣೆಗಳನ್ನೇ ಅನುಸರಿಸುತ್ತವೆ,

ಸ್ಪಷ್ಟವಾಗಿಯೂ, ಮುಂಬರುವ ದಿನಗಳಲ್ಲಿ ಜಗತ್ತಿನ ಹೆಚ್ಚಿನ ದೇಶಗಳಲ್ಲಿ ಜನತೆಯ ಅಸಂತೃಪ್ತಿಯನ್ನು ತಮ್ಮ ಜೊತೆಗೊಯ್ಯುವಲ್ಲಿ ರಾಜಕೀಯ ಯಶಸ್ಸು ಪಡೆಯುವವರು ಎಡ–ಒಲವಿನ ಜನವಾದೀ ಶಕ್ತಿಗಳೋ ಅಥವ ರಾಜಕೀಯ ಬಲಪಂಥವೋ ಎಂಬುದರ ಮೇಲೆ ಮುಂದಿನ ರಾಜಕೀಯ ದಿಕ್ಕು ನಿರ್ಧಾರಿತವಾಗುತ್ತದೆ. 1929–30ರ 'ಮಹಾ ಕುಸಿತ'(ಗ್ರೇಟ್ ಡಿಪ್ರೆಶನ್) ದ ಹಿನ್ನೆಲೆಯಲ್ಲಿ ಫ್ಯಾಸಿಸಂ ಜಗತ್ತಿನ ಗುತ್ತೇದಾರಿ ಬಂಡವಾಳದ ಬೆಂಬಲದೊಂದಿಗೆ ಎದ್ದು ಬಂತು. ಬಿಕ್ಕಟ್ಟಿನಿಂದಾಗಿ ಜನಗಳಲ್ಲಿ ಹೆಚ್ಚುತ್ತಿದ್ದ ಅಸಂತೃಪ್ತಿಯನ್ನು ಬಳಸಿಕೊಳ್ಳುವಲ್ಲಿ ಫ್ಯಾಸಿಸ್ಟ್ ಶಕ್ತಿಗಳು ಯಶಸ್ವಿಯಾದವು. ಪ್ರಸಕ್ತ ಸಂಧಿಕಾಲದಲ್ಲಿ ದೀರ್ಘಕಾಲ ಎಳೆದು ಬಂದಿರುವ ಆರ್ಥಿಕ ಬಿಕ್ಕಟ್ಟಿನ ವಿರುದ್ಧ ಜನಗಳ ಹೆಚ್ಚುತ್ತಿರುವ ಅಸಂತೃಪ್ತಿ ಉಗ್ರ ಬಲಪಂಥ ಮತ್ತು ನವ–ಫ್ಯಾಸಿಸ್ಟ್‌ಶಕ್ತಿಗಳ ಉದಯಕ್ಕೆ ಇಂಧನವಾಗುತ್ತಿದೆ.

ಮಾನವ ವಿಮೋಚನೆಯ ಏಕೈಕ ದಾರಿ

ಇಂದಿನ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನ ಪರಿಸ್ಥಿತಿಗಳಲ್ಲಿ ಸಮಾಜವಾದಿ ಆದರ್ಶ ಮಾನವಕುಲ ಶೋಷಣೆಯಿಂದ ತನ್ನನ್ನು ಉದ್ಧರಿಸಿಕೊಳ್ಳಲು ಈಗಲೂ ಕೂಡ ಏಕೈಕ ದಾರಿಯಾಗೇ ಉಳಿದಿದೆ. 2008ರ ಜಾಗತಿಕ ಹಣಕಾಸು ಕುಸಿತದ ನಂತರ ಜಾಗತಿಕ ಬಂಡವಾಳಶಾಹಿ ಒಂದು ಬಿಕ್ಕಟ್ಟಿನಿಂದ ಇನ್ನೊಂದು ಬಿಕ್ಕಟ್ಟಿನತ್ತ ಧುಮುಕುತ್ತಿದೆ. ಬಿಕ್ಕಟ್ಟನ್ನು ಮೀರಿ ನಿಲ್ಲುವ ಪ್ರತಿಯೊಂದು ಪ್ರಯತ್ನವೂ ಇನ್ನಷ್ಟು ಆಳವಾದ ಬಿಕ್ಕಟ್ಟಿನ ಬೀಜವನ್ನು ಬಿತ್ತುತ್ತಿದೆ. ಜನಗಳ ಬಂಡವಾಳಶಾಹಿ ಶೋಷಣೆಯನ್ನು ತೀವ್ರಗೊಳಿಸುವ ಮೂಲಕ ಹೇರಿದ ಅಭೂತಪೂರ್ವ ಆರ್ಥಿಕ ಹೊರೆಗಳು, ಅದರಿಂದಾಗಿ ತೀವ್ರವಾಗಿ ಹೆಚ್ಚುತ್ತಿರುವ ಆರ್ಥಿಕ ಅಸಮಾನತೆಗಳು ಮತ್ತು ಜಗತ್ತಿನ ಬಹುಪಾಲು ಜನಗಳನ್ನು ದಾರಿದ್ರ್ಯದತ್ತ ತಳ್ಳುತ್ತಿರುವುದು ಬಂಡವಾಳಶಾಹಿಯ ಸುಲಿಗೆಕೋರ ಸ್ವಭಾವ ಇನ್ನಷ್ಟು ನಗ್ನ ಸ್ವರೂಪ ಪಡೆದಿರುವುದನ್ನು ತೋರಿಸುತ್ತದೆ ಎಂಬುದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ.

ಬಂಡವಾಳಶಾಹಿಯ ಒಳಗೆ ಎಷ್ಟೇ ಸುಧಾರಣೆ ಮಾಡಿದರೂ ಮಾನವಕುಲವನ್ನು ಇಂತಹ ಶೋಷಣೆಯ ಕಪಿಮುಷ್ಟಿಯಿಂದ ವಿಮೋಚನೆಗೊಳಿಸುವುದು ಸಾಧ್ಯವಿಲ್ಲ. ಸಮಾಜವಾದದ ರಾಜಕೀಯ ಪರ್ಯಾಯ ಮಾತ್ರವೇ ಈ ವಿಮೋಚನೆಯ ಗುರಿಯನ್ನು ಸಾಧಿಸಬಲ್ಲುದು. ಅಂತಿಮವಾಗಿ ಶೋಷಣೆಯಿಂದ ಮಾನವ ವಿಮೋಚನೆಗೆ ಬಂಡವಾಳದ ಆಳ್ವಿಕೆಯ ಮೇಲೆ ಸಮಾಜವಾದದ ಈ ರಾಜಕೀಯ ಪರ್ಯಾಯದ ಹೊಡೆತಗಳನ್ನು ತೀವ್ರಗೊಳಿಸಬೇಕಾಗಿದೆ.

ಬಿಕ್ಕಟ್ಟು ಎಷ್ಟೇ ತೀಕ್ಷ್ಣವಾಗಿರಲಿ, ಬಂಡವಾಳಶಾಹಿ ಎಂದೂ ತಾನಾಗಿಯೇ ಕುಸಿಯುವದಿಲ್ಲ. ಬಂಡವಾಳಶಾಹಿಗೆ ಸವಾಲೊಡ್ಡುವ ಒಂದು ರಾಜಕೀಯ ಪರ್ಯಾಯ ಬೆಳೆಯದಿದ್ದರೆ, ಬಂಡವಾಳಶಾಹಿ ಮಾನವ ಶೋಷಣೆಯನ್ನು ತೀವ್ರಗೊಳಿಸಿ ಬದುಕುಳಿಯುತ್ತದೆ. ಆದ್ದರಿಂದ ಸಮಾಜವಾದಿ ರಾಜಕೀಯ ಪರ್ಯಾಯದ ಬಲ ವ್ಯಾಪಕವಾಗಿ ಬೆಳೆಯಬೇಕು.

ಜಗತ್ತಿನಾದ್ಯಂತ ಬಂಡವಾಳಶಾಹಿ ಲೂಟಿಯ ಪ್ರಸಕ್ತ ಸುಲಿಗೆಕೋರ ಅಭಿವ್ಯಕ್ತಿ ಮತ್ತು ಅದರ ಜೊತೆಗೆ ಸಾಮ್ರಾಜ್ಯಶಾಹಿಯ ಆಧಿಪತ್ಯವನ್ನು ಹೇರುವ ಆಕ್ರಮಣಕೋರತೆಯ ವಿರುದ್ಧ ಜನಗಳು ಆಕ್ರೋಶ ವ್ಯಕ್ತಪಡಿಸುತ್ತಿದ್ದರೂ, ಇವು ಇನ್ನೂ ರಕ್ಷಣಾತ್ಮಕ ಹೋರಾಟಗಳಾಗಿಯೇ ಉಳಿದಿವೆ. ರಕ್ಷಣಾತ್ಮಕ ಎಂದರೆ ತಮ್ಮ ಈಗಿರುವ ಪ್ರಜಾಪ್ರಭುತ್ವ ಹಕ್ಕುಗಳನ್ನು ಮತ್ತು ಜೀವನಾಧಾರ ಪರಿಸ್ಥಿತಿಗಳನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಹೋರಾಟಗಳಿಗೆ ಧುಮುಕಿದ್ದಾರೆ ಎಂಬರ್ಥದಲ್ಲಿ. ಇಂತಹ ಹೋರಾಟಗಳು ಶೇಖರಗೊಂಡು ಬಂಡವಾಳದ ಆಳ್ವಿಕೆಯ ಮೇಲೆ ವರ್ಗ ಪ್ರಹಾರ ನಡೆಸುವಂತಹ ಮಟ್ಟಗಳನ್ನು ತಲುಪಬೇಕಾಗಿದೆ.

ಬಂಡವಾಳಶಾಹಿಯನ್ನು ಕಿತ್ತೆಸೆಯಬೇಕಾಗಿದೆ. ಇದು ಕಾರ್ಮಿಕ ವರ್ಗದ ನೇತೃತ್ವದಲ್ಲಿನ ಭೌತಿಕ ಶಕ್ತಿಯನ್ನು ಬಲಪಡಿಸುವುದರ ಮೇಲೆಯೇ ನಿರ್ಣಾಯಕವಾಗಿ ಅವಲಂಬಿಸಿದೆ. ಈ ಭೌತಿಕ ಶಕ್ತಿ ಜನಪ್ರಿಯ ಹೋರಾಟಗಳು ಮತ್ತು ವರ್ಗಹೋರಾಟವನ್ನು ತೀವ್ರಗೊಳಿಸುವುದರ ಮೂಲಕ ಬಂಡವಾಳದ ಆಳ್ವಿಕೆಯ ಮೇಲೆ ರಾಜಕೀಯ ದಾಳಿಯನ್ನು ಹರಿಯಬಿಡುವುದರ ಮೂಲಕ ಮಾಡಬಲ್ಲದು. ಈ ಭೌತಿಕ ಶಕ್ತಿಯನ್ನು ಕಟ್ಟುವುದು, ಮತ್ತು ಅದರ ಬಲ–ಇದು ಈ ಸಂದರ್ಭದಲ್ಲಿನ 'ಕರ್ತೃ' ಅಂಶ. ವಸ್ತುಸ್ಥಿತಿ, ಅಂದರೆ ಬಿಕ್ಕಟ್ಟಿನ ಮೂರ್ತ ಸನ್ನಿವೇಶ, ಒಂದು ಕ್ರಾಂತಿಕಾರಿ ಮುನ್ನಡೆಗೆ ಎಷ್ಟೇ ಅನುಕೂಲಕರವಾಗಿದ್ದರೂ, ಈ 'ಕರ್ತೃ' ಅಂಶವನ್ನು ಬಲಪಡಿಸದೆ ಬಂಡವಾಳದ ಆಳ್ವಿಕೆಯ ವಿರುದ್ಧ ಒಂದು ಕ್ರಾಂತಿಕಾರಿ ಪ್ರಹಾರವಾಗಿ ಮಾರ್ಪಡಿಸಲು ಸಾಧ್ಯವಾಗುವುದಿಲ್ಲ.

ವರ್ಗ ಹೋರಾಟಗಳನ್ನು ತೀಕ್ಷ್ಣಗೊಳಿಸಲು ಮತ್ತು ಈ ನಿಜ ಪರಿಸ್ಥಿತಿಗಳ ಸವಾಲನ್ನು ಎದುರಿಸಲು ಈ 'ಕರ್ತೃ' ಅಂಶವನ್ನು ಬಲಪಡಿಸಲಿಕ್ಕಾಗಿ, ಪ್ರತಿಯೊಂದು ದೇಶದಲ್ಲಿ ಕಾರ್ಮಿಕ ವರ್ಗ ತನ್ನಲ್ಲಿನ ಮೂರ್ತ ಪರಿಸ್ಥಿತಿಗಳ ಮೂರ್ತ ವಿಶ್ಲೇಷಣೆಯ ಆಧಾರದಲ್ಲಿ ವಿವಿಧ ಮಧ್ಯಂತರ ಘೋಷಣೆಗಳನ್ನು, ಕ್ರಮಗಳನ್ನು, ಕಾರ್ಯತಂತ್ರಗಳನ್ನು ಅನುಸರಿಸಬೇಕಾಗಿದೆ, ಈ ಮೂಲಕ ತಂತಮ್ಮ ದೇಶಗಳಲ್ಲಿ ಕ್ರಾಂತಿಕಾರಿ ಪರಿವರ್ತನೆಯ ಪ್ರಕ್ರಿಯೆಯನ್ನು ಮುಂದೊಯ್ಯಬೇಕಾಗಿದೆ. ಜನಗಳ ನಡುವೆ ರಾಜಕೀಯ ಬಲಾಬಲ ಎಡಶಕ್ತಿಗಳ ಪರವಾಗಿ ಪಲ್ಲಟಗೊಳ್ಳಬೇಕು. ಇದು ನವ–ಉದಾರವಾದದ ವಿರುದ್ಧ ಪರ್ಯಾಯ ಧೋರಣೆಗಳ ಚೌಕಟ್ಟಿನ ಆಧಾರದಲ್ಲಿ ಸಮರಧೀರ ಹೋರಾಟಗಳನ್ನು ಹರಿಯಬಿಡುವ ಮೂಲಕ ಮಾತ್ರವೇ ಸಂಭವಿಸಬಲ್ಲದು. ಇದಿಲ್ಲದಿದ್ದರೆ, ಜನಗಳಲ್ಲಿನ ಆಕ್ರೋಶವನ್ನು ಬಲಪಂಥಿಯ ರಾಜಕೀಯ ಶಕ್ತಿಗಳು ತಮ್ಮ ಪರವಾಗಿ ಕ್ರೋಡೀಕರಿಸುತ್ತವೆ.

ಇಂದು ಮಾರ್ಕ್ಸ್‌ವಾದ ಮಾತ್ರವೇ 'ಕರ್ತೃ'ಅಂಶವನ್ನು ಬಲಪಡಿಸಲು ಮತ್ತು ಈಮೂಲಕ ವರ್ಗಹೋರಾಟಗಳನ್ನು ತೀಕ್ಷ್ಣಗೊಳಿಸಲು ತಾತ್ವಿಕ ಬುನಾದಿಯನ್ನು ಮತ್ತು ಸೈದ್ಧಾಂತಿಕ ನೆಲೆಗಟ್ಟನ್ನು ಒದಗಿಸಬಲ್ಲದು. ಆದ್ದರಿಂದ, ಮಾರ್ಕ್ಸ್‌ವಾದವೇ ಇಂದು, ಬಂಡವಾಳಶಾಹಿಯನ್ನು ದಾಟಿ ಹೋಗುವ ವರೆಗೆ, ವಾಸ್ತವ ಜಗತ್ತನ್ನು ಬದಲಿಸಲು, ಅದನ್ನು ಒಂದು ಉತ್ತಮ ಜಗತ್ತಾಗಿ ಬದಲಿಸಲು, ಮಾನವರಿಂದ ಮಾನವರ ಹಾಗೂ ದೇಶಗಳಿಂದ ದೇಶಗಳ ಶೋಷಣೆಯನ್ನು ಕೊನೆಗೊಳಿಸಲು ಸಮರ್ಥವಾದ ಏಕೈಕ ಶಕ್ತಿಯಾಗಿ ಉಳಿದಿದೆ ಮತ್ತು ಉಳಿಯುತ್ತದೆ.

(ಸಂಪುಟ 12, ಸಂಚಿಕೆ 20 ಮೇ 14–20, 2018 ರಲ್ಲಿ ಜನಶಕ್ತಿಯಲ್ಲಿ ಪ್ರಕಟವಾದ ಭಾಷಣದ ಅನುವಾದವನ್ನು ಮತ್ತೆ ಪ್ರಕಟಿಸಲಾಗುತ್ತಿದೆ.)

ಚಿಂತನೆ

ಯಾವುದು "ಧರ್ಮ" ಮಾರ್ಗ..? ಭಾರತದಲ್ಲಿ ಇರುವುದೆಲ್ಲವೂ "ಜಾತಿ" ಮಾರ್ಗವೇ..!

ಎನ್. ಚಿನ್ನಸ್ವಾಮಿ ಸೋಸಲೆ

ಆದರೆ ಕಾಲಕಾಲಕ್ಕೆ ಭಾರತಕ್ಕೆ ಆಗಮಿಸಿದವರು–ದಾಳಿ ಮಾಡಿದವರು–ಪ್ರವೇಶ ಮಾಡಿದವರು ತಮ್ಮ ಧರ್ಮಗಳನ್ನು ಇಲ್ಲಿ ಪ್ರತಿಷ್ಠಾಪಿಸಲು ಮುಂದಾಗಿ ಭಾರತದ ನೆಲಮೂಲ ಸಂಸ್ಕೃತಿಯ ನಿಜ ಧರ್ಮಗಳನ್ನೇ ತಮ್ಮ ತೋಳ್ತೆಕ್ಕೆಗೆ ತೆಗೆದುಕೊಂಡ ಮೇಲೆ ಭಾರತದಲ್ಲಿ ಧರ್ಮ ಎಂಬ ಸತ್ಯ ಮರೆಮಾಚಿತು. ಪ್ರಸ್ತುತ ಸಂದರ್ಭದಲ್ಲಂತೂ ಭಾರತದಲ್ಲಿ ಧರ್ಮ ಎಂಬುದೇ ಇಲ್ಲ–ಇರುವುದೆಲ್ಲವೂ ಸಹ ಜಾತಿಗಳೇ.

ಜಾತಿಗಳು ಎಂದಿಗೂ ಸಹ ಧರ್ಮವಾಗಲು ಸಾಧ್ಯವಿಲ್ಲ. ಹಾಗೆಯೇ ಧರ್ಮವು ಸಹ ಜಾತಿಯಾಗಲು ಸಾಧ್ಯವಿಲ್ಲ.

"ಧರ್ಮ" ತಂದೆ ತಾಯಿಯ ಸ್ಥಾನದ ಅತಿ ಎತ್ತರದಲ್ಲಿ ನಿಂತು ತನ್ನ ಮಕ್ಕಳು ಅಂದರೆ ಧರ್ಮದ ಅಧೀನದಲ್ಲಿ ಬರುವ "ಜಾತಿಗಳ" ನ್ನು ಸತ್ಮಾರ್ಗದಲ್ಲಿ ನಡೆಯಲು ಮುಂದಾಗಬೇಕು. ಕನ್ನಡ ನೆಲದ ಆದಿ ಕವಿ ಪಂಪ ಹೇಳಿರುವ ಹಾಗೆ "ಮನುಷ್ಯ ಜಾತಿ ತಾನೊಂದೇ ವಲಂ" ಎನ್ನುವ ಹಾಗೆ ನೆಲದ ವಾರಸುದಾರ ಬಸವಣ್ಣ ಹೇಳಿದ ಹಾಗೆ "ದಯವೇ ಧರ್ಮದ ಮೂಲವಯ್ಯ" ಎನ್ನುವ ಹಾಗೆ ಸರ್ವರಿಗೂ ಲೇಸನ್ನೇ ಬಯಸುವ ಮಾದರಿಯ ಮಾರ್ಗದರ್ಶನ ಮಾಡುತ್ತದೆ.

ಆದರೆ.., ಜಾತಿಗಳೇ ಧರ್ಮವನ್ನು (ತಂದೆ–ತಾಯಿಯರನ್ನು) ಮೀರಿಸುವ ಹಾಗೆ ನಾನು, ನನ್ನದೆಂಬ "ನಾನತ್ವದ" ಹಿನ್ನೆಲೆಯಿಂದ ಬೆಳೆದು ನಿಂತರೆ ಅಥವಾ ಇಂದು ನಿಂತಿರುವ ಮಾದರಿಯಲ್ಲಿ ಜಾತಿಗಳು ಗಟ್ಟಿಯಾಗಿ ತಮ್ಮ ಜಾತಿಯ ಹಿನ್ನೆಲೆಯಿಂದಲೇ ಧರ್ಮವನ್ನೇ ನಾನು ಸೃಷ್ಟಿಸಿದ್ದು, ಭಾರತದಲ್ಲಿ ಧರ್ಮಸ್ಥಾಪನಚಾರ್ಯರು ನಮ್ಮ ಜಾತಿಯವರು, ನಮ್ಮ ಜಾತಿಯವರು ಕೊಟ್ಟ ಎಂಜಲು ಅಣ್ಣನ್ನೇ ಧರ್ಮದ ಹಿನ್ನೆಲೆಯ ದೇವರುಗಳು ತಿಂದದ್ದು, ನಾನೇ ಅವರನ್ನು ದೋಣಿಯಲ್ಲಿ ಕೂರಿಸಿಕೊಂಡು ನದಿ ದಾಟಿಸಿದ್ದು, ನಾನೇ ಅವರಿಗೆ ಮೊದಲು ಬಟ್ಟೆಯನ್ನು ಒಲಿದುಕೊಟ್ಟದ್ದು, ನಾನೇ ಅವರಿಗೆ ಬಂಗಾರದ ಒಡವೆಗಳನ್ನು ಮಾಡಿಕೊಟ್ಟದ್ದು, ನಾನು ಗಾಣದಿಂದ ತೆಗೆದ ಎಣ್ಣೆಯನ್ನೇ ಅವರು ಮಂಗಳಾರತಿ ಮಾಡಲು ದೀಪ ಹಚ್ಚಲು ಬಳಸುವುದು, ನಾನು ಮಾಡಿದ ಮಡಿಕೆಯೇ ಅವರ ಪೂಜೆಗೆ ಶ್ರೇಷ್ಠವಾದದ್ದು ಇತ್ಯಾದಿ ಇತ್ಯಾದಿ ಹಿನ್ನೆಲೆಯಿಂದಲೇ ದೇವರ ಮೂಲದಿಂದ ತಮ್ಮ ಜಾತಿಯನ್ನು ಬಹು ವೈಭವವಾಗಿ ಗುರುತಿಸಿಕೊಳ್ಳುವ ಹಿನ್ನೆಲೆಯಿಂದ ಧರ್ಮ ಎಂಬುದು ಒಡೆದು ಚೂರು ಚೂರಾಗಿ–ಚೂರು ಚೂರಾದ ಧರ್ಮದ ತುಂಡುಗಳು ಅದರದೇ ಆದ ಹೆಬ್ಬಾಗಿಲುಗಳನ್ನು ನಿರ್ಮಾಣ ಮಾಡಿ ಕೊಂಡಿವೆ. ಈ ಹಿನ್ನೆಲೆಯಿಂದ ಬಹುದೊಡ್ಡ ಜನತೆ ನಿಜ ಧರ್ಮದೊಳಗೆ ಬರುವುದು ಗೊತ್ತಿಲ್ಲದೇ–ಕಷ್ಟಪಟ್ಟು ಒಂದಷ್ಟು ಧರ್ಮದೊಳಗೆ ಬಂದರೂ ಸಹ ಅದರೊಳಗಿನ ವಿಷ ವರ್ತೂಲಕ್ಕೆ ಸಿಲುಕಿ ಹೊರಗೆ ಹೋಗುವುದೋ ತಿಳಿಯದೆ ಅಜ್ಞಾನದ ಕೊಂಪೆಯಲ್ಲಿ ತನಗೆ ತಾನೆ ಬೌದ್ಧಿಕವಾಗಿ ಮೂಲೆಗುಂಪಾಗುತ್ತಿದ್ದಾನೆ.

ಪ್ರಸ್ತುತ ಸಂದರ್ಭದಲ್ಲಿ ಭಾರತ ಇಂತಹ ಎಡಬಿಡಂಗಿ ತತ್ವ ಸಿದ್ಧಾಂತದ ಅಡಿಯ ಧರ್ಮದ ಭಾರತದಲ್ಲಿ ಸಿಲುಕಿದೆ.

ಭಾರತದ ಜನರಿಗೆ ತಮ್ಮ ಜಾತಿ ಗೊತ್ತೇ ಹೊರತು–ತಮ್ಮ ಧರ್ಮ ಯಾವುದೆಂದು ಗೊತ್ತೇ ಇಲ್ಲ.

ಜಾತಿಯಲ್ಲೇ ಹುಟ್ಟಿ–ಜಾತಿಯಲ್ಲೇ ಬೆಳೆದು–ಜಾತಿಯಲ್ಲೇ ಸಾಯುವುದು, ಸತ್ತ ನಂತರವೂ ಅವರವರ ಜಾತಿಗೆ ಮೀಸಲಾದ ಸ್ಮಶಾಣಗಳಲ್ಲಿ ಗೃತ ದೇಹವನ್ನು ಊಳುವ ಅಥವಾ ಸುಡುವ ಕಟ್ಟುನಿಟ್ಟಾದ ಪದ್ಧತಿ ಭಾರತದ ಬಹುದೊಡ್ಡ ಜನ ಸಂಸ್ಕೃತಿಯ ವಾಸ್ತವದ ನಿದರ್ಶನವಾಗಿದೆ.

ನಾವು ಭಾರತದ ಧರ್ಮ ಸಂಸ್ಥಾಪಕರು, ಈ ಧರ್ಮ ಭಾರತ ನೆಲದಲ್ಲಿ ಶಾಶ್ವತವಾಗಿ ಉಳಿಯಬೇಕೆಂದು ಇಂದು ಬೀದಿಯಲ್ಲಿ ನಿಂತು ಹೋರಾಡುತ್ತಿರುವವರು ಸಹ ತಮ್ಮ ತಮ್ಮದೇಯಾದ ಜಾತಿಯ ಬಲೆಯಲ್ಲಿಯೇ ಸಿಲುಕಿರುವುದು ದುರಂತ. ಈ ಜಾತಿಯೆಂಬ ಬಿಡಿಸಲಾಗದ ಸಂಕೋಲೆಯಿಂದ ಹೊರಬರಲಾಗದೆ ಐಡೆಂಟಿಟಿಗಾಗಿ ಮಾತ್ರ ಧರ್ಮವನ್ನು ಮತ್ತೆ ಮತ್ತೆ ಸ್ವಾರ್ಥ ಸಾಧನೆಯ ಬಂಡವಾಳದ ಸರಕಾಗಿಸಿಕೊಂಡು ಒತ್ತಿ ಒತ್ತಿ ಹೇಳುವ ಅವಶ್ಯಕತೆ ಇಂದಿನ ಪ್ರಜಾಪ್ರಭುತ್ವ ಭಾರತದ ಎಪ್ಪತೆಂಟು ವರ್ಷದ ಸಂದರ್ಭದಲ್ಲಿ ಬಂದೊದಗಿದೆ.

ಈ ಐಡೆಂಟಿಟಿ ತಂದುಕೊಳ್ಳುವುದು ಸಹ ಜಾತಿಗಳನ್ನು ಧಿಕ್ಕರಿಸಿ, ಜಾತಿ ಆಧಾರದಿಂದ ಆಗುತ್ತಿರುವ ಮಾನವ ಕುಲದ ಅಪಮಾನಗಳನ್ನು ಸಂಹರಿಸಿ ಒಟ್ಟುಗೂಡಿಸುವ ಆಧಾರದಲ್ಲಲ್ಲ, ಬದಲಿಗೆ ಅನ್ಯ ಧರ್ಮೀಯರ ಜೊತೆ ಬಹುದೊಡ್ಡ ಸಂಘರ್ಷವನ್ನು ಕೋಮು ಭಾವನೆಯಿಂದ ಉಂಟು ಮಾಡಿ, ಸಮಾಜದಲ್ಲಿ ಅಶಾಂತಿಯನ್ನು ನಿರ್ಮಾಣ ಮಾಡುವ ಮೂಲಕ ತಮ್ಮ ತಮ್ಮ ಧರ್ಮವನ್ನು ಸ್ವಾರ್ಥಕ್ಕಾಗಿ ಬಾಹ್ಯ ಲೋಕಕ್ಕೆ ತೋರ್ಪಡಿಸಿಕೊಳ್ಳುವುದೇ ಆಗಿದೆ. ಇದಕ್ಕೆ ಭಾರತದಲ್ಲಿ ಆಗುತ್ತಿರುವ ಸಮಕಾಲಿನ ಸಂದರ್ಭದ ಜ್ವಲಂತ ಘಟನೆಗಳೇ ಸಾಕ್ಷಿಕರಿಸುತ್ತವೆ.

ಈಗ ಭಾರತೀಯರು ತುಂಬಾ ಬಲವಂತದಿಂದ, ಯಾರನ್ನೂ ಮೆಚ್ಚಿಸಲು ಅಥವಾ ಇನ್ನೊಬ್ಬರಿಂದ ಮೆಚ್ಚಿಸಿಕೊಳ್ಳಲು ಹುಟ್ಟಿಸಿಕೊಳ್ಳುವ, ಇದೇ ನಮ್ಮ ಧರ್ಮ ಎಂದು ಅನೇಕ ಇಕ್ಕಟ್ಟು ಬಿಕ್ಕಟ್ಟುಗಳ ನಡುವೆ ಬಹು ಕಷ್ಟದಿಂದ ಹೇಳಿಕೊಳ್ಳುವ ಧರ್ಮ ತಮಗೆ ತಾವೇ ಏರಿಕೊಂಡ ಧರ್ಮವೇ ಹೊರತು, ನಿಜ ಧರ್ಮದ ತತ್ವ ಸಿದ್ಧಾಂತದ ಅಡಿಯಲ್ಲಿ ಮನಸೋ ಇಚ್ಛೆಯಿಂದ ನಿರ್ಮಲವಾಗಿ ಅಪ್ಪಿಕೊಂಡದ್ದಲ್ಲ.

ಧರ್ಮ ಎಂಬುವುದು ಸರ್ವಜನಾಂಗವು ಒಟ್ಟಾಗಿ ಬದುಕುವ ಪರಿಸರದ ಶಾಂತಿಯ ತೋಟ. ಇದೆ ನಿಜವಾದ ಧರ್ಮದ ಸಾರ. ಮುಂದುವರೆದು, ಈ ವಸುವಿನಲ್ಲಿ (ಭೂಮಿಯಲ್ಲಿ) ವಾಸಿಸುವ ಪ್ರತಿಯೊಬ್ಬ ಮನುಷ್ಯ ಜೀವಿಯು ಸಹ "ವಸುದೇವ ಕುಟುಂಬಕಂ" (ಭೂಮಿ ಮೇಲೆ ವಾಸಿಸುವ ಸಕಲ ಮನುಷ್ಯ ಜೀವಿಯು ಒಂದೇ ಕುಟುಂಬಕ್ಕೆ ಸೇರಿದವರು, ನಾವೆಲ್ಲರೂ ಸಹೋದರ ಭಾತೃತ್ವದ ನೆಲೆಯಲ್ಲಿ ಜೀವಿಸಬೇಕಾದವರು ಇಂದರ್ಥ) ಎನ್ನುವ ಹಾಗೆ ರೂಪಿತಗೊಂಡಿದ್ದಾಗಿರುತ್ತದೆ. ಆದರೆ ಇಂದು ಈ ವಸುವಿನಲ್ಲಿ ಜೀವಿಸುತ್ತಿರುವ ಜನ "ತಾನೊಂದೇ ವಲಂ" ಎಂಬುವುದನ್ನು ಹೊರತುಪಡಿಸಿ "ಬಿಳಿಯ–ಕರಿಯ" "ಸ್ಪೃಶ್ಯ–ಅಸ್ಪೃಶ್ಯ" ಎಂಬ ಬಹುದೊಡ್ಡ ವರ್ಣಭೇದ ಹಾಗೂ ಜಾತಿ ಭೇದಗಳ ನೀತಿಯ ವಿಷದ ವರ್ತುಲದಲ್ಲಿ ಸಿಲುಕಿ ಇತ್ತ ನುಂಗಲು ಆಗದೆ–ಅತ್ತ ಉಗಳಲ್ಲೂ ಆಗದೆ ಗಂಟಲಲ್ಲಿ ಜಾತಿ ಎಂಬ ಅಂಧಕಾರದ ಬಹುದೊಡ್ಡ ವಿಷ ವನ್ನು ಇಟ್ಟುಕೊಂಡು ನರಳುತ್ತಿದೆ. ಅಂದರೆ ಇತ್ತ ಧರ್ಮವನ್ನು ಒಪ್ಪಿಕೊಳ್ಳಲಾಗದೆ, ಧರ್ಮ ಪ್ರತಿಪಾದನೆ ಮಾಡುವ ಹಿನ್ನೆಲೆಯ ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎಂಬ ಸಿದ್ಧಾಂತದ ಹಿನ್ನೆಲೆಯಲ್ಲಿ ಒಪ್ಪಿಕೊಳ್ಳದ ಜಾತಿಯನ್ನು ಬಿಡಲಾಗದೆ ಅತಂತ್ರ ಸ್ಥಿತಿಯಲ್ಲಿ ಪ್ರತಿಕ್ಷಣ ನರಳುತ್ತಿದೆ.

ಇನ್ನು ನಮ್ಮ ದೇಶದಲ್ಲಂತೂ ಧರ್ಮವನ್ನು ಮೀರಿ ಜಾತಿಗಳು ಮಾತಾಡುತ್ತವೆ. ಈ ಜಾತಿಗಳು ರೆಕ್ಕೆ– ಪುಕ್ಕಗಳನ್ನು ಕಟ್ಟಿಕೊಂಡು ಮುಗಿಲೆತ್ತರದ ಹಾರಾಟ ಹಾಗೂ ಈ ಭೂಲೋಕವೇ ಕಂಡು ಅರಿಯದ ಮೆರೆದಾಟಗಳ ಮುಂದೆ ಧರ್ಮ ಸಾಕ್ಷಾತ್ಕಾರದಿಂದ ಬದುಕಲು ಬಹುದೊಡ್ಡ ಧರ್ಮಸಂಕಟಕ್ಕೆ ಸಿಲುಕಿದೆ. ಭಾರತದಲ್ಲಿ ಧರ್ಮವೇ ಧರ್ಮ ಸಂಕಟಕ್ಕೆ ಸಿಲುಕಿರುವುದು ಇಲ್ಲಿನ ಕಟ್ಟುನಿಟ್ಟಿನ ಜಾತಿ ವ್ಯವಸ್ಥೆಯಿಂದ ಎಂಬುದನ್ನು ನಾವ್ಯಾರೂ ಮರೆಯಬಾರದು.

ಪ್ರಸ್ತುತ ಸಂದರ್ಭದಲ್ಲಿ ಭಾರತದಲ್ಲಿ ಧರ್ಮದ ಸಂಕಟ ಹೇಗಿದೆ ಎಂದರೆ "ಧರ್ಮವೆಂಬ ನೀರಿನ ಪಾತ್ರೆಯಲ್ಲಿ ಕೇವಲ ಬೇಳೆಯನ್ನು ಮಾತ್ರ ಹಾಕಿ ಮೂಲಭೂತ ಧರ್ಮ ಪ್ರತಿಪಾದಕರು ಹಾಗೂ ಧರ್ಮ ಸಂಸ್ಥಾಪಕರು ಎಂದು ಹೇಳಿಕೊಳ್ಳುವವರು ಒಲೆಯನ್ನು ಹಚ್ಚದೆ, ಒಲೆಯ ಮೇಲೆ ನೀರಿನ ಪಾತ್ರೆ ಹಾಗೂ ಬೇಳೆಯನ್ನು ಹಾಕಿಟ್ಟು ಇದನ್ನು

> ಭಾರತದ ನೆಲದಲ್ಲಿ ಸ್ಥಾಪಿತವಾದ ಬೌದ್ಧ ಹಾಗೂ ಜೈನ ಧರ್ಮಗಳು ಪ್ರವರ್ಧ ಮಾರ್ಗದಲ್ಲಿ ಇದ್ದ ಸಂದರ್ಭದಲ್ಲಿ ಭಾರತದ ನೆಲದಲ್ಲಿ ಧರ್ಮ ಪ್ರಭುತ್ವದೊಂದಿಗೆ ಸಮೀಕರಿಸಿಕೊಂಡು ಜನತೆಯೊಂದಿಗೆ ಮಾತನಾಡಿದವು.



ಧರ್ಮಕ್ಕೆ ಸಮೀಕರಿಸಿಕೊಂಡಿರುವ ಸಾಕ್ಷಾತ್ ದೇವರೇ ಪ್ರತ್ಯಕ್ಷವಾಗಿ ತನ್ನ ಅಗಾಧ ಶಕ್ತಿಯಿಂದಲೇ ಬೆಳೆಯನ್ನು ಬೆಳೆಸುತ್ತದೆ ಎಂದು ಅವೈಜ್ಞಾನಿಕ ಹಿನ್ನಲೆಯ ಅಜ್ಞಾನದ ಪ್ರತಿಪಾದನೆ ಮಾಡಿ, ಈ ಪುರಾಣದ ಹಿನ್ನೆಲೆಯಿಂದಲೇ ಧರ್ಮ ಸ್ಥಾಪನೆಗೆ ಮುಂದಾದರೆ, ಇವರ ಈ ಅಜ್ಞಾನದ ದೇವರು ಲೇಪಿಸ ಧರ್ಮದ ಪ್ರತಿಪಾದನೆಗೆ "ಜಾತಿಯ" ಜನ, ತಮ್ಮ ಬಹುದೊಡ್ಡ ಶ್ರಮದಾಯಕ ದುಡಿಮೆಯ ಮೂಲಕ ಶತಶತಮಾನಗಳಿಂದ ಪುರಾಣ ಲೇಪಿತ ಹಿನ್ನಲೆಯ ಧರ್ಮ ಸಂಸ್ಥಾಪಕರ ವೈಭವದ ಜೀವನಕ್ಕೆ ಶ್ರಮದ ಮೂಲಕ ಆಧಾರವಾದರು. ಇವರು ಅವರದಲ್ಲದ ಧರ್ಮವನ್ನು ಪುರಾಣದ ಹಿನ್ನೆಲೆಯಿಂದ ಜಾತಿಗೆ ಸಮೀಕರಿಸಿಕೊಂಡು ಕಲ್ಪನಾ ಲೋಕದ ಧರ್ಮದ ಅಂಧಕಾರದಲ್ಲಿಯೇ ಬದುಕಿದರು. ಇವರ ಇಂತಹ ಅಜ್ಞಾನದ ಬದುಕೇ ಧರ್ಮ ಇನ್ನೂ ಸಹ ಭಾರತೀಯರಿಗೆ ದೊರಕದೆ ಇರಲು ಕಾರಣವಾಗಿದೆ.


ಏಕೆಂದರೆ ಒಲೆಯನ್ನು ಅಚ್ಚದೆ ಪಾತ್ರೆಯಲ್ಲಿ ನೀರು ಮತ್ತು ಬೇಳೆಯನ್ನು ಮಾತ್ರ ಹಾಕಿ ಒಲೆಯ ಮೇಲೆ ಇಟ್ಟಿರುವುದನ್ನು ಗಮನಿಸಿದ ಈ ನೆಲ ಮೂಲ ಸಂಸ್ಕೃತಿಯ ಸಮಜೀವಿಗಳು ಬಹು ಶ್ರಮವಹಿಸಿ ಕಾಡು –ಮೇಡುಗಳಿಂದ ಕಟ್ಟಿಗೆಯನ್ನು ತಂದು, ಬೆಂಕಿ ಹಚ್ಚಿ ಪಾತ್ರೆಯಲ್ಲಿ ಇಟ್ಟಿದ್ದ ಬೆಳೆಯನ್ನು ಹದವಾಗಿ ಅನೇಕ ದೇವರ ಹೆಸರಿನ ಮಾಲೆಗಳನ್ನು ಕೊರಳಿಗೆ ಹಾಕಿಕೊಂಡು, ಆ ಮೂಲಕ ಜಾತಿಯಾಧರಿತ ಧರ್ಮದ ಚೌಕಟ್ಟಿಗೆ ಸಿಲುಕಿ ಧರ್ಮದ ಸಾಲವನ್ನು ಅರಿಯದೆ–ಜಾತಿಯ ಬೌದ್ಧಿಕ ಮೌಲ್ಯವನ್ನು ತಿಳಿಯದೆ ಬೇಯಿಸುತ್ತಿದ್ದಾರೆ. ಹೀಗೆ ಜಾತಿ ಆಡಳಿತ ಹಿನ್ನೆಲೆಯಿಂದ ಶ್ರಮಪಟ್ಟು ಬೇಳೆ ಬೇಯಿಸಲು ಮುಂದಾಗುವ ಕೆಲವರು ತಮ್ಮ ತಮ್ಮ ಜಾತಿಯ ನಾನತ್ವದಿಂದ ಮೆರೆದರೆ, ಮತ್ತೊಬ್ಬರು ತಮ್ಮ ಜಾತಿಗೆ ಹಿನ್ನೆಲೆಯ ಕೀಳಿರಿಮೆಯಿಂದ ಸೊರಗುತ್ತಿದ್ದಾರೆ. ಇವರ ಮೇಲಿರಿಮೆ ಹಾಗೂ ಕೀಳಿರಿಮೆ ಮಾತ್ರ ಧರ್ಮ ಜವಾಬ್ದಾರಿಯಲ್ಲ. ಸಂಪೂರ್ಣ ಜವಾಬ್ದಾರಿ ಅವರ ಜಾತಿಗಳೇ.

ಆದರೆ ಅತ್ಯಂತ ಶ್ರಮಪಟ್ಟು, ಹೋರಾಟ ಮಾಡಿ ಜಾತಿಯ ಜನ ಬೇಯಿಸಿದ ಈ ಬೇಳೆಯನ್ನು ತಾವುಗಳು ಮಾತ್ರ ಯಾವುದೇ ಸಂದರ್ಭದಲ್ಲಿಯೂ ಮುಟ್ಟಲು ಆಗದೆ ಹೊರ ನಿಲ್ಲುತ್ತಾರೆ. ಈ ಸಂದರ್ಭದಲ್ಲಿ ಮಾತ್ರ ಧರ್ಮ ಸ್ಥಾಪಕರಿಗೆ ಹಾಗೂ ದೇವರ ಹಿನ್ನೆಲೆಯ ಧರ್ಮದ ವಾರಸುದಾರರಿಗೆ ಇವರೆಲ್ಲರೂ ಸಹ ಜಾತೀಯ ಜನರೇ. ಹೀಗೆ ಹದವಾಗಿ ನಯವಾಗಿ ಬೆಂದ ಬೇಳೆಯನ್ನು ಮುಟ್ಟುವವರು ಮಾತ್ರ ಇಂದು ಸ್ವಾರ್ಥ ಸಾಧನೆಗೆ ಧರ್ಮವನ್ನು ಬಳಸಿಕೊಳ್ಳುತ್ತಿರುವವರು.

ಇದನ್ನು ಶತಶತಮಾನಗಳಿಂದಲೂ ಧರ್ಮದ ಚೌಕಟ್ಟಿಗೆ ಒಳಪಡದೆ ಕೇವಲ ಜಾತಿಯ ಜನರಾಗಿಯೇ ಇರುವ ಬಹುದೊಡ್ಡ ಈ ನೆಲ ಮೂಲ ಸಂಸ್ಕೃತಿಯ ದುಡಿಯುವ ಜನ ವರ್ಗ ಮಾತ್ರ ಬೇಳೆ ಬೇಯುವಾಗ ಹೊರಬರುವ ಗಮಲನ್ನೆ ಮೂಗಿನಿಂದ ಸವಿಯುತ್ತ, ಮೃಷ್ಟಾನ್ನ ತಿಂದಂತೆ ಕಲ್ಪಿಸಿಕೊಂಡು ಧರ್ಮ ನಮ್ಮದು ಎಂದು ಹೇಳಿಕೊಳ್ಳುವ ಆಧಾರದಲ್ಲಿ ಅರ್ಥವಿಲ್ಲದ ಹೋರಾಟ ಮಾಡುತ್ತಿದ್ದಾರೆ. ಈ ನೆಲದ ಸಂಸ್ಕೃತಿಯ ಸೃಷ್ಟಿಕರ್ತರಾದ ಜನ ವರ್ಗ ಇಂತಹ ಮರ್ಮವನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಬಹುಜನರ ಕಟ್ಟಿಗೆ ಹಾಗೂ ಬೆಂಕಿಯಿಂದ ಬೇಳೆಯನ್ನು ಹದವಾಗಿ ಬೇಯಿಸಿಕೊಂಡು ಹೊಟ್ಟೆ ತುಂಬಾ ಸಮಯ ಸಮಯಕ್ಕೆ ಸರಿಯಾಗಿ ಉಣ್ಣುವವರು ಇಲ್ಲಿ ಧರ್ಮ ಸ್ಥಾಪಕರು ಹಾಗೂ ನಿಯಂತ್ರಕರು ಆಗಿದ್ದಾರೆ. ಶ್ರಮದಿಂದ ಧರ್ಮವನ್ನು ಕಟ್ಟಿದವರು ಇಲ್ಲಿ ಧರ್ಮ ಹೀನರಾಗಿ ಜಾತಿಯ ಜನರಾಗಿದ್ದಾರೆ.

ಈ ಹಂತದಲ್ಲಿ ದೇವರನ್ನೇ ಆಧಾರವಾಗಿಟ್ಟುಕೊಂಡಿರುವ ಏಕಮುಖ ಚಿಂತನೆಯ ದೇವರು ಲೇಪಿತ ಧರ್ಮದ 'ತೀರ್ಥ' ಮೆರೆಯುತ್ತಿದೆಯೇ ಹೊರತು–ಕಾಯಕವನ್ನೇ ಆಧಾರವಾಗಿಟ್ಟುಕೊಂಡಿರುವ ಬಹುದೊಡ್ಡ ಶ್ರಮಜೀವಿಗಳ 'ಬೆವರಿನಿಂದ' ಸ್ಥಾಪಿತವಾದ ನಿಜ ಧರ್ಮ ಸೋಲುತಿದೆ. 'ತೀರ್ಥ' ಪುರಾಣವನ್ನು ವೈಭವಿಕರಿಸುತ್ತದೆ. 'ಬೆವರು' ವಾಸ್ತುವನ್ನು ಮನವರಿಕೆ ಮಾಡುತ್ತದೆ. ನಮ್ಮ ದೇಶ ಭಾರತ ಪುರಾಣದ ಭಾರತವಲ್ಲ ಬದಲಿಗೆ ಬುದ್ಧ, ಅಶೋಕ, ಬಸವಣ್ಣ, ಅಂಬೇಡ್ಕರ್ ಅವರು ರೂಪಿಸಿದ ವಾಸ್ತವದ ಭಾರತ.

ಏಕೆಂದರೆ, ಇಂದು ತಿರುಪತಿ ತಿಮ್ಮಪ್ಪನ ಸನ್ನಿಧಾನದಲ್ಲಿ ಕೇವಲ ಪುಟ 15 ಕ್ಕೆ





ನೆನಪು: ವಿದ್ಯಾರ್ಥಿ ನಾಯಕ ಸೀತಾರಾಮ್ ಯೆಚೂರಿ

ಎಂ.ಎ. ಬೇಬಿ

ಕಾಮ್ರೇಡ್ ಸೀತಾರಾಮ್ ಯೆಚೂರಿ ಮತ್ತು ನನ್ನ ನಡುವಿನ ನಿಕಟ ಸಂಬಂಧವು 45 ವರ್ಷಗಳ ಹಿಂದೆ ಅಂದರೆ, 1979 ರಲ್ಲಿಯೇ ಆರಂಭಗೊಂಡಿತು. ಸುಧೀರ್ಘವಾದ ಈ ಸಂಭಂದ ನಿರಂತರವಾಗಿತ್ತು. ಫೆಬ್ರವರಿ 1979 ರಲ್ಲಿ ಪಾಟ್ನಾದಲ್ಲಿ ನಡೆದ 3ನೇ ಅಖಿಲ ಭಾರತ ಎಸ್.ಎಫ್.ಐ. (ಭಾರತ ವಿದ್ಯಾರ್ಥಿ ಫೆಡರೇಶನ್) ಸಮ್ಮೇಳನದಲ್ಲಿ ಎಸ್‌ಎಫ್‌ಐ ನ ಕೇಂದ್ರದ ಪದಾಧಿಕಾರಿಗಳಾಗಿ ಇತರರೊಂದಿಗೆ ನಮ್ಮನ್ನು ಆಯ್ಕೆ ಮಾಡಲಾಯಿತು. ಅಲ್ಲಿಯವರೆಗೂ ಕಾಮ್ರೇಡ್ ಪ್ರಕಾಶ್ ಕಾರತ್ ಅವರು ತಮ್ಮ ಸ್ವಂತ ರಾಜ್ಯಗಳಿಂದ ಕೆಲಸ ಮಾಡುತ್ತಿದ್ದ ಇತರ ಪದಾಧಿಕಾರಿಗಳ ಬೆಂಬಲದೊಂದಿಗೆ ಅಖಿಲ ಭಾರತ ಕೇಂದ್ರವನ್ನು ಏಕಾಂಗಿಯಾಗಿ ನಿರ್ವಹಣೆ ಮಾಡುತ್ತಿದ್ದರು.

ಆ ಸಮ್ಮೇಳನದ ನಂತರ, ದೆಹಲಿಯಲ್ಲಿ ಅಖಿಲ ಭಾರತ ಕೇಂದ್ರವನ್ನು ಸ್ಥಾಪಿಸಲು ನಿರ್ಧರಿಸಲಾಯಿತು. ಅದರಲ್ಲಿ ನಾವು 5 ಕಾರ್ಯಕರ್ತರನ್ನು ಹೊಂದಿದ್ದವು, ನೇಪಾಳದೇಬ್ ಭಟ್ಟಾಚಾರ್ಯ, ಪ್ರಧಾನ ಕಾರ್ಯದರ್ಶಿ, ಸೈಫುದ್ದೀನ್ ಚೌಧರಿ, ಉಪಾಧ್ಯಕ್ಷರಾಗಿ, ಸೊಹೈಲ್ ಹಶ್ಮಿ, ಖಜಾಂಚಿ, ಸೀತಾರಾಮ್ ಯೆಚೂರಿ, ಜಂಟಿ ಕಾರ್ಯದರ್ಶಿ, ಮತ್ತು ನಾನು ಅಧ್ಯಕ್ಷನಾಗಿದ್ದು, ಈ ಪದಾಧಿಕಾರಿಗಳು ಕೇಂದ್ರದಿಂದ ಕೆಲಸ ಮಾಡಲು ಪ್ರಾರಂಭಿಸಿದೆವು.

ಅಂದಿನ ಸಂಸತ್ ಸದಸ್ಯರಾಗಿದ್ದ, ಕಾಮ್ರೇಡ್ ಸುಶೀಲಾ ಗೋಪಾಲನ್ ಅವರಿಗೆ ನವ ದೆಹಲಿಯ ನಂ.20 ಜನ್ ಪಥ್ ಪ್ರದೇಶದಲ್ಲಿ ಸಣ್ಣ ಕೊಠಡಿಯನ್ನು ನೀಡಲಾಗಿತ್ತು. ಅಲ್ಲಿ ನಮ್ಮ ಕೇಂದ್ರದ ಕೆಲಸ ನಡೆಸಲು ಸಿಪಿಐ(ಎಂ) ಅವಕಾಶವನ್ನು ಕಲ್ಪಿಸಿ ಕೊಟ್ಟಿತು. ಸಿಪಿಐ(ಎಂ), ತನ್ನ ಸಂಸತ್ ಸದಸ್ಯರಿಗೆ ಒದಗಿಸಲಾದ ಕೊಠಡಿ ಸೌಲಭ್ಯಗಳಲ್ಲಿ ದೆಹಲಿಯಿಂದ ಕಾರ್ಯನಿರ್ವಹಿಸುವ ಸಂಗಾತಿಗಳಿಗೆ ಅವಕಾಶ ಕಲ್ಪಿಸುವ ವ್ಯವಸ್ಥೆಯನ್ನು ಮಾಡಿತ್ತು.

ನಮ್ಮ ಕೆಲಸದ ಭಾಗವಾಗಿ ಸೀತಾರಾಮ್ ಯೆಚೂರಿ ಅವರೊಂದಿಗೆ ಜಂಟಿಯಾಗಿ ಕೈಗೊಂಡ ಅನೇಕ ಪ್ರವಾಸಗಳನ್ನು ನಾನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತೇನೆ. ನಾವು ರೈಲುಗಳಲ್ಲಿ ಮುಂಗಡ ಕಾಯ್ದಿರಿಸದೆ, ರಾತ್ರಿಯಿಡೀ ಪ್ರಯಾಣಿಸಬೇಕಾದ ಅನೇಕ ಸಂದರ್ಭಗಳಿವೆ.

ಪಂಜಾಬ್ ನಲ್ಲಿ ಖಲಿಸ್ತಾನಿ ಪ್ರತ್ಯೇಕತಾವಾದಿಗಳಂತಹ ಉಗ್ರಗಾಮಿ ಶಕ್ತಿಗಳು ಮತ್ತು ಈಶಾನ್ಯ ರಾಜ್ಯಗಳ ಪ್ರದೇಶಗಳಲ್ಲಿ, ವಿವಿಧ ವಿಭಜಕ ಶಕ್ತಿಗಳು ನಿರಂತರ ದೈಹಿಕ ದಾಳಿಗಳನ್ನು ನಡೆಸುವುದರೊಂದಿಗೆ ಮತ್ತು ವ್ಯವಸ್ಥಿತ ರೀತಿಯಲ್ಲಿ ವಿಚ್ಛಿದ್ರಕಾರಕ ಚಟುವಟಿಕೆಗಳನ್ನು ಆಯೋಜಿಸುವುದರೊಂದಿಗೆ, ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ಸಂಘಟನೆಗಳು ಭಾರೀ ನಷ್ಟವನ್ನು ಅನುಭವಿಸಬೇಕಾಯಿತು.

ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ, ಹೊಸದಾಗಿ ಸ್ಥಾಪನೆಗೊಂಡ ಡೆಮಾಕ್ರಟಿಕ್ ಯೂತ್ ಫೆಡರೇಶನ್ ಆಫ್ ಇಂಡಿಯಾ (ಡಿವೈಎಫ್‌ಐ); ನಾಯಕತ್ವದ ಜೊತೆಗೆ, ಎಲ್ಲಾ ವರ್ಗಗಳ ವಿದ್ಯಾರ್ಥಿಗಳು ಮತ್ತು ಯುವಕರ ನಡುವೆ ವಿಭಜಕ ಚಟುವಟಿಕೆಗಳನ್ನು ಕೇಂದ್ರೀಕರಿಸುವವರ ವಿರುದ್ಧ ಹೋರಾಡಲು ಅಖಿಲ ಭಾರತ ಮಟ್ಟದಲ್ಲಿ ಅಭಿಯಾನವನ್ನು ಪ್ರಾರಂಭಿಸುವ ಬಗ್ಗೆ ನಾವು ತುಂಬ ಗಂಭೀರವಾಗಿ ಚರ್ಚಿಸಿದ್ದೇವೆ. ಆ ಸಂದರ್ಭದಲ್ಲಿ ನಾವು ಕೈಗೊಂಡ ಸಕಾರಾತ್ಮಕ ಘೋಷಣೆಯೆಂದರೆ "ಸರ್ವರಿಗೂ ಶಿಕ್ಷಣ ಮತ್ತು ಸರ್ವರಿಗೂ ಉದ್ಯೋಗಗಳು" (ಸಬ್ ಕೋ ಶಿಕ್ಷಾ ಸಬ್ ಕೋ ಕಾಮ್). ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ಕಾರ್ಯಕರ್ತರು ದೇಶದ ಮೂಲೆ ಮೂಲೆಗಳಲ್ಲಿ ತಲುಪಿ ಈ ಅಭಿಯಾನವು ಪರಾಕಾಷ್ಠೆ ತಲುಪುವಂತೆ ಮಾಡುವಲ್ಲಿ ಯಶಸ್ಸು ಕಂಡೆವು. ನಾವು ಈ ಘೋಷಣೆಯ ಕುರಿತಂತೆ ಸರಿಯಾಗಿ ವಿವರಿಸಲು ಸಾಧ್ಯವಾಯಿತು. "ಮಣ್ಣಿನ ಮಕ್ಕಳು" ನಾವೆಂದು ನಮ್ಮ ಘೋಷಣೆಗೆ ವಿರುದ್ಧವಾಗಿ ಪ್ರಚಾರ ನಡೆಸುವವರನ್ನು ಬಹಿರಂಗ ಪಡಿಸಿದ್ದೇವೆ. ನಮ್ಮ ಘೋಷಣೆಯ ವೈಜ್ಞಾನಿಕ ಪ್ರಾಮುಖ್ಯತೆಯ ಕಾರಣಗಳನ್ನು ವಿವರಿಸಿದ್ದೇವೆ. ಶೋಷಣೆಯ ಸಮಾಜದಲ್ಲಿ ಶಿಕ್ಷಣ ಮತ್ತು ಉದ್ಯೋಗಕ್ಕೆ ಸಂಬಂಧಿಸಿದ ನಿರಂತರ ಸಮಸ್ಯೆಗಳನ್ನು ವಿದ್ಯಾರ್ಥಿಗಳು ಮತ್ತು ಯುವಕರಿಗೆ ಸೂಕ್ತ ರೀತಿಯಲ್ಲಿ ವಿವರಿಸಿದ್ದೇವೆ.

ಕಾಮ್ರೇಡ್ ಸೀತಾರಾಮ್ ಯೆಚೂರಿಯವರು ಸಂಪಾದಕರಾಗಿ, SFI ಮಾಸ ಪತ್ರಿಕೆಯಾದ, "ಸ್ಟೂಡೆಂಟ್ಸ್ ಸ್ಟ್ರಗಲ್" ಈ ಅಭಿಯಾನದಲ್ಲಿ ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿದೆ. ಅವರ ಸಂಪಾದಕೀಯಗಳು ಮತ್ತು ಜರ್ನಲ್ ವಿಷಯವನ್ನು ಕ್ಯಾಂಪಸ್‌ಗಳಲ್ಲಿ ವ್ಯಾಪಕವಾಗಿ ಪ್ರಚಾರ ದೃಷ್ಟಿಯಿಂದ ಬಳಸಲಾಗುತ್ತಿತ್ತು.

ಸೆಪ್ಟೆಂಬರ್ 15, 1981 ರಂದು ಸಂಸತ್ ಭವನ ಮತ್ತು ರಾಷ್ಟ್ರಪತಿ ಭವನದ ಮುಂದಿರುವ 'ಬೋಟ್ ಕ್ಲಬ್ ಮೈದಾನ'ದಲ್ಲಿ ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ಜಂಟಿಯಾಗಿ ಆಯೋಜಿಸಿದ್ದ ವಿದ್ಯಾರ್ಥಿ ಮತ್ತು ಯುವಕರ ಬೃಹತ್ ಬಹಿರಂಗ ಸಭೆಯ ಪ್ರದರ್ಶನ ಮತ್ತು ಮೆರವಣಿಗೆ ಅದ್ಭುತ ಯಶಸ್ಸನ್ನು ಕಂಡಿತು. (ಇದೀಗ ಕೆಲವು ಸಮಯದಿಂದ ಇಲ್ಲಿ ಯಾವುದೇ ಪ್ರದರ್ಶನ ಅಥವಾ ಸಾರ್ವಜನಿಕ ಸಭೆಗಳನ್ನು ಅನುಮತಿ ನೀಡುತ್ತಿಲ್ಲ ಎಂಬುದು ನಮೆಲ್ಲರಿಗೂ ತಿಳಿದಿದೆ.). ಈ ಬೃಹತ್ ಅಖಿಲ ಭಾರತ ಯುವ–ವಿದ್ಯಾರ್ಥಿ ರ‍್ಯಾಲಿಯನ್ನು ಆಯೋಜಿಸುವ ಕಾರ್ಯವು ನಿಖರವಾದ ಕಠಿಣ ಪರಿಶ್ರಮದ ಯೋಜನೆಯನ್ನು ಒಳಗೊಂಡಿತ್ತು. ದೆಹಲಿಯ ಪ್ರಜಾಸತ್ತಾತ್ಮಕ ಚಳವಳಿಯ ಒಡನಾಡಿಗಳ ಸಹಾಯದಿಂದ ಸೀತಾರಾಮ್ ಯೆಚೂರಿ ಮತ್ತು ಸೊಹೈಲ್ ಹಶ್ಮಿ ಇದರಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರು.

ಸಂಪಾದಕರಾಗಿ ಮತ್ತು ಲೇಖಕರಾಗಿ, ಸೀತಾರಾಂ ಯೆಚೂರಿಯವರ ವಿಶಿಷ್ಟ ಗುಣಗಳು ವಿದ್ಯಾರ್ಥಿಗಳ ಹೋರಾಟದ ಸಮಯದಲ್ಲಿ ವ್ಯಾಪಕವಾಗಿ ಅರಳಿದವು. ವಿದ್ಯಾರ್ಥಿ ಚಳವಳಿಯ ಹಿಂದಿನ ವರದಿಗಳು ಮತ್ತು ಪ್ರಸ್ತುತ ವಿದ್ಯಾರ್ಥಿ ಚಳವಳಿಗೆ ಸಂಬಂಧಿಸಿದ ಲೇಖನಗಳು ಖಚಿತ ಜರ್ನಲ್ ನ ವಿಷಯವನ್ನು ರೂಪಿಸಿದವು. ಯೆಚೂರಿ ಅವರು ವಿಜ್ಞಾನ, ಇತಿಹಾಸ, ಸಂಸ್ಕೃತಿ, ಕ್ರೀಡೆ, ಚಲನಚಿತ್ರಗಳು, ಅಂತರರಾಷ್ಟ್ರೀಯ ವ್ಯವಹಾರಗಳು ಮತ್ತು ಮುಂತಾದವುಗಳ ಕುರಿತು ಹೆಚ್ಚುವರಿ ಉತ್ತಮ–ಗುಣಮಟ್ಟದ ವಿಷಯಲೊಂದಿಗೆ ಹೆಚ್ಚು ಗೌರವಾನ್ವಿತ ಮತ್ತು ವ್ಯಾಪಕವಾಗಿ ಓದುವ ಜರ್ನಲ್ ಆಗಿ ಮಾರ್ಪಡಿಸಿದರು.

ಈ ಸಂದರ್ಭದಲ್ಲಿ, ಯೆಚೂರಿ ಅವರು ಅಂತರಾಷ್ಟ್ರೀಯ ಚಲನಚಿತ್ರೋತ್ಸವಕ್ಕಾಗಿ ದೆಹಲಿಗೆ ಭೇಟಿ ನೀಡಿದಾಗ ವಿಶ್ವವಿಖ್ಯಾತ ಕ್ಯೂಬಾದ ಚಲನಚಿತ್ರ ನಿರ್ಮಾಪಕ ತೋಮಸ್ ಗುಟ್ಟೆರೆಜ್ ಅಲಿಯಾ ಅವರೊಂದಿಗೆ ನಡೆಸಿದ ಸಂದರ್ಶನವನ್ನು ನಾನು ನೆನಪಿಸಿಕೊಳ್ಳುತ್ತೇನೆ. ಅದೇ ರೀತಿ ಸ್ಟೂಡೆಂಟ್ಸ್ ಸ್ಟ್ರಗಲ್, ಆಲ್ಬರ್ಟ್ ಐನ್ಸ್ಟೈನ್ ಪ್ರತಿಪಾದಿಸಿದ ಸಾಪೇಕ್ಷತಾ ಸಿದ್ಧಾಂತದ ಕುರಿತು ರಾಜೇಂದ್ರ ಪ್ರಸಾದ್ ಅವರ ಲೇಖನವನ್ನು ಪ್ರಕಟಿಸಿತು. ಲೇಖನವು ಸಂಕೀರ್ಣವಾದ ವೈಜ್ಞಾನಿಕ ಸಿದ್ಧಾಂತವನ್ನು ಸಾಮಾನ್ಯ ವಿದ್ಯಾರ್ಥಿಗಳಿಗೆ ಸರಳ ಭಾಷೆಯಲ್ಲಿ ವಿವರಿಸಲು ಸಾಧ್ಯವಾಯಿತು.

ಕಾಮ್ರೇಡ್ ಸೀತಾರಾಂ ಯೆಚೂರಿ ಅವರು ಮಾದರಿ ಕಮ್ಯುನಿಸ್ಟ್ ಗೆ ಉತ್ತಮ ಉದಾಹರಣೆಯಾಗಿದ್ದರು, ಅವರು ಮಾನವ ಸೃಜನಶೀಲತೆಯ ಪ್ರತಿಯೊಂದು ಕ್ಷೇತ್ರದಲ್ಲೂ ಆಸಕ್ತಿ ಹೊಂದಿದ್ದರು. ಅವರು ಸಾಹಿತ್ಯ; ಚಲನಚಿತ್ರಗಳು, ಕ್ರೀಡೆಗಳು, ಸಂಗೀತ ಮತ್ತು ಆಹಾರವನ್ನು ಹೆಚ್ಚಾಗಿ ಪ್ರೀತಿಸುತ್ತಿದ್ದರು. ವಿಠಲಭಾಯ್ ಪಟೇಲ್ ಹೌಸ್ ಫ್ಲಾಟ್ ನಲ್ಲಿ ವಾಸಿಸುತ್ತಿದ್ದಾಗ, ನಾವೆಲ್ಲರೂ UNI ಆವರಣದಲ್ಲಿರುವ ಹತ್ತಿರದ ಬ್ಯಾಡ್ಮಿಂಟನ್ ಕೋರ್ಟ್‌ಗೆ ಬಾಡ್ಮಿಂಟನ್ ಆಟ (ಶಟಲ್ ಕಾಕ್) ಆಡಲು ಹೋಗುತ್ತಿದ್ದೆವು. ತರಬೇತಿ ಪಡೆದಿದ್ದ ಟೆನಿಸ್ ಆಟಗಾರನಾಗಿದ್ದರಿಂದ ಯೆಚೂರಿ ಅವರ ಆಟದಲ್ಲಿನ ಕೆಲವು ಹೊಡೆತಗಳು ಎದುರಾಳಿಗಳನ್ನು ತೀವ್ರ ಮುಜುಗರಕ್ಕೆ ಸಿಲುಕಿಸುತ್ತಿದ್ದವು. ಅವರು ಪಾಲ್ ರೋಬ್ಸನ್, ಬಾಬ್ ಮಾರ್ಲಿ, ಹ್ಯಾರಿ ಬೆಲಾಫೊಂಟೆ, ಬಾಲ ಮುರಳಿ ಕೃಷ್ಣ, ಮುಹಮ್ಮದ್ ರಫಿ, ಲತಾ ಮಂಗೇಶ್ಕರ್ ಮತ್ತು ಚಿಲಿ'ಯ ಹುತಾತ್ಮ ಗಾಯಕ ವಿಕ್ಟರ್ ಜಾರಾ ಅವರ ಬಗ್ಗೆ ಗಂಟೆಗಟ್ಟಲೆ ಮಾತನಾಡುವ ಕಲಾ ಪ್ರತಿಭೆಯೊಂದಿದ್ದರು.

ಹ್ಯಾರಿ ಬೆಲಾಫೊಂಟೆ ನಿಧನರಾದಾಗ, ಕಾಮ್ರೇಡ್ ಸೀತಾರಾಮ್ ಅವರನ್ನು ಅಮೆರಿಕದ ಮಹಾನ್ ಕಲಾವಿದರಿಗೆ ಶ್ರದ್ಧಾಂಜಲಿ ಅರ್ಪಿಸುವ ಕಾರ್ಯಕ್ರಮಕ್ಕೆ ಆಹ್ವಾನಿಸಲಾಯಿತು. ಅಲ್ಲಿ ಅವರು ಮಾಡಿದ ಭಾಷಣವು ಅವರ ಸಂಗೀತ ಜ್ಞಾನದ ಆಳ ಮತ್ತು ಅಗಲವನ್ನು ಮತ್ತು ಸಮಾಜದಲ್ಲಿ ಕಲಾವಿದರ ಪ್ರಬುದ್ಧ ಪಾತ್ರವನ್ನು ಪ್ರತಿಬಿಂಬಿಸುತ್ತಿತ್ತು.

ಸೀತಾರಾಮ್ ರವರು, ಎರಡು ವರ್ಷಗಳ ಹಿಂದೆ ತಿರುವನಂತಪುರಂ'ನ ಇಎಂಎಸ್ ಅಕಾಡೆಮಿಯಲ್ಲಿ ನಡೆದ ಕಾರ್ಯಾಗಾರದಲ್ಲಿ ತುಂಬಾ ಆಸಕ್ತಿಯಿಂದ ಭಾಗವಹಿಸಿದ್ದರು. ಮಕ್ಕಳ ಸಂಘಟನೆಗಳಲ್ಲಿ ಕೆಲಸ ಮಾಡುವ ಅಥವಾ ಅಂತಹ ಸಂಸ್ಥೆಗಳಲ್ಲಿ ಕೆಲಸ ಮಾಡಲು ಗುರುತಿಸಲ್ಪಟ್ಟುಕೊಂಡಿದ್ದ, ವಿವಿಧ ರಾಜ್ಯಗಳ ಸಂಗಾತಿಗಳು ಅಲ್ಲಿ ಜಮಾಯಿಸಿದ್ದರು. ಅನೇಕರು ಈಗಾಗಲೇ ಬಾಲ ಸಂಘದಲ್ಲಿ ತೊಡಗಿಸಿಕೊಂಡಿರುವ ಹದಿಹರೆಯದವರು ಅಥವಾ ಚಳವಳಿಯ ಭಾಗವಾಗಲು ಉತ್ಸಾಹವನ್ನು ವ್ಯಕ್ತಪಡಿಸಿದವರು ಆ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಕಾಮ್ರೇಡ್ ಸೀತಾರಾಂ ರವರು ವೈಜ್ಞಾನಿಕ ಮನೋಭಾವದ ಮಹತ್ವದ ಕುರಿತು ಮಾತನಾಡುತ್ತಾ, ಮುಖ್ಯವಾಗಿ ಯುವಕರನ್ನು ಗುರಿಯಾಗಿಸಿಕೊಂಡು ಸರಳ ಭಾಷೆಯಲ್ಲಿ ಮಾತನಾಡಿದರು. ಭವಿಷ್ಯದ ಭಾರತದ ಯುವಕರು ಯಾವ ಮಾರ್ಗ ಅನುಸರಿಸಬೇಕು ಎಂಬುದರ ಕುರಿತ ಅವರ ಮಾತುಗಳು ವಿವಿಧತೆಯಲ್ಲಿ ಏಕತೆಯ ಭಾರತದ ಪರಿಕಲ್ಪನೆಯನ್ನು ಎತ್ತಿ ಹಿಡಿದವು. ದಂತಕಥೆಗಳ ಬಗ್ಗೆ ಮಾತನಾಡುವಾಗ ಅವರು ನಮ್ಮ ಕಾಲದ ಅವಶ್ಯಕತೆಗಳನ್ನು ಪರಿಹರಿಸಲು ಅವುಗಳನ್ನು ಅರ್ಥೈಸುವ ಸರಿಯಾದ ಮಾರ್ಗವನ್ನು ವಿವರಿಸಿದರು. ಅವರು ತಮ್ಮ ಪೋಷಕರ ಸಹಾಯದಿಂದ ತಮ್ಮದೇ ಆದ ಪ್ರಜಾಪ್ರಭುತ್ವ ಸಂಸ್ಥೆಗಳಲ್ಲಿ ಹುಡುಗಿಯರು ಮತ್ತು ಹುಡುಗರನ್ನು ಸಂಘಟಿಸುವ ಮಹತ್ವವನ್ನು ಒತ್ತಿ ಹೇಳಿದರು. ಹಾಗೆ ಮಾಡದಿರುವ ಯಾವುದೇ ವೈಫಲ್ಯವು ವಿಭಜಕ ಪ್ರವೃತ್ತಿಯನ್ನು ಉತ್ತೇಜಿಸುವ ಕೋಮು ಮತ್ತು ಜಾತಿವಾದಿ ಸಂಘಟನೆಗಳ ಕಡೆಗೆ ಅವರನ್ನು ಕೊಂಡೊಯ್ಯುತ್ತದೆ.

ಈ ಎಲ್ಲಾ ನಿದರ್ಶನಗಳು ಕಾಮ್ರೇಡ್ ಸೀತಾರಾಮ್ ಯೆಚೂರಿಯವರ ಬಹುಮುಖ ವ್ಯಕ್ತಿತ್ವವನ್ನು ಮತ್ತು ಮಕ್ಕಳಿಂದ ಮೊದಲುಗೊಂಡು ಹಿರಿಯರವರೆಗೆ, ಕಲೆಯ ವಿಮರ್ಶಕರಿಂದ ಹಿಡಿದು ಅದರ ಅಭಿಜ್ಞರವರೆಗೆ, ಎಲ್ಲರೊಂದಿಗೂ ಸಂವಹನ ನಡೆಸುವ ಸಾಮರ್ಥ್ಯವನ್ನು ಅವರ ವ್ಯಕ್ತಿತ್ವ ಪ್ರದರ್ಶಿಸುತ್ತಿತ್ತು. ಈ ಎಲ್ಲಾ ಕ್ಷೇತ್ರಗಳನ್ನು ರಾಜಕೀಯ ಮತ್ತು ಮಾರ್ಕ್ಸ್‌ವಾದಿ ದೃಷ್ಟಿಕೋನದೊಂದಿಗೆ ಸಂಯೋಜಿಸುವ ಅವಕಾಶವನ್ನು ಒಳಗೊಂಡಂತೆ, ತಮ್ಮ ಚಿಂತನಾಶೀಲತೆಯೊಂದಿಗೆ ಸಂಚರಿಸಬಲ್ಲ ವ್ಯಕ್ತಿಯಾಗಿ ರೂಪಗೊಂಡಿದ್ದರು. ಅವರು ಬಿಟ್ಟು ಹೋಗಿರುವ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿ ಪ್ರಸ್ತುತ ನಮ್ಮ ಮೇಲಿದೆ.

ಅನು: ನಾಗರಾಜ ನಂಜುಂಡಯ್ಯ





ಎಸ್.ಎಫ್.ಐ 16ನೇ ರಾಜ್ಯ ಸಮ್ಮೇಳನ

ಅಭಿವೃದ್ಧಿಯ ಹೆಸರಿನಲ್ಲಿ ಉದ್ಯಮಿಗಳ ಕೈಗೆ ಶಿಕ್ಷಣ: ಗೊಲ್ಲಹಳ್ಳಿ ಶಿವಪ್ರಸಾದ

"ಇಂದು ಅಭಿವೃದ್ಧಿಯ ಹೆಸರಿನಲ್ಲಿ ದೇಶದ ಶಿಕ್ಷಣವನ್ನು ಬಂಡವಾಳಶಾಹಿಗಳ ಕೈಯಲ್ಲಿ ಕೊಡಲಾಗುತ್ತಿದೆ. ಎಸ್.ಎಫ್.ಐ. ನಂತಹ ಸಂಘಟನೆ ಇಂತಹ ನೀತಿಗಳನ್ನು ವಿರೋಧಿಸುತ್ತಾ ಚಳುವಳಿಗಳನ್ನು ಕಟ್ಟುತ್ತಾ ಬರುತ್ತಿದೆ" ಎಂದು ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷರು ಹಾಗೂ ಹಿರಿಯ ಸಾಹಿತಿ ಗೊಲ್ಲಹಳ್ಳಿ ಶಿವಪ್ರಸಾದ ಅವರು ಹೇಳಿದ್ದಾರೆ.

ಚಿಕ್ಕಬಳ್ಳಾಪುರದಲ್ಲಿ ಸೆಪ್ಟೆಂಬರ್ 26 ರಿಂದ 28 2024 ರ ವರೆಗೆ ಮೂರು ದಿನಗಳ ಕಾಲ 'ಸಮಾನತೆ ಮತ್ತು ಸೌಹಾರ್ಧತೆಗಾಗಿ' ಎಂಬ ಘೋಷವಾಕ್ಯದೊಂದಿಗೆ ನಡೆದ ಎಸ್.ಎಫ್.ಐ. 16ನೇ ರಾಜ್ಯ ಸಮ್ಮೇಳನದ ಮೊದಲ ದಿನ ನಡೆದ ಬಹಿರಂಗ ಸಭೆಯನ್ನು ಉಧ್ಘಾಟಿಸಿ ಅವರು ಮಾತನಾಡಿದರು.

ಬಹಿರಂಗ ಸಭೆಯನ್ನು ತಮಟೆ ಬಾರಿಸುವ ಮೂಲಕ ಉಧ್ಘಾಟನೆ ಮಾಡಿದ ಶಿವಪ್ರಸಾದ ಅವರು. "40 ವರ್ಷಗಳ ಹಿಂದೆ ನಮ್ಮ ಶಾಲಾ ಕಾಲೇಜುಗಳಲ್ಲಿ ಎಸ್.ಎಫ್.ಐ. ವಿದ್ಯಾರ್ಥಿ ಸಂಘಟನೆ ಮುಖಂಡರಿರುತ್ತಿದ್ದರು. ಅವರು ರಾಜಕಾರಣ ವಿಷಯ ಕುರಿತು ಚರ್ಚಿಸುತ್ತಿದ್ದರು. ಎಸ್.ಎಫ್.ಐ. ಇರುವ ಕಾಲೇಜುಗಳಲ್ಲಿ ಯಾವ ಅನ್ಯೆತಿಕ ತೊಂದರೆಗಳು ಸಂಭವಿಸುವುದಿಲ್ಲ, ಯಾಕೆಂದರೆ ಅಲ್ಲಿ ನೈತಿಕ ಮೌಲ್ಯಗಳನ್ನು ಕಟ್ಟಿಕೊಡುವ ಹುಡುಗರಿರುತ್ತಾರೆ, ಅವರು ಅನೈತಿಕತೆಯ ಕುರಿತು ಪ್ರಶ್ನಿಸುತ್ತಾರೆ. ನಾವೆಲ್ಲ ವಿದ್ಯಾರ್ಥಿ ಚಳುವಳಿಯನ್ನು ಕಟ್ಟುತ್ತಾ ಬಂದಿದ್ದೇವೆ. ಇಂದು ಭಾರತದಲ್ಲಿ ಸಾಧು, ಸಂತರು, ಪ್ರಗತಿಪರರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಇಂತಹ ದೇಶದಲ್ಲಿ ನಾಜಿಯ ಸಂತತಿಗಳಿಗೆ ಜಾಗವಿಲ್ಲ. ಇಲ್ಲಿ ಪ್ರೀತಿ, ಸ್ನೇಹ, ನೈತಿಕತೆಯ ಮೌಲ್ಯಗಳು ಮಾನವೀಯ ಧರ್ಮಗಳು, ಸಹೃದಯಿಗಳು ಇದ್ದಾರೆ. ಹಿಂದೂ ಮತ್ತು ಮುಸ್ಲಿಂ ಧರ್ಮೀಯರ ನಡುವೆ ಕೋಮುವಾದವನ್ನು ಸೃಷ್ಟಿಸುವ ನಾಜಿಗಳಿಗೆ ಇಲ್ಲಿ ಅವಕಾಶವಿಲ್ಲ. ದೇಶದ ಅಭಿವೃದ್ಧಿಯ ಹೆಸರಿನಲ್ಲಿ ನಮ್ಮನ್ನು ಶೋಷಿಸಲಾಗುತ್ತಿದೆ. ಇಂದು ಸತ್ಯದ ಹಾದಿಯಲ್ಲಿ ಸಾಗುವ ಸಂಘಟನೆ ಇದ್ದರೆ ಅದು ಎಸ್.ಎಫ್.ಐ. ಮಾತ್ರ" ಎಂದು ಹೆಮ್ಮೆ ವ್ಯಕ್ತಪಡಿಸಿದರು.

ನವ ಉದಾರವಾದ, ಕೋಮುವಾದ ಹಿಮ್ಮೆಟ್ಟಿಸಬೇಕು

ಶಿಕ್ಷಣ ಶೋಷಿತ ಸಮುದಾಯಗಳ ಪರವಾಗಿರಬೇಕು: ವಿ.ಪಿ.ಸಾನು

"ಇಂದು ಶಿಕ್ಷಣ ಶೋಷಿತ ಸಮುದಾಯಗಳ ಪರವಾಗಿರಬೇಕು ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕಿದೆ. ದೇಶದಲ್ಲಿ ನವ ಉದಾರವಾದಿ ನೀತಿಗಳು ಶಿಕ್ಷಣವನ್ನು ಬುಡಮೇಲು ಮಾಡಿವೆ" ಎಂದು ಹೇಳಿದ ಎಸ್.ಎಫ್.ಐನ ರಾಷ್ಟ್ರೀಯ ಅಧ್ಯಕ್ಷರಾದ ವಿ.ಪಿ. ಸಾನು ಅವರು, "ಇಂದು ಎಡ ಚಳುವಳಿ ಬೆಳೆಯಬೇಕಿದೆ. ಅದು ನಮ್ಮ ಸಂಘಟನೆಯಿಂದ ಸಾಧ್ಯವಾಗಿದೆ. ಇಂದು ತಮಗೆಲ್ಲ ಗೊತ್ತಿರುವ ಹಾಗೆ ಶ್ರೀಲಂಕಾದಲ್ಲಿ ಎಡಪಕ್ಷ ಅಧಿಕಾರಕ್ಕೆ ಬಂದಿದೆ. ಈ ವರ್ಷ ಫ್ರಾನ್ಸ್ ನಲ್ಲಿ ಕೂಡ ಎಡರಂಗದ ಪಕ್ಷ ಅಧಿಕಾರಕ್ಕೆ ಬಂದಿರುವುದು ನಮಗೆಲ್ಲ ಗೊತ್ತಿದೆ. ಜಗತ್ತಿನಲ್ಲಿ ಎಡರಂಗ ಮತ್ತು ಎಡ ಚಳುವಳಿ ಮುಂಚೂಣಿಗೆ ಬರುತ್ತಿದೆ. ಮುಂದೆ ನಮ್ಮ ದೇಶದಲ್ಲಿ ಕೂಡ ಜಾರಿಯಾಗಬೇಕು. ಇಂದು ನಾವು ಸರ್ವರಿಗೂ ಶಿಕ್ಷಣ, ಸರ್ವರಿಗೂ ಉದ್ಯೋಗ ಕೇಳುತ್ತಿದ್ದೇವೆ. ಬಂಡವಾಳಶಾಹಿ ವ್ಯವಸ್ಥೆ ಅದರ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. ನಾವೆಲ್ಲ ಸಮಾನ ಶಿಕ್ಷಣ ವ್ಯವಸ್ಥೆಯನ್ನು ನಿರೀಕ್ಷಿಸುತ್ತಿದ್ದೇವೆ. ನಮ್ಮ ಆಳುವ ಸರ್ಕಾರಗಳು ಬದಲಾಗದಿದ್ದರೆ ನಮಗೆ ಸಮಾನ ಶಿಕ್ಷಣದ ವ್ಯವಸ್ಥೆ ಜಾರಿ ಆಗಲು ಸಾಧ್ಯವಿಲ್ಲ. ಹಾಗಾಗಿ ನಾವೆಲ್ಲ ದೊಡ್ಡ ಮಟ್ಟದ ವಿದ್ಯಾರ್ಥಿ ಚಳವಳಿಯನ್ನು ದೇಶದಲ್ಲಿ ಕಟ್ಟಬೇಕಿದೆ" ಎಂದರು.

ಡಾ.ಅನಿಲ್ ಕುಮಾರ್ ಅವರು ಮಾತನಾಡಿ, "ವಿಶ್ವಪಥ ಎಂದರೆ ಮಗು ಹುಟ್ಟುವಾಗಲೆ ವಿಶ್ವ ಮಾನವನಾಗಿ ಹುಟ್ಟುತ್ತಾನೆ. ಅವನು ಬೆಳೆಯುತ್ತ, ಬೆಳೆಯುತ್ತ ಕ್ಷಬ್ದನಾಗುತ್ತಾನೆ. ಆದರೆ ನಾವು ಮತ್ತೆ ವಿಶ್ವಪಥದತ್ತ ಕೊಂಡೊಯ್ಯಬೇಕಿದೆ. ಸಮನ್ವಯ ಎಂದರೆ ಎಲ್ಲರಲ್ಲಿ ಸಮಾನತೆ ತರುವುದು ಎಂದಾಗಿದೆ. ಈ ದೇಶದಲ್ಲಿ ಇನ್ನೂ ಅಸಮಾನತೆ ತಾಂಡವಾಡುತ್ತಿದೆ. ಇದರ ವಿರುದ್ಧ ವಿದ್ಯಾರ್ಥಿಗಳು ಹೋರಾಟ ಮಾಡಬೇಕಿದೆ" ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಅಮರೇಶ ಕಡಗದ ಅವರು ವಹಿಸಿದ್ದರು.

ಎರಡನೇ ದಿನದ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಎಸ್.ಎಫ್.ಐ ರಾಷ್ಟ್ರ ಅಧ್ಯಕ್ಷರಾದ ವಿ.ಪಿ ಸಾನು ಅವರು,

"ಇಂದು ಜಗತ್ತಿನ ಎಲ್ಲಾ ದೇಶಗಳಲ್ಲಿ ಎಡ ವಿದ್ಯಾರ್ಥಿ ಸಂಘಟನೆಗಳು ಬೆಳೆದು ಬರುತ್ತಿದೆ. ಜಗತ್ತಿಗೆ ಎಡ ಚಳುವಳಿಗಳು ಬೇಕಿದೆ. ಇದರ ನಡುವೆ ವಿದ್ಯಾರ್ಥಿಗಳು ಅನೇಕ ನಿರ್ಭಂದಗಳಿಗೆ ಒಳಗಾಗುತ್ತಿದ್ದಾರೆ. ರಾಜಕೀಯ ಚಿಂತನೆ ಇಲ್ಲದಾಗಿದೆ. ನ್ಯಾಯವಿಲ್ಲದ, ಸೂಕ್ಷ್ಮತೆ ಇಲ್ಲದ ರಾಜಕಾರಣಿಗಳು ಜನಸೇವಕ ರಾಗುತ್ತಿದ್ದಾರೆ. ಅದೇ ರಾಜಕಾರಣ ನಮಗೆ ಶಿಕ್ಷಣ ನೀಡದೆ ವಂಚಿಸಿ, ನಿಮ್ಮ ಹಣೆಬರಹ ಎಂದು ಹೇಳುತ್ತಿದೆ. ಇಂಥಹ ಅವೈಜ್ಞಾನಿಕ ವಾದವನ್ನು ವಿದ್ಯಾರ್ಥಿಗಳು ವಿರೋಧಿಸಬೇಕು" ಎಂದು ಸಮ್ಮೇಳನದ ಪ್ರತಿನಿಧಿಗಳಿಗೆ ಕರೆ ನೀಡಿದರು.

ವೇದಿಕೆಯಲ್ಲಿ ಹೋರಾಟಗಾರರಾದ ಸರ್ದಾರ್ ಚಾಂದ್, ಎಸ್.ಎಫ್.ಐ. ರಾಷ್ಟ್ರೀಯ ಉಪಾಧ್ಯಕ್ಷರಾದ ನಿತೀಶ್ ನಾರಾಯಣ್, ರಾಷ್ಟ್ರೀಯ ಸಮಿತಿ ಸದಸ್ಯರಾದ ಆದರ್ಶ ಎಂ. ಸಜ್ಜಿ, ರಾಜ್ಯ ↗

ರಾಜ್ಯ ಸಮಿತಿ ಆಯ್ಕೆ:

ಈ ಸಮ್ಮೇಳನದಲ್ಲಿ 51 ಜನರ ನೂತನ ರಾಜ್ಯ ಸಮಿತಿಯನ್ನು ಆಯ್ಕೆ ಮಾಡಲಾಯಿತು. 13 ಜನರ ರಾಜ್ಯ ಪದಾಧಿಕಾರಿಗಳ ನೂತನ ಸಮಿತಿಯಲ್ಲಿ ರಾಜ್ಯ ಅಧ್ಯಕ್ಷರಾಗಿ ಅಂಬ್ಲಿಕಲ್ ಶಿವಕುಮಾರ್ (ಕೋಲಾರ), ಪ್ರಧಾನ ಕಾರ್ಯದರ್ಶಿಯಾಗಿ ವಿಜಯ ಕುಮಾರ್ ಟಿ.ಎಸ್. (ಮೈಸೂರು) ಇವರು ಆಯ್ಕೆಯಾದರು. ರಾಜ್ಯ ಉಪಾಧ್ಯಕ್ಷರಾಗಿ ದೊಡ್ಡಬಸವರಾಜ (ಗುಳೆದಾಳು), ಬಸವರಾಜು ಎಸ್. (ಹಾವೇರಿ), ಗಣೇಶ್ ರಾಠೋಡ್ (ಗದಗ), ಗ್ಯಾನೇಶ ಕಡಗದ (ಕೊಪ್ಪಳ), ರಾಜ್ಯ ಜಂಟಿ ಕಾರ್ಯದರ್ಶಿಯಾಗಿ ಸುಜಾತ (ಕಲಬುರಗಿ), ಸುರೇಶ್ ಬಾಬು (ಕೋಲಾರ), ಚಂದ್ರು ರಾಥೋಡ್ (ಗದಗ), ಅನಂತರಾಜ್ (ದಾವಣಗೆರೆ), ಅನುಷ (ಬೆಂಗಳೂರು), ವಿನುಶ ರಮಣ ಬಿ. (ದಕ್ಷಿಣ ಕನ್ನಡ), ದುರುಗಪ್ಪ (ಹಾವೇರಿ) ಇವರು ಆಯ್ಕೆಯಾಗಿದ್ದಾರೆ. ಸಮ್ಮೇಳನದ ಮೊದಲ ದಿನ ನಡೆದ ಮೆರವಣಿಗೆಯಲ್ಲಿ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಒಕ್ಕಲಿಗರ ಕಲ್ಯಾಣ ಮಂಟಪದಿಂದ ಆರಂಭಗೊಂಡು ಕೆಇಬಿ ಸಮುದಾಯ ಭವನದ ಆವರಣದಲ್ಲಿ ಬಹಿರಂಗ ಸಭೆ ನಡೆಯಿತು.





ಶ್ರೀಲಂಕಾಕ್ಕೆ ಮೊದಲ ಎಡಪಂಥೀಯ ಅಧ್ಯಕ್ಷ

ಪ್ರಕಾಶ್ ಕಾರತ್





ಸೆಪ್ಟೆಂಬರ್ 21ರಂದು ಶ್ರೀಲಂಕಾದಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಜನತಾ ವಿಮುಕ್ತಿ ಪೆರುಮನ (ಜೆವಿಪಿ) ಮತ್ತು ಎಡ ಹಾಗೂ ಪ್ರಗತಿಪರ ಶಕ್ತಿಗಳ ಮೈತ್ರಿಕೂಟವಾದ ನ್ಯಾಶನಲ್ ಪೀಪಲ್ಸ್ ಪವರ್ (ಎನ್‌ಪಿಪಿ) ನಾಯಕ ಅನುರಾ ಕುಮಾರ ಧಿಸ್ಸನಾಯಕೆ ಜಯ ಗಳಿಸಿದ್ದಾರೆ. ಅವರು 57,40,179 (ಶೇಕಡ 42.3) ಮತಗಳನ್ನು ಗಳಿಸಿದ್ದಾರೆ. 2019ರ ಚುನಾವಣೆಯಲ್ಲಿ 4,18,553 (ಶೇ.3.16) ಮತಗಳನ್ನು ಮಾತ್ರ ಪಡೆಯಲು ಅವರಿಗೆ ಸಾಧ್ಯವಾಗಿತ್ತು. ಶ್ರೀಲಂಕಾದ ಅಧ್ಯಕ್ಷೀಯ ಚುನಾವಣೆಯಲ್ಲಿ ಇದೇ ಮೊದಲ ಬಾರಿಗೆ ಎಡಪಂಥೀಯ ನೇತಾರರೊಬ್ಬರು ಗೆದ್ದಿರುವುದರಿಂದ ಇದೊಂದು ಐತಿಹಾಸಿಕ ಜಯವಾಗಿದೆ.

ಬೆಂಬಲದ ಮಹಾಪೂರ ಹಾಗೂ ದಿಸ್ಸನಾಯಕೆ ಗೆಲವು, 2022ರಲ್ಲಿ ದೇಶವನ್ನು ನಡುಗಿಸಿದ್ದ ಬೃಹತ್ ಜನತಾ ಹೋರಾಟ ಅರಗಾಲಯದಲ್ಲಿ ಅವರ ಪಕ್ಷ ಒಳಗೊಂಡಿದ್ದರ ನೇರ ಫಲಿತಾಂಶವಾಗಿದೆ. ಸಾಂಸ್ಥೀಕೃತ ರಾಜಕೀಯ ಭ್ರಷ್ಟಾಚಾರ ಹಾಗೂ ಇಂಧನ ಮತ್ತು ಅನಿಲದಂಥ ಅಗತ್ಯ ಸಾಮಗ್ರಿಗಳ ಕೊರತೆಯಿಂದ ರೋಸಿಹೋಗಿದ್ದ ಜನರು ಅಂದಿನ ಅಧ್ಯಕ್ಷ ಗೋತಭಯ ರಾಜಪಕ್ಸ ನೇತೃತ್ವದ ಸರ್ಕಾರದ ವಿರುದ್ಧ ತಿರುಗಿ ಬಿದ್ದಿದ್ದರು. ಕಳೆದ ಏಳು ದಶಕಗಳಿಂದ ಅನುಸರಿಸಲಾಗುತ್ತಿದ್ದ ಅನಾಹುತಕಾರಿ ಆರ್ಥಿಕ ನೀತಿಗಳಿಂದಾಗಿ ರೈತರ ಬಿಕ್ಕಟ್ಟು ಉಲ್ಬಣಿಸಿತ್ತು. ಹಣದುಬ್ಬರ ಮತ್ತು ನಿರುದ್ಯೋಗ ಪ್ರಮಾಣ ಏರಿಕೆ ಮತ್ತು ಜೀವನ ಮಟ್ಟಗಳಲ್ಲಿ ಕುಸಿತ ಉಂಟಾಗಿತ್ತು. ಜನರಲ್ಲಿ ಮಡುಗಟ್ಟಿದ್ದ ಆಕ್ರೋಶ ಈ ಹೋರಾಟಗಳಿಂದ ಹೊರಬಿದ್ದು ಅಧ್ಯಕ್ಷ ರಾಜಪಕ್ಸ ರಾಜಿನಾಮೆ ನೀಡಿ ಪಲಾಯನ ಮಾಡುವಂಥ ಒತ್ತಡವನ್ನು ಸೃಷ್ಟಿಸಿತ್ತು. ಆಳುವ ವರ್ಗದ ಎರಡು ಪ್ರಮುಖ ರಾಜಕೀಯ ಪಕ್ಷಗಳ ನಡುವೆ ಅಧಿಕಾರವನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿ, ರನಿಲ್ ವಿಕ್ರಮಸಿಂಘೆ ಅವರು ಸಂಪೂರ್ಣವಾಗಿ ರಾಜಪಕ್ಸೆಯವರ ಬೆಂಬಲವನ್ನು ಅವಲಂಬಿಸಿ ಪ್ರಮಾಣವಚನ ಸ್ವೀಕರಿಸಿದ್ದರು. ದೇಶ ಎದುರಿಸುತ್ತಿರುವ ವ್ಯವಸ್ಥೆಯೊಳಗಣ ಸಮಸ್ಯೆಗಳನ್ನು ಪರಿಹರಿಸಲು ವಿಕ್ರಮಸಿಂಘೆ ವಿಫಲರಾದರು. ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ (ಐಎಂಎಫ್) ಒಡ್ಡಿದ ಅನೇಕ ಕಠಿಣ ಷರತ್ತುಗಳಿಗೆ ಒಪ್ಪಿಕೊಂಡು ಅದರೊಂದಿಗೆ ಸಾಲದ ಒಡಂಬಡಿಕೆ ಮಾಡಿಕೊಂಡರು.

ಭ್ರಷ್ಟಾಚಾರದ ಹಾವಳಿಯನ್ನು ನಿಭಾಯಿಸಲು ಅವರು ವಿಫಲರಾದರು. ಪರಿಸ್ಥಿತಿಯನ್ನು ಬಗೆಹರಿಸುವ ಬದಲು, ಅವರ ನೀತಿಗಳು ಜನರ ಮೇಲಿನ ಹೊರೆಯನ್ನು ಇನ್ನಷ್ಟು ಹೆಚ್ಚಿಸಿದವು. ಶೇ. 20ರಷ್ಟು ಅತಿ ಶ್ರೀಮಂತರು ದೇಶದ ಅರ್ಧದಷ್ಟು ಆದಾಯವನ್ನು ಹೊಂದಿದ್ದು ಸಮಾಜದ ಶೇ. 20ರಷ್ಟು ಜನತೆಯ ಪಾಲು ಕೇವಲ 5 ಶೇಕಡಾ ಆಗಿದೆ. ಸರಕಾರದ ವೈಫಲ್ಯಗಳ ವಿರುದ್ಧದ ಯಾವುದೇ ಭಿನ್ನಮತದ ದನಿಯನ್ನು ಬಲಪ್ರಯೋಗದಿಂದ ದಮನಿಸಲು ಸರಕಾರ ಪ್ರಯತ್ನಿಸುತ್ತಿದ್ದುದರಿಂದ ಜನರು ಅಸಮಾಧಾನದಿಂದ ಕುದಿಯುತ್ತಿದ್ದರು. ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ಸ್ವಾತಂತ್ರ್ಯವನ್ನು ದಮನಿಸುವ ಆನ್‌ಲೈನ್ ಸುರಕ್ಷತೆ ಕಾನೂನು ಮತ್ತು ಭಯೋತ್ಪಾದನೆ ನಿಗ್ರಹ ಕಾನೂನು ಮುಂತಾದ ಕಾಯಿದೆಗಳನ್ನು ಅದು ರೂಪಿಸಿತ್ತು.

ಈ ಹಿನ್ನೆಲೆಯಲ್ಲಿ ಅಧ್ಯಕ್ಷೀಯ ಚುನಾವಣೆ ನಡೆದಿತ್ತು. ಆರ್ಥಿಕತೆಯನ್ನು ಹೇಗೆ ಪುನರುಜ್ಜೀವನಗೊಳಿಸುವುದು ಎನ್ನುವುದರ ಸುತ್ತವೇ ಎಲ್ಲಾ ಪಕ್ಷಗಳ ಚುನಾವಣಾ ಪ್ರಚಾರ ಕೇಂದ್ರೀಕೃತವಾಗಿತ್ತು. ಎನ್‌ಪಿಪಿ ಹಾಗೂ ದಿಸ್ಸನಾಯಕೆ ಪ್ರಚಾರವು ಜನರನ್ನು ಬಾಧಿಸುವ ಪ್ರಮುಖ ಪ್ರಶ್ನೆಗಳನ್ನು ಪ್ರಸ್ತಾಪಿಸಿದ್ದರಿಂದ ಜನತೆಯ ಮನಸ್ಸನ್ನು ಗೆಲ್ಲಲು ಸಾಧ್ಯವಾಯಿತು. ದಿಸ್ಸನಾಯಕೆ ಚುನಾವಣಾ ಪ್ರಣಾಳಿಕೆ, ಆರ್ಥಿಕ ಸುಧಾರಣೆಗೆ ಆದ್ಯತೆ ನೀಡಿತ್ತು. ಎಲ್ಲಾ ನಾಗರಿಕರಿಗೆ ಮೂಲಭೂತ ಸೇವೆಗಳು ಮತ್ತು ಅವಕಾಶಗಳನ್ನು ಒದಗಿಸುವ ಮೂಲಕ ಅತಿಯಾದ ಅಸಮಾನತೆಗಳನ್ನು ಹೋಗಲಾಡಿಸಿ ಸಮಾನತೆಯನ್ನು ಸಾಧಿಸುವ ನೀತಿ ಬದಲಾವಣೆಗಳನ್ನು ತರುವುದಾಗಿಯೂ ಪ್ರಣಾಳಿಕೆ ಭರವಸೆ ನೀಡಿತ್ತು. ಶಿಕ್ಷಣ ವ್ಯವಸ್ಥೆ ಮತ್ತು ಆರೋಗ್ಯಕಾಳಜಿ ಕ್ಷೇತ್ರಗಳ ಸಂರಚನಾ ಮಿತಿಗಳನ್ನು ಸರಿಪಡಿಸಿ ಅವುಗಳನ್ನು ಸುಧಾರಿಸುವುದು ಕೂಡ ಅದರಲ್ಲಿ ಒಳಗೊಂಡಿದೆ.

ತುಳಿತಕ್ಕೊಳಗಾದ ಜನಸಮುದಾಯದ ಕಲ್ಯಾಣಕ್ಕಾಗಿ ಸರಕಾರದ ಬೆಂಬಲವನ್ನು ಪ್ರಣಾಳಿಕೆಯಲ್ಲಿ ಒತ್ತಿ ಹೇಳಲಾಗಿತ್ತು. ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತರನ್ನು ಬಾಧಿಸುವ ಪ್ರಶ್ನೆಗಳನ್ನೂ ಪ್ರಸ್ತಾಪಿಸಿದ ಪ್ರಣಾಳಿಕೆ, ಅವುಗಳನ್ನು ಬಗೆಹರಿಸುವ ಭರವಸೆ ಕೊಟ್ಟಿತ್ತು. 2009ರಲ್ಲಿ ಅಂತಃಕಲಹ ಕೊನೆಯಾದಾಗಿನಿಂದ ಅಧಿಕಾರ ಹಂಚಿಕೆ (ವಿಕೇಂದ್ರೀಕರಣ) ಮತ್ತು ಸಾಮರಸ್ಯ ಸ್ಥಾಪನೆಯಾಗಬೇಕೆಂದು ತಮಿಳರು ಆಗ್ರಹಿಸುತ್ತಾ ಬಂದಿದ್ದಾರೆ. ಸತತವಾಗಿ ಆಡಳಿತ ನಡೆಸಿದ ಸರಕಾರಗಳು ಈ ಎರಡೂ ವಿಚಾರಗಳಲ್ಲಿ ವಿಫಲವಾಗಿದ್ದು ಅಲ್ಪಸಂಖ್ಯಾತರಲ್ಲಿ ಅಸುರಕ್ಷತೆಯ ಭಾವನೆ ಮೂಡಿದೆ. ತಕ್ಷಣವೇ ಪ್ರಾಂತೀಯ ಚುನಾವಣೆಗಳನ್ನು ನಡೆಸುವುದಾಗಿ ಹಾಗೂ ಹೊಸ ಸಂವಿಧಾನವು ಅವರ ಕಾಳಜಿಗೆ ಸ್ಪಂದಿಸುವುದಾಗಿ ಎನ್‌ಪಿಪಿ ಆಶ್ವಾಸನೆ ನೀಡಿದೆ. ಒಂದು ದಶಕದಷ್ಟು ಹಿಂದೆ, ಅಂದರೆ 2013ರಲ್ಲಿ ಕೊನೆಯ ಬಾರಿಗೆ ಪ್ರಾಂತೀಯ ಚುನಾವಣೆ ನಡೆದಿತ್ತು.

ರಾಜಕೀಯ ರಂಗದ ವಿಚಾರಕ್ಕೆ ಬಂದರೆ, 1978ರಿಂದಲೂ ಜಾರಿಯಲ್ಲಿರುವ ಕಾರ್ಯನಿರ್ವಾಹಕ ಅಧ್ಯಕ್ಷ ಪದ್ಧತಿಯನ್ನು (ಎಕ್ಸಿಕ್ಯುಟಿವ್ ಪ್ರೆಸಿಡೆನ್ಸಿ) ತೆಗೆದು ಹಾಕಲು ತಕ್ಷಣವೇ ಕ್ರಮ ಕೈಗೊಳ್ಳುವುದಾಗಿ ದಿಸ್ಸನಾಯಕೆ ಭರವಸೆ ಕೊಟ್ಟಿದ್ದರು. ಸಂಸತ್ತನ್ನು ತಕ್ಷಣ ವಿಸರ್ಜಿಸಿ ಹೊಸ ಸಂಸತ್ತಿಗೆ ಚುನಾವಣೆಗಳನ್ನು ನಡೆಸುವ ಸಂಕಲ್ಪವನ್ನು ಕೂಡ ದಿಸ್ಸಾನಾಯಕೆ ಪ್ರಕಟಿಸಿದ್ದರು. ಭ್ರಷ್ಟಾಚಾರ ಮತ್ತು ಜನಾಂಗವಾದವನ್ನು ಬುಡಸಮೇತ ಕಿತ್ತು ಹಾಕುವ, ಹೊಣೆಗಾರಿಕೆಯನ್ನು ಖಚಿತಪಡಿಸಲು ಸುಧಾರಣೆಗಳನ್ನು ತರುವ ಹಾಗೂ ವ್ಯವಸ್ಥೆಯಲ್ಲಿ ಹಾಸುಹೊಕ್ಕಾಗಿರುವ ತಪ್ಪಿತಸ್ಥರು ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳಲು ನೆರವಾಗುವ ಸಂಸ್ಕೃತಿಯನ್ನು ಕೊನೆಗೊಳಿಸುವ ಆಶ್ವಾಸನೆಯನ್ನೂ ನೀಡಿದ್ದರು. ಈ ಎಲ್ಲಾ ಭರವಸೆಗಳು ಜನತೆಯ ಅನುಮೋದನೆಯನ್ನು ಗೆಲ್ಲುವಲ್ಲಿ ಸಫಲವಾದವು.

2022ರ ಹೋರಾಟವು ಎರಡು ಪ್ರಮುಖ ಆಳುವ ಪಕ್ಷಗಳ ಮಿತಿಯನ್ನು ಬಯಲುಗೊಳಿಸಿತು ಹಾಗೂ ಜನರು ಅವುಗಳ ಬಗ್ಗೆ ರೋಸಿಹೋಗಿದ್ದರು. ಆರ್ಥಿಕ ಮತ್ತು ರಾಜಕೀಯ ಅಸ್ವಸ್ಥತೆಯಿಂದ ತಮ್ಮನ್ನು ಪಾರು ಮಾಡಲು ಸಾಂಪ್ರದಾಯಿಕ ಪಕ್ಷಗಳನ್ನು ನಂಬಿಕೊಂಡಿರುವುದು ಸರಿಯಲ್ಲ ಎಂದು ಜನರು ಭಾವಿಸಿದರು. ಪರ್ಯಾಯವೊಂದನ್ನು ಅವರು ಎದುರು ನೋಡುತ್ತಿದ್ದರು. ಜೆವಿಪಿ/ಎನ್‌ಪಿಪಿ ಆ ಪರ್ಯಾಯವಾಗಿ ಹೊರಹೊಮ್ಮಿತು. ಅವುಗಳು ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದವು ಎನ್ನುವುದು ವಾಸ್ತವವಾಗಿದೆ. ಅಲ್ಲದೆ, ರಾಜಕೀಯದಲ್ಲಿ ಅವುಗಳು ಶುದ್ಧ ಹಾಗೂ ಪ್ರಾಮಾಣಿಕ ಶಕ್ತಿಗಳು ಎಂದು ಜನರಲ್ಲಿದ್ದ ಗೌರವ ಕೂಡ ಚುನಾವಣೆಯಲ್ಲಿ ಅವುಗಳ ಗೆಲುವಿಗೆ ನೆರವಾಯಿತು.

ಈಗ ಚುನಾವಣಾ ವಿಜಯದ ನಂತರ, ದಿಸ್ಸನಾಯಕೆ ಹಾಗೂ ಅವರ ಮಿತ್ರಕೂಟದ ಮುಂದೆ ದೊಡ್ಡ ಸವಾಲುಗಳಿವೆ. ಐಎಂಎಫ್ ಸಾಲವನ್ನು ನಿಭಾಯಿಸುವುದು ಅವರ ಮುಂದಿರುವ ತಕ್ಷಣದ ಕಾಳಜಿಯಾಗಿದೆ. ಸಾಲದ ಷರತ್ತುಗಳ ಬಗ್ಗೆ ಮರುಸಂಧಾನ ನಡೆಸುವುದಾಗಿ ಹಾಗೂ ಜನರ ಕಲ್ಯಾಣವನ್ನು ರಾಜಿ ಮಾಡಿಕೊಳ್ಳುವುದಿಲ್ಲ ಎಂದು ಅವರು ಭರವಸೆ ನೀಡಿದ್ದಾರೆ. ನಾನಾ ಅಂತಾರಾಷ್ಟ್ರೀಯ ಒಪ್ಪಂದಗಳ ವಿಚಾರ ಹಾಗೂ ವಿವಿಧ ದೇಶಗಳೊಂದಿಗಿನ, ಅದರಲ್ಲೂ ವಿಶೇಷವಾಗಿ ನೆರೆಹೊರೆ ಮತ್ತು ವಲಯದ ರಾಷ್ಟ್ರಗಳ ಜತೆಗಿನ ಸಂಬಂಧಗಳನ್ನು ಮರುರೂಪಿಸುವ ಅಂಶಗಳು ಕೂಡ ಇದಕ್ಕೆ ಸಂಬಂಧಿಸಿವೆ. ಶ್ರೀಲಂಕಾವು ಹಿಂದೂ ಮಹಾಸಾಗರದಲ್ಲಿನ ವ್ಯೂಹಾತ್ಮಕ ಸ್ಥಳದಲ್ಲಿ ಇರುವುದು ಮತ್ತು ಈ ಜಲಪ್ರದೇಶವನ್ನು ಕಾಯುವ ಅಮೆರಿಕದ ಪ್ರಯತ್ನಗಳ ಹಿನ್ನೆಲೆಯಲ್ಲಿ ಇವುಗಳು ನಿಜಕ್ಕೂ ಸವಾಲಿನ ಕಾರ್ಯಭಾರವಾಗಿದೆ. ಸ್ವತಂತ್ರ ವಿದೇಶಾಂಗ ನೀತಿ ಮತ್ತು ಸಾರ್ಕ್ ಮತ್ತು ನ್ಯಾಮ್ ಕೂಟಗಳ ಸದಸ್ಯ ದೇಶವಾಗಿ ಪಾತ್ರ ವಹಿಸುವುದರಿಂದ ಬಹು–ಧ್ರುವೀಯತೆಯನ್ನು ಬಲಪಡಿಸುವುದು ಅಗತ್ಯ ಎಂಬ ಪ್ರತಿಪಾದನೆಯು ಜನರ ಹಿತಾಸಕ್ತಿಗೆ ಅನುಗುಣವಾಗಿರುತ್ತದೆ.

ಅಲ್ಪಸಂಖ್ಯಾತರ ಕುರಿತ ಸರಕಾರದ ಧೋರಣೆ ಇನ್ನೊಂದು ಪ್ರಮುಖ ಸವಾಲಾಗಿದೆ. ತಮಿಳರ ಮತಗಳಲ್ಲಿ ಅಲ್ಪ ಭಾಗವನ್ನು ಮಾತ್ರ ದಿಸ್ಸಾನಾಯಕೆ ಗಳಿಸಿದ್ದಾರೆನ್ನುವುದು ವಾಸ್ತವವಾಗಿದೆ. ಇದು ಅಲ್ಪಸಂಖ್ಯಾತರ, ಅದರಲ್ಲೂ ವಿಶೇಷವಾಗಿ ತಮಿಳರ ಕುರಿತು ಅವರ ಪಕ್ಷದ ಧೋರಣೆ ಏನಾಗಿರಬಹುದೆಂಬ ಬಗ್ಗೆ ಅನುಮಾನವನ್ನು ಹುಟ್ಟು ಹಾಕಿದೆ. ಯುದ್ಧ ಮತ್ತು ಆರ್ಥಿಕ ಹಿಂದುಳಿದಿರುವಿಕೆ ಅಲ್ಪಸಂಖ್ಯಾತರ ಬಹುದೊಡ್ಡ ವಿಭಾಗವನ್ನು ಪ್ರತ್ಯೇಕಿಸಿದೆ ಮತ್ತು ಈ ಗಾಯಗಳನ್ನು ಮಾಯಿಸುವ ಹೊಣೆ ದಿಸ್ಸನಾಯಕೆ ಹೆಗಲ ಮೇಲಿದೆ. ಉತ್ತರ ಮತ್ತು ಪೂರ್ವದ ತಮಿಳು ಮಾತನಾಡುವ ಪ್ರದೇಶಗಳಿಗೆ ಹೇಗೆ ಅಧಿಕಾರ ಹಂಚಿಕೆ ಮಾಡಬೇಕೆಂಬ ಪ್ರಶ್ನೆಯೂ ಇದೆ.

ದಿಸ್ಸನಾಯಕೆ ಮತ್ತು ಎನ್‌ಪಿಪಿಯ ಪ್ರಾಮಾಣಿಕತೆ ಮತ್ತು ಅಭಿಯಾನಕ್ಕೆ ಅವರು ತಂದುಕೊಟ್ಟ ತಾಜಾತನದ ಮೇಲೆ ಭರವಸೆಯಿಟ್ಟು ಬದಲಾವಣೆಗಾಗಿ ಜನರು ಅವರನ್ನು ಚುನಾಯಿಸಿದ್ದಾರೆ. ತಾವು ಕೊಟ್ಟ ಭರವಸೆಗಳನ್ನು ಜಾರಿಗೊಳಿಸಿ ಜನತೆಯ ಆಶೋತ್ತರಗಳನ್ನು ಈಡೇರಿಸುವುದು ಈಗ ಗೆದ್ದವರ ಸರದಿಯಾಗಿದೆ. ದಿಸ್ಸಾನಾಯಕೆ ಮತ್ತು ಜೆವಿಪಿಗೆ ನಾವು ಶುಭ ಹಾರೈಸುತ್ತೇವೆ. ಕೊಟ್ಟ ಭರವಸೆಯಂತೆ ಬದಲಾವಣೆ ತರುತ್ತಾರೆ ಹಾಗೂ ಎಡಪಂಥವನ್ನು ಬಲಪಡಿಸುತ್ತಾರೆ ಎಂದು ನಾವು ಪ್ರಾಮಾಣಿಕವಾಗಿ ಆಶಾವಾದ ವ್ಯಕ್ತಪಡಿಸುತ್ತೇವೆ.

ಹೋರಾಟಗಳಲ್ಲಿ ಭಾಗವಹಿಸಿ ಹಾಗೂ ಅವುಗಳನ್ನು ಮುನ್ನಡೆಸುವ ಮೂಲಕ ಮಾತ್ರವೇ ಆಳುವ ಪಕ್ಷಗಳ ವಿರುದ್ಧ ಚುನಾವಣಾ ಜಯಗಳನ್ನು ಸಾಧಿಸಬಹುದು ಎನ್ನುವ ನಂಬಿಕೆಯನ್ನು ಪುನಃ ಸಾಬೀತು ಪಡಿಸುವಲ್ಲಿ ದಿಸ್ಸನಾಯಕೆ ಗೆಲವು ಮಹತ್ವದ ಕೊಡುಗೆ ನೀಡುತ್ತದೆ.

ಅನು: ವಿಶ್ವ

ಕಾರ್ಯದರ್ಶಿ ಭೀಮನಗೌಡ, ಸುಜಾತ, ರಮೇಶ್ ವೀರಾಪುರ, ಮತ್ತು ವಿವಿಧ ಜಿಲ್ಲೆಗಳಿಂದ ಬಂದಿದ್ದ ನೂರಾರು ವಿದ್ಯಾರ್ಥಿ ಮುಖಂಡರಿದ್ದರು.

ಹೊಸ ಕನಸುಗಳನ್ನು ಬಿತ್ತಿದ ಭಗತ್ ಸಿಂಗ್ ಮತ್ತು ಚೇ ಗುವೆರ:

ಭಗತ್ ಸಿಂಗ್ ಜನ್ಮ ದಿನಾಚರಣೆ ಕಾರ್ಯಕ್ರಮ ಉಧ್ಘಾಟಿಸಿ ಮಾತನಾಡಿದ ಎಸ್.ಎಫ್.ಐ. ರಾಷ್ಟ್ರ ಉಪಾಧ್ಯಕ್ಷರಾದ ನಿತೀಶ್ ನಾರಾಯಣ ಅವರು, ಭಗತ್ ಸಿಂಗ್ ಮತ್ತು ಚೇ ಗುವೆರ ಜಗತ್ತಿನ ಪ್ರತಿಯೊಬ್ಬರಿಗೂ ಹೊಸ ಕನಸುಗಳನ್ನು ಬಿತ್ತಿದರು. ಇಂದು ಅವರು ಜಗತ್ತಿಗೆ ನೀಡಿದ ಸಂದೇಶಗಳು ನಮ್ಮಲ್ಲಿ ಹಾಗೆ ಉಳಿದಿವೆ. ನಮ್ಮ ದೇಶದಲ್ಲಿ ಎಸ್. ಎಫ್.ಐ. ಹೊಸ ಸಮಾಜವನ್ನು ಸೃಷ್ಟಿಸಲು ಅವರ ಕ್ರಾಂತಿಕಾರಿ ಕನಸುಗಳನ್ನು ಒತ್ತು ಸಾಗುತ್ತಿದೆ. ಇವತ್ತು ನಾವು ದೇಶದ ಐಕ್ಯತೆಗಾಗಿ ಹೋರಾಟಗಳನ್ನು ರೂಪಿಸಬೇಕಿದೆ" ಎಂದು ಸಲಹೆ ನೀಡಿದರು.

ಕೋಡಿ ರಂಗಪ್ಪ ಮಾತನಾಡಿ, ಚಿಕ್ಕಬಳ್ಳಾಪುರದಲ್ಲಿ ಬೃಹತ್ ವಿದ್ಯಾರ್ಥಿ ಚಳುವಳಿಯನ್ನು ಕಟ್ಟುವ ಅಗತ್ಯವಿದೆ. ವಿದ್ಯಾರ್ಥಿಗಳ ಸಮಸ್ಯೆಗಳಿಗಾಗಿ ಪರಿಹಾರವನ್ನು ಹುಡುಕುವ ಎಸ್.ಎಫ್.ಐ ಬಲಿಷ್ಠವಾಗಿ ಬೆಳೆಯಬೇಕಿದೆ. ಸಮಸಮಾಜದ ಕನಸು, ಐಕ್ಯತೆಯ ಭಾವವನ್ನು ಬೆಳೆಸುವ ನಾಡಿನ ಕನಸನ್ನು ನಾವು ಕಾಣಬೇಕಿದೆ. ಎಡ ಚಳುವಳಿಯನ್ನು ಮುನ್ನಡೆಸುತ್ತಾ, ದೇಶದ ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಉಳಿವಿಗಾಗಿ ಹೋರಾಡಬೇಕಿದೆ ಎಂದು ಹೇಳಿದರು.

200ಕ್ಕೂ ಹೆಚ್ಚು ಪ್ರತಿನಿಧಿಗಳು

ರಾಜ್ಯದ 18 ಜಿಲ್ಲೆಗಳಿಂದ ವಿದ್ಯಾರ್ಥಿ ಮುಖಂಡರು ಸಮ್ಮೇಳನದಲ್ಲಿ ಪ್ರತಿನಿಧಿಗಳಾಗಿ ಭಾಗವಸಿದ್ದರು. ಸಾರ್ವತ್ರಿಕ ಶಿಕ್ಷಣ, ಸಮಾನತೆ ಮತ್ತು ಸೌಹಾರ್ಧತೆಗೆ ಸಂಬಂಧಿಸಿದ ನಿರ್ಣಯಗಳೂ ಸೇರಿದಂತೆ ಒಟ್ಟು 16 ನಿರ್ಣಯಗಳನ್ನು ಸಮ್ಮೇಳನದಲ್ಲಿ ಅಂಗೀಕರಿಸಲಾಯ್ತು.

ಮೂಲಭೂತ ಆರ್ಥಿಕ ಹಕ್ಕುಗಳನ್ನು ಕೇಳುವ ಸಮಯವೀಗ ಬಂದಿದೆ

ಭಾರತದಲ್ಲಿ ಒಂದು ಸಾರ್ವತ್ರಿಕ ಸಾಮಾಜಿಕ ಸುರಕ್ಷಾ ಜಾಲವನ್ನು ರಚಿಸಬೇಕೆಂಬ ದೀರ್ಘಕಾಲದ ಬೇಡಿಕೆಯ ಹಿನ್ನೆಲೆಯಲ್ಲಿ ಹಿರಿಯ ನಾಗರಿಕರಿಗೆ ಆರೋಗ್ಯವಿಮೆಯ ಯೋಜನೆಯನ್ನು ಕೇಂದ್ರ ಸರಕಾರ ಪ್ರಕಟಿಸಿದೆ. ಇದಕ್ಕೆ ಮೊದಲು ಸರಕಾರೀ ನೌಕರರಿಗೆ ನಿಶ್ಚಿತ ಪಿಂಚಣಿಯ ಯುಪಿಎಸ್ ಎಂಬುದನ್ನು ಎನ್‌ಪಿಎಸ್ ವಿರುದ್ಧ ಸರಕಾರೀ ನೌಕರರ ದೀರ್ಘ ಹೋರಾಟದ ಪರಿಣಾಮವಾಗಿ ಪ್ರಕಟಿಸಲಾಗಿದೆ. ಇವು ದೇಶದ ನಾಗರೀಕರ ಕೆಲವು ಆರ್ಥಿಕ ಬೇಡಿಕೆಗಳನ್ನು ತೀವ್ರವಾಗಿ ಮುನ್ನೆಲೆಗೆ ತಂದಿವೆ. ದೇಶದ ಸಂವಿಧಾನವು ನಾಗರೀಕರಿಗೆ ಹಲವು ಮೂಲಭೂತ ರಾಜಕೀಯ ಹಕ್ಕುಗಳನ್ನು ನೀಡಿದೆ. ಆರ್ಥಿಕ ಹಕ್ಕುಗಳನ್ನಲ್ಲ. ಆದರೆ ಈಗ ನಾಗರಿಕರು ಮೂಲಭೂತ ಆರ್ಥಿಕ ಹಕ್ಕುಗಳ ಬೇಡಿಕೆಯನ್ನು ಮುಂದೊಡ್ಡುವ ಕಾಲ ಬಂದಿದೆ.

ಅಮಾನುಲ್ಲ ಖಾನ್ ಅನು: **ಎಸ್.ಕೆ.ಗೀತಾ**

ಸಾಮಾಜಿಕ ಸುರಕ್ಷೆ ಕುರಿತಾಗಿ ಕೇಂದ್ರ ಸರ್ಕಾರವು ಇತ್ತೀಚೆಗೆ ಎರಡು ನಿರ್ಧಾರಗಳನ್ನು ತೆಗೆದುಕೊಂಡಿದೆ. ಅದು ಸರ್ಕಾರಿ ನೌಕರರಿಗಾಗಿ ಒಂದು ಏಕೀಕೃತ ನಿವೃತ್ತಿ ವೇತನ ಯೋಜನೆ(ಯುಪಿಎಸ್)ಯನ್ನು ಪ್ರಕಟಿಸಿದೆ. ಈ ಯೋಜನೆಯ ಸಂಪೂರ್ಣ ಮಾಹಿತಿ ಇನ್ನೂ ಹೊರಬಂದಿಲ್ಲ. ಲಭ್ಯವಿರುವ ಮಾಹಿತಿಯ ಪ್ರಕಾರ ಈ ಯೋಜನೆಯಡಿ ಸರ್ಕಾರಿ ನೌಕರರಿಗೆ ಸೇವಾವಧಿಯ ಕೊನೆಯ ಹತ್ತು ತಿಂಗಳ ಸರಾಸರಿ ಒಟ್ಟು ಮೂಲ ವೇತನದ ಶೇ. 50ರಷ್ಟು ಮತ್ತು ಅದರ ಮೇಲೆ ಅನ್ವಯಿಕ ತುಟ್ಟಿ ಭತ್ಯೆ ಸೇರಿಸಿ ಖಚಿತವಾದ ನಿವೃತ್ತಿವೇತನ ನೀಡುವ ಭರವಸೆಯಿದೆ, ಇದಲ್ಲದೆ ಕನಿಷ್ಠ 10,000 ರೂ.ಗಳ ನಿವೃತ್ತಿ ವೇತನದ ಭರವಸೆಯಿದೆ. 25 ವರ್ಷಗಳ ಸೇವೆ ಸಲ್ಲಿಸಿದ ನಂತರ ಉದ್ಯೋಗಿಗಳು ಈ ನಿವೃತ್ತಿ ವೇತನಕ್ಕೆ ಅರ್ಹರಾಗುತ್ತಾರೆ. ನಿವೃತ್ತಿದಾರರ ಮರಣದ ನಂತರ ಮೂಲ ಪಿಂಚಣಿಯ ಶೇ. 60ರಷ್ಟನ್ನು ಕೌಟುಂಬಿಕ ಪಿಂಚಣಿಯಾಗಿ ನೀಡಲಾಗುವುದು. ಪಿಂಚಣಿಯಲ್ಲಿ ಒಂದು ಭಾಗದ ಮೊತ್ತವನ್ನು ಆರಂಭದಲ್ಲೇ ಪಡೆಯುವ ಕಮ್ಯುಟೇಷನ್ ಅವಕಾಶವಿಲ್ಲ, ಬದಲಿಗೆ ಸಣ್ಣ ಮೊತ್ತವೊಂದನ್ನು ನೀಡಲಾಗುವುದನ್ನು ನಿವೃತ್ತಿ ವೇತನದಲ್ಲಿ ಕಳೆಯಲಾಗುವುದಿಲ್ಲ. ನೌಕರರು ತಮ್ಮ ಮೂಲವೇತನದ ಶೇ. 10ರಷ್ಟು ದೇಣಿಗೆ ನೀಡಿದರೆ ಸರ್ಕಾರವು ಮೂಲವೇತನ ಮತ್ತು ತುಟ್ಟಿಭತ್ಯೆಯ ಶೇ. 18.5ರಷ್ಟನ್ನು ದೇಣಿಗೆಯಾಗಿ ನೀಡುತ್ತದೆ. ಈಗಿರುವ ರಾಷ್ಟ್ರೀಯ ಪಿಂಚಣಿ ಯೋಜನೆ(ಎನ್‌ಪಿಎಸ್)ಯಿಂದ ಈ ಏಕೀಕೃತ ಪಿಂಚಣಿ ಯೋಜನೆ(ಯುಪಿಎಸ್)ಗೆ ಬದಲಾವಣೆ ಮಾಡಿಕೊಳ್ಳಲು ಅವಕಾಶವಿದೆ.

ಪ್ರಸ್ತುತ ಪರಿಸ್ಥಿತಿಯಲ್ಲಿ ತರಬಹುದಾಗಿದ್ದ ಅತ್ಯುತ್ತಮ ಮತ್ತು ಆಕರ್ಷಕ ಯೋಜನೆ ಇದೆಂದು ಸರ್ಕಾರವು ಪ್ರಚಾರ ಮಾಡುತ್ತಿದೆ. ಸರ್ಕಾರವು ಈ ಮೊದಲೇ ಕೈಗೊಂಡಿದ್ದ ಸುಧಾರಣೆಗಳನ್ನು ಕೈಬಿಡದೆ ಇಂತಹದೊಂದು ಯೋಜನೆಯನ್ನು ರೂಪಿಸಿದ್ದಕ್ಕಾಗಿ ಪ್ರಮುಖ ಉದ್ಯಮಿಗಳು ಮತ್ತು ವಾಣಿಜ್ಯ ಮಂಡಳಿಗಳ ನಾಯಕರು ಹಾಗೂ ನವ ಉದಾರವಾದಿ ಅರ್ಥಶಾಸ್ತ್ರಜ್ಞರು ಸರ್ಕಾರವನ್ನು ಕೊಂಡಾಡುತ್ತಿದ್ದಾರೆ. ಆದರೆ ಕಾರ್ಮಿಕ ಸಂಘಟನೆಗಳು ಇದನ್ನು ತಿರಸ್ಕರಿಸಿವೆ. ಈ ಯೋಜನೆಯು ತಮ್ಮ ಆಶೋತ್ತರಗಳ ಸಮೀಪಕ್ಕೂ ಬರುವುದಿಲ್ಲ, ಹಾಗಾಗಿ ದೇಣಿಗೆ-ರಹಿತ ಹಳೆ ಪಿಂಚಣಿ ಯೋಜನೆ(ಒಪಿಎಸ್)ಗಾಗಿ ತಮ್ಮ ಹೋರಾಟ ಮುಂದುವರೆಸುವುದಾಗಿ ತಿಳಿಸಿವೆ. ಅವರ ಈ ಬೇಡಿಕೆ ನ್ಯಾಯಯುತವಾಗಿದೆ. ಪಿಂಚಣಿಯೆಂಬುದು ಯಾರ ದಯಾ ಭಿಕ್ಷೆಯೂ ಅಲ್ಲ. ಅದು ಸೇವಾವಧಿಯಲ್ಲಿ ದುಡಿದು ಗಳಿಸಿದ ಮುಂದೂಡಲ್ಪಟ್ಟ ವೇತನ.

ಹಳೆ ಪಿಂಚಣಿ ಯೋಜನೆಯನ್ನು ಪುನರ್ ಸ್ಥಾಪಿಸಬೇಕೆಂದು ಸರ್ಕಾರಿ ನೌಕರರು ಕಳೆದೊಂದು ದಶಕದಿಂದ ಹೋರಾಟ ನಿರತರಾಗಿದ್ದಾರೆ. ಈ ಬೇಡಿಕೆಯನ್ನು ನ್ಯಾಯಾಸಮ್ಮತ ಎಂದು ಅರಿತುಕೊಂಡ, ವಿರೋಧ ಪಕ್ಷಗಳು ಆಳುತ್ತಿರುವ ರಾಜ್ಯ ಸರ್ಕಾರಗಳು ಮತ್ತೆ ಹಳೆಯ ಪಿಂಚಣಿ ಯೋಜನೆಗೇ ಮರಳುವುದಾಗಿ ಹೇಳಿದ್ದಾರೆ. ಈ ಹೋರಾಟದ ತೀವ್ರತೆಯನ್ನು ಗಮನಿಸಿದ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸಮ್ಮಿಶ್ರ ಸರ್ಕಾರವು ಖಚಿತ ಪಿಂಚಣಿ ಮೊತ್ತದಂತಹ ಬೇಡಿಕೆಗಳನ್ನು ಪರಿಗಣಿಸಲೇ ಬೇಕಾಯಿತು. ಈ ಹೋರಾಟವು ಇನ್ನೂ ಮುಗಿದಿಲ್ಲ, ಸರ್ಕಾರಿ ನೌಕರರು ಹಳೆ ಪಿಂಚಣಿ ಯೋಜನೆಗಾಗಿ ಇನ್ನೂ ಒತ್ತಾಯಿಸುತ್ತಿದ್ದಾರೆ.

ಸಾರ್ವಜನಿಕ ವಲಯದ ವಿಮೆ, ಬ್ಯಾಂಕ್ ವಲಯಗಳಲ್ಲೂ ನೌಕರರ ಸಂಘಟನೆಗಳು 1995ರ ನಂತರ ನೌಕರಿಗೆ ಸೇರಿದವರಿಗೆ ಎನ್‌ಪಿಎಸ್ ಅನ್ವಯಿಸಿರುವುದನ್ನು ಹಿಂತೆಗೆದುಕೊಂಡು ಎಲ್ಲ ನೌಕರರಿಗೂ ಖಚಿತ ನಿವೃತ್ತಿ ವೇತನದ ಯೋಜನೆಯನ್ನು ಅನ್ವಯಿಸಬೇಕೆಂದು ಆಗ್ರಹಿಸುತ್ತಿವೆ.

'ಕಲ್ಯಾಣ ಪ್ರಭುತ್ವ'

ಸರ್ಕಾರ ಘೋಷಿಸಿದ ಇನ್ನೊಂದು ಯೋಜನೆಯೆಂದರೆ 70 ವರ್ಷ ಮೀರಿದ ಎಲ್ಲ ಹಿರಿಯ ನಾಗರಿಕರಿಗೆ 5 ಲಕ್ಷ ರೂ.ಗಳ ಆರೋಗ್ಯ ವಿಮಾ ಯೋಜನೆ ಈ ಯೋಜನೆಯ ಪೂರ್ತಿ ಮಾಹಿತಿಗಳು ಇನ್ನೂ ಹೊರಬಂದಿಲ್ಲ. ಭಾರತವು ಒಂದು ಸಾರ್ವತ್ರಿಕ ಸಾಮಾಜಿಕ ಸುರಕ್ಷಾ ಜಾಲವನ್ನು ರಚಿಸಬೇಕೆಂಬ ದೀರ್ಘಕಾಲದ ಬೇಡಿಕೆಯ ಹಿನ್ನೆಲೆಯಲ್ಲಿ ಈ ಯೋಜನೆಯನ್ನು ರೂಪಿಸಲಾಗಿದೆ. ಇದು ದೇಶದ ನಾಗರಿಕರ ಕೆಲವು ಆರ್ಥಿಕ ಬೇಡಿಕೆಗಳನ್ನು ತೀವ್ರವಾಗಿ ಮುನ್ನೆಲೆಗೆ ತಂದಿದೆ. ದೇಶದ ಸಂವಿಧಾನವು ದೇಶದ ನಾಗರಿಕರಿಗೆ ಹಲವು ಮೂಲಭೂತ ರಾಜಕೀಯ ಹಕ್ಕುಗಳನ್ನು ನೀಡಿದೆ. ಆರ್ಥಿಕ ಹಕ್ಕುಗಳನ್ನಲ್ಲ. ಪ್ರಭುತ್ವ ಧೋರಣೆಗಳ ನಿರ್ದೇಶಕ ತತ್ವಗಳನ್ನು ಕುರಿತ ಸಂವಿಧಾನದ ನಾಲ್ಕನೆಯ ಭಾಗವು ಭಾರತ ಒಂದು 'ಕಲ್ಯಾಣ ಪ್ರಭುತ್ವ' ಎಂದು ಗುರುತಿಸುತ್ತದೆ ಮತ್ತು ಸರ್ಕಾರವು ತನ್ನೆಲ್ಲ ನಾಗರಿಕರೂ ಘನತೆಯಿಂದ ಬದುಕುವುದು ಸಾಧ್ಯವಾಗುವಂತಹ ನೀತಿಗಳನ್ನೇ ಅನುಸರಿಸಬೇಕೆಂದು ನಿರ್ದೇಶಿಸುತ್ತದೆ. ಆದರೆ ಇವು ನ್ಯಾಯ ವಿಚಾರಣೆಗೆ ಒಳಪಡುವುದಿಲ್ಲ. ಹಾಗಿದ್ದರೂ ಸರ್ವೋಚ್ಚ ನ್ಯಾಯಾಲಯವು ಪರಿಚ್ಛೇದ 21ರ ವ್ಯಾಪ್ತಿಯನ್ನು ಹಿಗ್ಗಿಸಿದ್ದು ಜನರ ಬದುಕಿನ ಹಕ್ಕು ಅವರ ಆರೋಗ್ಯ, ವಿದ್ಯಾಭ್ಯಾಸದ ಹಕ್ಕುಗಳನ್ನು ಒಳಗೊಂಡಿದೆಯೆಂದು ಹೇಳಿದೆ.

ಭಾರತ ದೇಶದಲ್ಲಿ ತೀವ್ರ ಆರ್ಥಿಕ ಬೆಳವಣಿಗೆಗಳಾಗುತ್ತಿದ್ದು, ಅದು ಜಗತ್ತಿನಲ್ಲೆ ಮೂರನೆಯ ಅತಿದೊಡ್ಡ ಆರ್ಥಿಕ ವ್ಯವಸ್ಥೆಯಾಗಲಿದೆಯೆಂದು ಸರ್ಕಾರವು ಬೀಗುತ್ತಿದೆ. ಜಗತ್ತಿನ ಬಹುದೊಡ್ಡ ತೀವ್ರವಾಗಿ ಬೆಳೆಯುತ್ತಿರುವ ದೇಶಗಳಲ್ಲಿ ಭಾರತವೂ ಒಂದು ಎಂದು ಬಿಂಬಿಸಲು ಹಲವಾರು ಅಂಕಿಅಂಶಗಳನ್ನು ಪ್ರಸ್ತುತ ಪಡಿಸುತ್ತಿದೆ. ಆದರೆ ಈ ದೇಶದ ಬಹುತೇಕ ಜನರ ಬದುಕಿನಲ್ಲಿ ಇದು ಪ್ರತಿಬಿಂಬಿತವಾಗುತ್ತಿಲ್ಲ. ಈ ಅಭಿವೃದ್ಧಿ ಹೊಂದುತ್ತಿರುವ ಅರ್ಥವ್ಯವಸ್ಥೆಯು ಹೊಸ ಉದ್ಯೋಗಗಳನ್ನು ಸೃಷ್ಟಿಸುವಲ್ಲಿ ಸೋತಿದೆ. ನಿರುದ್ಯೋಗದ ಪ್ರಮಾಣವು ಹಿಂದೆಂದಿಗಿಂತಲೂ ಹೆಚ್ಚಾಗಿದೆ. ದೇಶದ ನಿರುದ್ಯೋಗಿಗಳಲ್ಲಿ ಶೇ.66ಕ್ಕಿಂತಲೂ ಹೆಚ್ಚಿನವರು ವಿದ್ಯಾವಂತರು. ಪ್ರಧಾನ ಮಂತ್ರಿಯವರ ಆರ್ಥಿಕ ಸಲಹೆಗಾರರ ಪ್ರಕಾರ, ದೇಶದ ದುಡಿಯುವ ಜನರಲ್ಲಿ ಶೇ.90 ರಷ್ಟು ಜನರ ತಲಾ ತಿಂಗಳ ಆದಾಯ ರೂ. 25,000 ಕ್ಕಿಂತ ಕಡಿಮೆಯಿದೆ. ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾನಿಲಯದ ಅಧ್ಯಯನವೊಂದರ ವರದಿ ಶೇ. 90ಕ್ಕಿಂತ ಹೆಚ್ಚಿನ ಕುಟುಂಬಗಳ ತಿಂಗಳ ಆದಾಯ ರೂ. 10,000 ಕ್ಕಿಂತ ಕಡಿಮೆಯಿದೆ ಎಂದು ಸೂಚಿಸುತ್ತದೆ. ಉದ್ಯೋಗಿಗಳಾಗಿರುವವರಲ್ಲೂ ಬಹುತೇಕರಿಗೆ ಸಾಮಾಜಿಕ ಸುರಕ್ಷೆಯಿಲ್ಲ. ಸ್ವಉದ್ಯೋಗಿಗಳ ಪರಿಸ್ಥಿತಿ ಇನ್ನೂ ಕೆಟ್ಟದಾಗಿದೆ. ಭಾರತದಲ್ಲಿ ಜಗತ್ತಿನ ಮೂರನೆ ಒಂದರಷ್ಟು ಅಪೌಷ್ಟಿಕ ಮಕ್ಕಳಿದ್ದಾರೆ. ಮೂರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಅರ್ಧದಷ್ಟು ಮಕ್ಕಳು ಕಡಿಮೆ ತೂಕದವರು ಜಾಗತಿಕ ಹಸಿವು ಸೂಚ್ಯಂಕ 2023ರಲ್ಲಿ ಭಾರತವು 125 ದೇಶಗಳಲ್ಲಿ 111 ನೇ ಸ್ಥಾನದಲ್ಲಿದೆ. ಭಾರತದಲ್ಲಿ ಹೆಚ್ಚುತ್ತಿರುವ ಹಸಿವಿನ ಗಂಭೀರ ಪರಿಸ್ಥಿತಿಯು ಬಹಳ ಕಳವಳಕಾರಿಯಾಗಿದೆ.

ಆರ್ಥಿಕ ಹಕ್ಕುಗಳು

ಭಾರತದೊಳಗೇ ಅಸಹ್ಯಕರ ಅತಿವೈಭೋಗದ ಜೀವನ ನಡೆಸುತ್ತಿರುವ ಶೇಕಡಾ ಒಂದರಷ್ಟು ಜನರ ಇನ್ನೊಂದು ಭಾರತವಿದೆ. ಬೆಳೆಯುತ್ತಿರುವ ಅರ್ಥವ್ಯವಸ್ಥೆಯ ಎಲ್ಲ ಲಾಭವನ್ನೂ ಅವರು ಕಬಳಿಸುತ್ತಿದ್ದಾರೆ. ಪ್ರತೀ ವರ್ಷ ಲಕ್ಷಾಂತರ ಜನ ಬಡತನದ ಅಂಚಿಗೆ ತಳ್ಳಲ್ಪಡುತ್ತಿರುವಾಗ ಕೆಲವೇ ಬಹು ಕೋಟ್ಯಾಧಿಪತಿಗಳ ಸಂಪತ್ತು ಏರುತ್ತಲೇ ಇದೆ. ದೇಶದ ಅತಿ ಶ್ರೀಮಂತ ಶೇಕಡಾ ಒಂದರಷ್ಟು ಜನ ದೇಶದ ಶೇ. 40ರಷ್ಟು ಸಂಪತ್ತಿನ ಒಡೆತನ ಹೊಂದಿದ್ದಾರೆ. ಈ ಹಿಂದೆಂದೂ ಕಂಡಿರದಂತಹ ಅಸಮಾನತೆಗೆ ದೇಶ ಸಾಕ್ಷಿಯಾಗಿದೆ. ಈ ಅಸಮಾನತೆಯನ್ನು ನಿಗ್ರಹಿಸದಿದ್ದಲ್ಲಿ ಅದು ಕೇವಲ ಆರ್ಥಿಕತೆಯ ಮೇಲೆ ದುಷ್ಪರಿಣಾಮ ಬೀರುವುದಿಲ್ಲ ಸಾಮಾಜಿಕ ಆಸ್ಫೋಟಕ್ಕೂ ಕಾರಣವಾಗುತ್ತದೆ. ದೇಶದ ನಾಗರಿಕರಿಗೆ ಹಿಂದೆಂದಿಗಿಂತಲೂ ಇಂದು ತಮಗೆ ಆರ್ಥಿಕ ಹಕ್ಕುಗಳ ಅಗತ್ಯವಿದೆಯೆಂದು ಅನುಭವವಾಗುತ್ತಿದೆ.

ಆಹಾರ, ಆರೋಗ್ಯ, ಶಿಕ್ಷಣ, ಉದ್ಯೋಗ ಮತ್ತು ವೃದ್ಧಾಪ್ಯ ವೇತನದಂತಹ ಮೂಲಭೂತ ಆರ್ಥಿಕ ಹಕ್ಕುಗಳಿಗಾಗಿ ಒಂದು ಸಶಕ್ತ ಚಳುವಳಿ ಕಟ್ಟುವುದನ್ನು ಇಂದಿನ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯು ಅನಿವಾರ್ಯಗೊಳಿಸಿದೆ. ದೇಶದ ನಾಗರಿಕರಿಗೆ ಈ ಹಕ್ಕುಗಳನ್ನು ನೀಡಲು ಅಗತ್ಯ ಸಂಪನ್ಮೂಲವಿಲ್ಲವೆಂದು ನವ ಉದಾರೀಕರಣವು ವಾದಿಸುತ್ತದೆ. ದೇಶದ ನೈಸರ್ಗಿಕ ಸಂಪನ್ಮೂಲದಲ್ಲಿ ಎಲ್ಲ ನಾಗರಿಕರಿಗೂ ಸಮಾನ ಅಧಿಕಾರವಿದೆ ಎಂಬುದು ಸಾಮಾನ್ಯ ಅರಿವು. ಹಾಗಾಗಿ ಎಲ್ಲ ನಾಗರಿಕರಿಗೂ ಘನತೆಯ ಬದುಕು ಸಾಧ್ಯವಾಗಿಸುವ ಸೇವಾ ಸೌಲಭ್ಯಗಳನ್ನೊದಗಿಸುವುದು ಸರ್ಕಾರದ ಕರ್ತವ್ಯ. ಒಂದು ನ್ಯಾಯಯುತವಾದ ತೆರಿಗೆಯ ವ್ಯವಸ್ಥೆಯನ್ನು ರೂಪಿಸುವ ಮೂಲಕ ಅದಕ್ಕೆ ಬೇಕಾದ ಸಂಪನ್ಮೂಲ ಸಂಗ್ರಹಿಸುವುದು ಸಾಧ್ಯವಿದೆಯೆಂದು ಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್ ವಾದಿಸುತ್ತಾರೆ. ಕಡು ಶ್ರೀಮಂತರ ಸಂಪತ್ತಿನ ಮೇಲೆ ಶೇ.2 ರಷ್ಟು ತೆರಿಗೆ ವಿಧಿಸಿದರೆ, ಮುಂದುವರೆದ ದೇಶಗಳಂತೆ ಪಿತ್ರಾರ್ಜಿತ ಆಸ್ತಿಯ ಮೇಲೆ ತೆರಿಗೆ ವಿಧಿಸಿದರೆ ಜನರಿಗೆ ಆಹಾರ, ಆರೋಗ್ಯ, ಶಿಕ್ಷಣ ಮತ್ತು ವೃದ್ಧಾಪ್ಯ ವೇತನಗಳನ್ನು ಒದಗಿಸಲು ಅಗತ್ಯವಿರುವ ಸಂಪನ್ಮೂಲ ಸಂಗ್ರಹವಾಗುತ್ತದೆ. ಅದಕ್ಕೆ ಅಗತ್ಯವಿರುವುದು ರಾಜಕೀಯ ಇಚ್ಛಾಶಕ್ತಿ. ಆಸೆಬುರುಕತನದಿಂದ ಕೂಡಿರುವ ಬಂಡವಾಳಶಾಹಿ ವ್ಯವಸ್ಥೆ ಇದನ್ನು ಖಂಡಿತ ಸುಲಭವಾಗಿ ಒಪ್ಪುವುದಿಲ್ಲ ಆ ನಿಟ್ಟಿನಲ್ಲಿ ಬಹು ಸಶಕ್ತ ಚಳುವಳಿ ಕಟ್ಟಬೇಕಿದೆ. ನಾಗರಿಕರು ಮೂಲಭೂತ ಆರ್ಥಿಕ ಹಕ್ಕುಗಳ ಬೇಡಿಕೆಯನ್ನು ಮುಂದೊಡ್ಡುವ ಕಾಲ ಬಂದಿದೆ. ಇನ್ನು ತಡಮಾಡದೇ ನಾಗರಿಕ ಸಮಾಜದ ಪ್ರಗತಿಗಾಮಿ ಜನತೆ, ಕಾರ್ಮಿಕ ಸಂಘಟನೆಗಳು ಮತ್ತು ರೈತ ಸಂಘಟನೆಗಳು ಒಂದಾಗಿ ಸೌಹಾರ್ದತೆಯಿಂದ ಚಳುವಳಿ ಕಟ್ಟಬೇಕಿದೆ. ●

ಸೌಹಾರ್ದ ಶಿಬಿರ.....

ಪುಟ 16 ರಿಂದ

ಗೋಪಾಲಕೃಷ್ಣ ಅರಳಹಳ್ಳಿಯವರು ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. 'ಶ್ರೇಣೀಕೃತ ಸಮಾಜದ ಆಯಾಮಗಳು' ಕುರಿತು ಹಿರಿಯ ಸಾಮಾಜಿಕ ಚಿಂತಕರಾದ ಜಿ.ಎನ್.ನಾಗರಾಜ್, 'ಸಾಹಿತ್ಯ ಮತ್ತು ಸೌಹಾರ್ದತೆ' ಕುರಿತು ತುಮಕೂರು ವಿಶ್ವವಿದ್ಯಾಲಯ ಪ್ರಾಧ್ಯಾಪಕ ಡಾ.ನಾಗಭೂಷಣ್ ಬಗ್ಗನಡು, 'ಸಾಂಸ್ಕೃತಿಕ ಆಚರಣೆಗಳು ಮತ್ತು ಸೌಹಾರ್ದತೆ' ಕುರಿತು ಪ್ರಾಧ್ಯಾಪಕರು ಹಾಗೂ ಸಂಸ್ಕೃತಿ ಚಿಂತಕರಾದ ಡಾ.ಅರುಣ್ ಜೋಳದ ಕೂಡ್ಲಿಗಿ, 'ಸಿನಿಮಾ ಮತ್ತು ಸೌಹಾರ್ದತೆ' ಕುರಿತು ಚಲನಚಿತ್ರ ಸಾಹಿತಿ ಅನಂತ ಶಾಂದ್ರೇಯ ವಿಚಾರ ಮಂಡಿಸಿದರು.

'ಸೌಹಾರ್ದತೆ ಮತ್ತು ಜನ ಚಳವಳಿ'

ಸೆಪ್ಟೆಂಬರ್ 29 ರಂದು 'ಸೌಹಾರ್ದತೆ ಮತ್ತು ಜನ ಚಳವಳಿ' ಎಂಬ ಮುಖ್ಯ ವಿಷಯದ ಮೇಲಿನ ಗೋಷ್ಠಿಯಲ್ಲಿ 'ಕೋಮುವಾದ: ವಿವಿಧ ಆಯಾಮಗಳು' ಕುರಿತು ಸಾಮಾಜಿಕ ಚಿಂತಕರಾದ ಡಾ.ಕೆ. ಪ್ರಕಾಶ್, 'ಸೈದ್ಧಾಂತಿಕ ವಾದಗಳು ಮತ್ತು ಸೌಹಾರ್ದ ಚಳವಳಿ' ಕುರಿತು ಡಾ.ಕಿರಣ್ ಎಂ. ಗಾಜನೂರು, ಸಹಾಯಕ ಪ್ರಾಧ್ಯಾಪಕರು, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ-ಕಲ್ಬುರ್ಗಿ, 'ಯುವಜನ ಮತ್ತು ಸಾಮಾಜಿಕ ಹೊಣೆಗಾರಿಕೆ' ಕುರಿತು ಕಾಂ. ಜ್ಯೋತಿ ಅನಂತ ಸುಬ್ಬರಾವ್, ರಾಜ್ಯ ಅಧ್ಯಕ್ಷರು, ನ್ಯಾಷನಲ್ ಫೆಡರೇಷನ್ ಆಫ್ ಇಂಡಿಯನ್ ವುಮೆನ್ ಇವರು ವಿಷಯ ಮಂಡಿಸಿದರು. ಜನಪರ ಹೋರಾಟಗಾರ ಮುನೀರ್ ಕಾಟಿಪಳ್ಳ, ಅಧ್ಯಕ್ಷತೆ ವಹಿಸಿದ್ದರು.

ಪರಧರ್ಮವನ್ನು ಸಹಿಸುವ ಗುಣವೇ ಚಿನ್ನದಂತೆ

ಎರಡು ದಿನಗಳ ಚಿಂತನ ಶಿಬಿರದ ಸಮಾರೋಪದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಡಾ.ಎಚ್.ಎಲ್. ಪುಷ್ಪ ಅವರು ನಮ್ಮದು ಬಹುತ್ವದ ಭಾರತ, ಕನ್ನಡದ ಮೊದಲ ಲಭ್ಯಕೃತಿ 'ಕವಿರಾಜಮಾರ್ಗ'ದಲ್ಲಿ ಕವಿರಾಜ ಮಾರ್ಗಕಾರನು ಪರಧರ್ಮವನ್ನು ಸಹಿಸುವ ಗುಣವೇ ಚಿನ್ನದಂತೆ ಎಂದಿದ್ದಾನೆ. 'ಮನುಷ್ಯ ಜಾತಿ ತಾನೊಂದೆ ವಲಂ' ಎಂದ ಪಂಪನ ಪರಂಪರೆ ನಮ್ಮದು. ಆದರೆ ಇಂದು ಹಿಂದೂ-ಮುಸ್ಲಿಮ್ ಐಕ್ಯತೆಗೆ ಧಕ್ಕೆ ತರಲಾಗುತ್ತಿದೆ. ಅಧ್ಯಾಪಕರು ಮತ್ತು ಶಿಕ್ಷಕರ ಮನಸ್ಸು ಕೋಮುವಾದೀಕರಣ ಗೊಳಿಸುತ್ತಿರುವಾಗ ನಾವು ಶಿಕ್ಷಕರನ್ನು ಸೌಹಾರ್ದತೆಯ ನೆಲೆಯಲ್ಲಿ ತಯಾರು ಮಾಡಬೇಕು ಎಂದರು.

ವಿದ್ಯಾರ್ಥಿಗಳ ನಡುವೆ ಹೋಗಬೇಕು

ಕರ್ನಾಟಕ ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್‌ವಾದ)ಯ ರಾಜ್ಯ ಸಂಚಾಲಕರಾದ ಮಾವಳ್ಳಿ ಶಂಕರ್ ಅವರು ಮಾತನಾಡಿ ಎಪ್ಪತ್ತು-ಎಂಭತ್ತರ ದಶಕಗಳಲ್ಲಿ ಸಮುದಾಯ, ಬಂಡಾಯ, ದಲಿತ ಚಳುವಳಿಗಳು ಹುಟ್ಟುಹಾಕಿದ ವಾತಾವರಣ, ಕಾಲೇಜುಗಳಲ್ಲಿ ➚

ಶ್ರೀಲಂಕಾದ ಹಂಗಾಮಿ ಪ್ರಧಾನಿಯಾಗಿ 'ಜನತಾ ವಿಮುಕ್ತಿ ಪೆರಮುನ' ಪಕ್ಷದ ಹರಿಣಿ ಅಮರಸೂರ್ಯ

ಶ್ರೀಲಂಕಾದ ಅಧ್ಯಕ್ಷರಾದ ಅನುರ ಕುಮಾರ ದಿಸ್ಸನಾಯಕೆ ಅವರು ಸೆಪ್ಟೆಂಬರ್ 24ರಂದು ಡಾ. ಹರಿಣಿ ಅಮರಸೂರ್ಯ ಅವರನ್ನು ಹಂಗಾಮಿ ಪ್ರಧಾನ ಮಂತ್ರಿಯಾಗಿ ನೇಮಕ ಮಾಡಿದರು. ಸಿರಿಮಾವೋ ಬಂಡಾರನಾಯಕೆ ಮತ್ತು ಚಂದ್ರಿಕಾ ಕುಮಾರತುಂಗ ಅವರ ನಂತರ ಹರಿಣಿ ಅಮರಸೂರ್ಯ ಅವರು ಈ ಪಾತ್ರವನ್ನು ನಿರ್ವಹಿಸಿದ ಮೂರನೇ ಮಹಿಳೆಯಾಗಿದ್ದಾರೆ. ಹೊಸ ಸರ್ಕಾರ ರಚನೆಯಾದ ನಂತರ ಶ್ರೀಲಂಕಾದ ನಾಲ್ಕು ಸದಸ್ಯರ ಸಂಪುಟವನ್ನು ರಚಿಸಿದೆ. ಇದರಲ್ಲಿ ಪ್ರಧಾನ ಮಂತ್ರಿ ಸ್ಥಾನದ ಜೊತೆಗೆ ಕಾನೂನು, ಶಿಕ್ಷಣ, ಕಾರ್ಮಿಕ, ಕೈಗಾರಿಕೆಗಳು, ವಿಜ್ಞಾನ ಮತ್ತು ತಂತ್ರಜ್ಞಾನ, ಆರೋಗ್ಯ ಮತ್ತು ಹೂಡಿಕೆಗಳಂತಹ ಪ್ರಮುಖ ಸಚಿವ ಜವಾಬ್ದಾರಿಗಳನ್ನು ಹರಿಣಿ ಅವರಿಗೆ ವಹಿಸಲಾಗಿದೆ.

ಯಾರು ಈ ಹರಿಣಿ ಅಮರಸೂರ್ಯ?

ಹರಿಣಿ ಅಮರಸೂರ್ಯ ಅವರು ಶಿಕ್ಷಣ ತಜ್ಞೆ, ಸಾಮಾಜಿಕ ಕಾರ್ಯಕರ್ತೆ ಮತ್ತು ಮಾರ್ಕ್ಸ್‌ವಾದಿ ಪಕ್ಷವಾದ ಜನತಾ ವಿಮುಕ್ತಿ ಪೆರಮುನ (ಜೆವಿಪಿ) ದ ಮಾಜಿ ಸಂಸದೆ. ಅವರು ಮಾರ್ಚ್ 6, 1970 ರಂದು ದೇಶದ ನೈಋತ್ಯ ಕರಾವಳಿಯ ಗಾಲೆಯಲ್ಲಿ ಜನಿಸಿದರು. ಅವರ ತಂದೆ ತಾಯಿಯ ಮೂರು ಮಕ್ಕಳಲ್ಲಿ ಹರಿಣಿ ಕೊನೆಯವರು. ಆಕೆಯ ತಂದೆ ಟೀ ಎಸ್ಟೇಟ್ ಮಾಲೀಕರಾಗಿದ್ದರು. ರಾಷ್ಟ್ರೀಕರಣದ ಪ್ರಯತ್ನದ ಭಾಗವಾಗಿ ಶ್ರೀಲಂಕಾ ಸರ್ಕಾರವು ಇವರ ಭೂಮಿಯನ್ನು ವಶಪಡಿಸಿಕೊಂಡಿತು. ನಂತರ ಆ ಕುಟುಂಬವು ಕೊಲಂಬೊಗೆ ಸ್ಥಳಾಂತರಗೊಂಡಿತು.

ದೆಹಲಿ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರ

ಹರಿಣಿ ಅವರು ಕೊಲಂಬೊದಲ್ಲಿನ ಆಂಗ್ಲಿಕನ್ ಬಾಲಕಿಯರ ಶಾಲೆಯಾದ ಬಿಷಪ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿದರು ಮತ್ತು ಶಾಲೆಯಲ್ಲಿದ್ದಾಗ ವಿನಿಮಯ ವಿದ್ಯಾರ್ಥಿಯಾಗಿ ಅಮೆರಿಕದಲ್ಲಿ ಒಂದು ವರ್ಷ ಕಳೆದರು. 1988–89ರಲ್ಲಿ ಹಿಂಸಾಚಾರದ ಹೊಸ ಉಲ್ಬಣದ ಪರಿಣಾಮದಿಂದಾಗಿ, ಶ್ರೀಲಂಕಾದಲ್ಲಿ ತನ್ನ ಅಧ್ಯಯನವನ್ನು ನಿಲ್ಲಿಸುವ ಪರಿಸ್ಥಿತಿ ಬಂತು. ಇದರಿಂದಾಗಿ ಅವರು ಭಾರತಕ್ಕೆ ಬಂದರು. 1994 ರಲ್ಲಿ ಅವರು ದೆಹಲಿ ವಿಶ್ವವಿದ್ಯಾಲಯದ ಹಿಂದೂ ಕಾಲೇಜಿನಲ್ಲಿ ಸಮಾಜಶಾಸ್ತ್ರದಲ್ಲಿ ತಮ್ಮ ಬಿಎ (ಗೌರವಗಳು) ಪೂರ್ಣಗೊಳಿಸಿದರು.

ಮಾನವಶಾಸ್ತ್ರದಲ್ಲಿ ಡಾಕ್ಟರೇಟ್

ಅವರು ಆಸ್ಟ್ರೇಲಿಯಾದ ಮ್ಯಾಕ್ವಾರಿ (Macquarie) ವಿಶ್ವವಿದ್ಯಾಲಯದಿಂದ ಅನ್ವಯಿಕ ಮಾನವಶಾಸ್ತ್ರ ಮತ್ತು ಅಭಿವೃದ್ಧಿಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು ಮತ್ತು ಎಡಿನ್ ಬರ್ಗ್ ವಿಶ್ವವಿದ್ಯಾಲಯದಿಂದ ಸಾಮಾಜಿಕ ಮಾನವಶಾಸ್ತ್ರದಲ್ಲಿ ಡಾಕ್ಟರೇಟ್ ಪಡೆದರು. ಮೊದಲಿನಿಂದಲೂ ಪ್ರಗತಿಪರ ಚಿಂತಕರಾಗಿದ್ದ ಅವರು ಶ್ರೀಲಂಕಾದಲ್ಲಿ ಹಕ್ಕುಗಳ ಕಾರ್ಯಕರ್ತೆಯಾಗಿ ಶ್ರಮಿಸಿದ್ದರು.

> **ಬಂದ ಅವಕಾಶವನ್ನು ಬಳಸಿಕೊಂಡು ವಿವಿಧ ಕ್ಷೇತ್ರಗಳಲ್ಲಿ ದಾಪುಗಾಲು ಹಾಕುತ್ತಿರುವ ಅನೇಕ ಮಹಿಳೆಯರು ನಮ್ಮ ಸುತ್ತಮುತ್ತ ಇದ್ದಾರೆ. ಕೆಲವು ಕ್ಷೇತ್ರಗಳಲ್ಲಿ ಮೊದಲ ಹೆಜ್ಜೆ ಇಟ್ಟು ಮುಂದಿನ ಪೀಳಿಗೆಗೆ ಪ್ರೇರಣೆ ನೀಡುವವರೂ ಇದ್ದಾರೆ. ತಮ್ಮ ಒಳ್ಳೆಯ ಉದ್ಯೋಗ ಬಿಟ್ಟು ಜನರಿಗಾಗಿ ಜೀವನ ಮುಡಿಪಾಗಿಟ್ಟವರೂ ಇದ್ದಾರೆ. ಆ ವರ್ಗಕ್ಕೆ ಸೇರಿದವರು ಹರಿಣಿ ಅಮರಸೂರ್ಯ. ಅವರು ಶ್ರೀಲಂಕಾದಲ್ಲಿ ಹೊಸದಾಗಿ ರಚನೆಯಾದ ಕಮ್ಯೂನಿಸ್ಟ್ ಸರ್ಕಾರದ ಪ್ರಧಾನ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಸಿರಿಮಾವೋ ಬಂಡಾರನಾಯಕೆ ನಂತರ ದೇಶದ ಮೂರನೇ ಮಹಿಳಾ ಪ್ರಧಾನಿ ಮತ್ತು ತಮ್ಮ ಪಕ್ಷದ ಪರವಾಗಿ ಆಯ್ಕೆಯಾದ ಮೊದಲ ಮಹಿಳೆಯಾಗಿ ಹರಿಣಿ ಇತಿಹಾಸ ನಿರ್ಮಿಸಿದ್ದಾರೆ.**

ಅವರ ಮೊದಲ ಉದ್ಯೋಗವೆಂದರೆ ಸಮುದಾಯ ಮಾನಸಿಕ ಆರೋಗ್ಯ ಕೇಂದ್ರದಲ್ಲಿ ಸಾಮಾಜಿಕ ಆರೋಗ್ಯ ಅಧಿಕಾರಿಯಾಗಿದ್ದು. ಅಲ್ಲಿ ಅವರು ಸಾಂಸ್ಥಿಕ ಮಹಿಳೆಯರೊಂದಿಗೆ ಕೆಲಸ ಮಾಡಿದರು. "ಅದು (ಅಲ್ಲಿನ ಅನುಭವ) ನಾನು ಜಗತ್ತನ್ನು ನೋಡುವ ವಿಧಾನವನ್ನು ಬದಲಾಯಿಸಿತು ಮತ್ತು ನಮಗೆ ಯಾವಾಗಲೂ ಗೋಚರಿಸದ ಸ್ಥಳಗಳಲ್ಲಿ ನಿಜವಾಗಿಯೂ ಏನು ನಡೆಯುತ್ತಿದೆ ಎಂಬುದರ ಬಗ್ಗೆ ನನ್ನ ಕಣ್ಣುಗಳನ್ನು ತೆರೆಯಿತು" ಎಂದು ಅಮರಸೂರ್ಯ 2020 ರಲ್ಲಿ ವುಮೆನ್ ಫಾರ್ ಪಾಲಿಟಿಕ್ಸ್ ಗೆ ತಿಳಿಸಿದ್ದಾರೆ.



2021 ರಲ್ಲಿ ಪೂರ್ಣ ಸಮಯ ರಾಜಕೀಯಕ್ಕೆ ಪ್ರವೇಶಿಸುವ ಮೊದಲು, ಶ್ರೀಲಂಕಾದ ಮುಕ್ತ ವಿಶ್ವವಿದ್ಯಾಲಯದಲ್ಲಿ ಮಾನವಿಕ ಮತ್ತು ಸಮಾಜ ವಿಜ್ಞಾನ ವಿಭಾಗದ ಮುಖ್ಯಸ್ಥರಾಗಿದ್ದರು.

ಲಿಂಗ ಅಸಮಾನತೆ ಕುರಿತಾದ ಸಂಶೋಧನೆ

ಲಿಂಗ ಅಸಮಾನತೆ, ಮಕ್ಕಳ ಆರೈಕೆ, ನಿರುದ್ಯೋಗ ಮತ್ತು ದೇಶದ ಶಿಕ್ಷಣ ವ್ಯವಸ್ಥೆಯಲ್ಲಿನ ನ್ಯೂನತೆಗಳ ಕುರಿತಾದ ಸಂಶೋಧನೆಗಾಗಿ ಹರಿಣಿ ಅವರು ಅನೇಕ ಪುರಸ್ಕಾರಗಳನ್ನು ಪಡೆದಿದ್ದಾರೆ. ಅವರು ಸಲಿಂಗಕಾಮಿ ಸಮಸ್ಯೆಗಳ ಬಗ್ಗೆಯೂ ಮಾತನಾಡಿದರು. ರಾಜಕೀಯದಲ್ಲಿ ಲಿಂಗ ತಾರತಮ್ಯ, ಅಭಿವೃದ್ಧಿ, ರಾಜ್ಯ–ಸಮಾಜ ಸಂಬಂಧಗಳು, ಮಕ್ಕಳ ರಕ್ಷಣೆ, ಜಾಗತೀಕರಣ ಮತ್ತು ಅಭಿವೃದ್ಧಿಯ ಕುರಿತು ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಹಲವು ವರ್ಷಗಳು ಮಕ್ಕಳ ರಕ್ಷಣೆಗಾಗಿಯೂ ಹಲವು ಸೇವೆಗಳನ್ನು ಮಾಡಿದ್ದಾರೆ. ಶ್ರೀಲಂಕಾದಲ್ಲಿ ಸಾಮಾಜಿಕ ನ್ಯಾಯ ಮತ್ತು ಶಿಕ್ಷಣಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ. ಅವರು ಶ್ರೀಲಂಕಾದ NGO NEST ನ ನಿರ್ದೇಶಕರ ಮಂಡಳಿಯ ಸದಸ್ಯರೂ ಆಗಿದ್ದಾರೆ.

ಅಮರಸೂರ್ಯ ಯಾವಾಗಲೂ ಸ್ತ್ರೀವಾದಿಯಾಗಿ ಗುರುತಿಸಿಕೊಂಡಿದ್ದಾರೆ ಮತ್ತು ರಾಜಕೀಯದಲ್ಲಿ ಮಹಿಳೆಯರ ಹೆಚ್ಚಿನ ಒಳಗೊಳ್ಳುವಿಕೆಗಾಗಿ ಪ್ರತಿಪಾದಿಸಿದ್ದಾರೆ. ಅವರು ಚಾಲ್ತಿಯಲ್ಲಿರುವ ರಾಜಕೀಯ ಸಂಸ್ಕೃತಿಯನ್ನು "ಹೆಚ್ಚಾಗಿ ರಾಜವಂಶದ ರಾಜಕೀಯ" ಮತ್ತು ಅತ್ಯಂತ ವಿಷಕಾರಿ, ಪುರುಷ, ಹಿಂಸಾತ್ಮಕ ಮತ್ತು ಪ್ರತ್ಯೇಕವಾಗಿದೆ ಎಂದು ವಿವರಿಸಿದರು. ರಾಜಕೀಯವು ಗೌರವಾನ್ವಿತ ವೃತ್ತಿಯಲ್ಲ ಎಂಬ ಕಲ್ಪನೆಯು ಮಹಿಳೆಯರ ಪ್ರವೇಶಕ್ಕೆ ಪ್ರಮುಖ ತಡೆಯಾಗಿದೆ ಎಂದು ಅವರು ವಿವರಿಸಿದ್ದಾರೆ.

ಕಾರ್ಮಿಕರ ಪ್ರತಿಭಟನೆಗಳ ಪ್ರಭಾವ

ಅವರು 2011 ರ ಕಾರ್ಮಿಕರ ಪ್ರತಿಭಟನೆಗಳು ತಮ್ಮ ರಾಜಕೀಯದ ಮೇಲೆ ಮಹತ್ವದ ಪ್ರಭಾವ ಬೀರಿದವು ಎಂದು ಹೇಳಿ, ಫೆಡರೇಶನ್ ಆಫ್ ಯೂನಿವರ್ಸಿಟಿ ಟೀಚರ್ಸ್ ಅಸೋಸಿಯೇಷನ್ ಸದಸ್ಯರಾಗಿ ತಮ್ಮ ಬೆಂಬಲವನ್ನು ವಿಸ್ತರಿಸಿದರು. "ನಾನು ವಿಶ್ವವಿದ್ಯಾನಿಲಯದಲ್ಲಿ ನನ್ನ ಮೊದಲ ದಿನದಂದು ಒಕ್ಕೂಟಕ್ಕೆ ಸೇರಿಕೊಂಡೆ ಮತ್ತು ನನ್ನ ಮೊದಲ ಪ್ರತಿಭಟನಾ ಮೆರವಣಿಗೆಗೆ ಹೋದೆ–ಕೈಯಲ್ಲಿ ಉದ್ಯೋಗದ ಆಫರ್ ಲೆಟರ್ ಇಲ್ಲದೆ" ಎಂದು ಅವರು ವುಮೆನ್ ಫಾರ್ ಪಾಲಿಟಿಕ್ಸ್‌ಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ಪ್ರಯತ್ನಗಳು ಅವರನ್ನು ಜೆವಿಪಿಗೆ ಕರೆದೊಯ್ದುವು. ಜೆವಿಪಿ ಅಲ್ಲಿಯವರೆಗೆ ತೀವ್ರವಾದಿ ಸಂಘಟನೆ ಎಂದು ಪರಿಗಣಿಸಲ್ಪಟ್ಟಿತ್ತು. 1971 ಮತ್ತು 1988–89 ರಲ್ಲಿ ಸರ್ಕಾರದ ವಿರುದ್ಧ ರಕ್ತಸಿಕ್ತ ದಂಗೆಗಳಿಗೆ ಕಾರಣವಾಯಿತು. ಇದು ಸುಮಾರು 60,000 ಕ್ಕೂ ಹೆಚ್ಚು ಜನರನ್ನು ಬಲಿತೆಗೆದುಕೊಂಡಿತು. ಆ ಹೊತ್ತಿಗೆ, ಪಕ್ಷವು ತನ್ನ ನಿಲುವನ್ನು ಬದಲಾಯಿಸಿತ್ತು. ಅದರ ನಾಯಕ ಅನುರ ಡಿಸ್ಸನಾಯಕೆ ತನ್ನ ಅಪರಾಧಗಳಿಗಾಗಿ ಕ್ಷಮೆಯಾಚಿಸಿದರು.

ರಾಜಕೀಯ ಜೀವನಕ್ಕೆ

ಹರಿಣಿ ಅವರು 2019 ರಲ್ಲಿ ರಾಷ್ಟ್ರೀಯ ಬುದ್ಧಿಜೀವಿಗಳ ಸಂಸ್ಥೆಗೆ ಸೇರಿದರು. 2019 ರ ಶ್ರೀಲಂಕಾ ಅಧ್ಯಕ್ಷೀಯ ಚುನಾವಣೆಯ ಸಂದರ್ಭದಲ್ಲಿ ಎನ್.ಪಿ.ಪಿ. ಅಭ್ಯರ್ಥಿ ಅನುರ ಕುಮಾರ ಡಿಸ್ಸನಾಯಕೆ ಪರವಾಗಿ ಪ್ರಚಾರ ಮಾಡಿದರು. ಅವರು 2020 ರಲ್ಲಿ ರಾಜಕೀಯಕ್ಕೆ ಬಂದಾಗಿನಿಂದ ನ್ಯಾಷನಲ್ ಪೀಪಲ್ಸ್ ಪಾರ್ಟಿಯೊಂದಿಗೆ ಕೆಲಸ ಮಾಡಿದ್ದಾರೆ.

ಶ್ರೀಲಂಕಾ ಮುಕ್ತ ವಿಶ್ವವಿದ್ಯಾಲಯದಲ್ಲಿ ಸಾಮಾಜಿಕ ಅಧ್ಯಯನ ವಿಭಾಗದಲ್ಲಿ ಹಿರಿಯ ಉಪನ್ಯಾಸಕರಾಗಿ ಕೆಲಸ ಮಾಡಿದ್ದಾರೆ. ಶ್ರೀಲಂಕಾದ 16ನೇ ಸಂಸತ್ತಿಗೆ ಪ್ರವೇಶಿಸಲು ಜೆಜೆಬಿ ರಾಷ್ಟ್ರೀಯ ಪಟ್ಟಿ ಅಭ್ಯರ್ಥಿಯಾಗಿ ನಾಮನಿರ್ದೇಶನಗೊಂಡಿತು. ಹಾಗಾಗಿ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಶೈಕ್ಷಣಿಕ ಹಿರಿಯ ಉಪನ್ಯಾಸಕರಾಗಿ ಸೇವೆ ಮುಂದುವರಿಸಬೇಕೆ ಎಂದು ಗಂಭೀರವಾಗಿ ಚಿಂತಿಸಿದರು. ಅಂತಿಮವಾಗಿ, ಅವರು ಸಮಾಜ ಸೇವೆಗೆ ತನ್ನನ್ನು ತೊಡಗಿಸಿಕೊಳ್ಳಲು ನಿರ್ಧರಿಸಿದರು. ತಮ್ಮ ರಾಜಕೀಯ ಜೀವನವನ್ನು ಮುಂದುವರಿಸಲು ಮುಕ್ತ ವಿಶ್ವವಿದ್ಯಾಲಯದ ಹಿರಿಯ ಉಪನ್ಯಾಸಕ ಹುದ್ದೆಗೆ ರಾಜೀನಾಮೆ ನೀಡಿದರು.

ಮಹಿಳೆಯರ ಅಭ್ಯುದಯಕ್ಕಾಗಿ

ಜನಸೇವೆಗೆ ತನ್ನ ಜೀವನವನ್ನು ಮುಡಿಪಾಗಿಟ್ಟಿರುವ ಹರಿಣಿ ಇಂದು ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಿರುವುದು ರಾಜಕೀಯದಲ್ಲಿ ಮಹಿಳೆಯರ ಪ್ರಗತಿಯ ಸಂಕೇತವಾಗಿದೆ. ಅದರ ಹೊರತಾಗಿ, ಪ್ರಗತಿಪರ ನಾಯಕತ್ವ ಮತ್ತು ಸುಧಾರಣೆಯ ಮೇಲೆ ಎನ್.ಪಿ.ಪಿ.ಗೆ ಇರುವ ಗಮನವನ್ನು ಇದು ಸಾಬೀತುಪಡಿಸುತ್ತದೆ. ಹರಿಣಿ ಈಗ ಶ್ರೀಲಂಕಾದ ಮೂರನೇ ಪ್ರಧಾನಿಯಾಗಿದ್ದಾರೆ. ಶ್ರೀಲಂಕಾ ಫ್ರೀಡಂ ಪಾರ್ಟಿಯ ಬಂಡಾರನಾಯಕೆ ಮೊದಲ ಮಹಿಳಾ ಪ್ರಧಾನಿಯಾದರು. ಮೂರು ಬಾರಿ ಪ್ರಧಾನ ಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುವ ಮೂಲಕ ವಿಶ್ವದ ಟಾಪ್ 10 ರೊಳಗೆ ತಲುಪಿದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಅವರು ಪ್ರಸಿದ್ಧರಾಗಿದ್ದಾರೆ. ಆ ನಂತರ 1994ರಲ್ಲಿ ಚಂದ್ರಿಕಾ ಕುಮಾರತುಂಗಾ ಅವರು ಎರಡು ತಿಂಗಳ ಕಾಲ ಪ್ರಧಾನಿಯಾಗಿದ್ದರು. ಈಗ ಹರಿಣಿ ಅಮರಸೂರ್ಯ ಅವರು ಎಡಪಂಥೀಯರಾಗಿ ಶ್ರೀಲಂಕಾ ದ ಹಂಗಾಮಿ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.

ನವೆಂಬರ್ 14 ರಂದು ಸಂಸತ್ ಚುನಾವಣೆ


ನೂತನ ಅಧ್ಯಕ್ಷ ಅನುರಾ ಕುಮಾರ ಡಿಸ್ಸನಾಯಕೆ ಅವರು ಶ್ರೀಲಂಕಾ ಸಂಸತ್ತನ್ನು ವಿಸರ್ಜಿಸಿ ಸೆಪ್ಟೆಂಬರ್ 24ರಂದು ಆದೇಶ ಹೊರಡಿಸಿದ್ದಾರೆ. ನವೆಂಬರ್ 14 ರಂದು ಸಂಸತ್ ಚುನಾವಣೆ ನಡೆಯಲಿದೆ ಎಂದು ಘೋಷಣೆ ಮಾಡಿದ್ದಾರೆ. 2020ರ ಆಗಸ್ಟ್‌ನಲ್ಲಿ ಶ್ರೀಲಂಕಾ ಸಂಸತ್ತಿನ ಚುನಾವಣೆ ನಡೆದಿತ್ತು. ಸಂಸತ್ತಿನ ಅಧಿಕಾರಾವಧಿ ಇನ್ನೂ 11 ತಿಂಗಳು ಇತ್ತು. ಸಂಸತ್ತು ಅವಧಿಗೂ ಮುನ್ನವೇ ವಿಸರ್ಜಿಸಿ ಚುನಾವಣೆ ನಡೆಯಲಿದೆ. ಈ ಚುನಾವಣೆಯಲ್ಲಿ ಎನ್.ಪಿ.ಪಿ. ಹೆಚ್ಚು ಸ್ಥಾನಗಳನ್ನು ಗಳಿಸಿದರೆ, ಅನುರ ಕುಮಾರ ದಿಸ್ಸನಾಯಕೆ ಅವರ ಸರ್ಕಾರ ತನ್ನ ಎಡಪಂಥೀಯ ಧೋರಣೆಗಳನ್ನು ಜಾರಿಗೊಳಿಸುವ ಹಾದಿ ಮತ್ತಷ್ಟು ಸುಲಭವಾಗುತ್ತದೆ. ●

ನಮ್ಮ ಮೇಷ್ಟ್ರುಗಳು ಹೇಳಿದ ಒಳ್ಳೆಯ ವಿಚಾರಗಳಿಂದ ನಾವು ಜೀವನದಲ್ಲಿ ಜನಪರ ಮೌಲ್ಯಗಳಿಗೆ ಬದ್ಧತೆಯಿಂದ ಇರುವುದು ಸಾಧ್ಯವಾಯಿತು. ಈಗ ನಾವು ವಿದ್ಯಾರ್ಥಿಗಳ ನಡುವೆ ಹೋಗಬೇಕು. ನಮ್ಮ ಚಟುವಟಿಕೆಗಳನ್ನು ವಿಕೇಂದ್ರೀಕರಿಸಬೇಕು ಎಂದರು.

ರಾಕ್ಷಸ ಯಾರು? ಆತನ ಆಕೃತಿಗಳು ಯಾವುವು ಗುರುತಿಸಿಕೊಳ್ಳಬೇಕು

ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕರಾದ ಎ.ಬಿ.ರಾಮಚಂದ್ರಪ್ಪ ಅವರು ಮಾತನಾಡಿ ಪ್ರಭುತ್ವ ಎಂಬುದು ಏಕರೂಪಿ ಅಲ್ಲ. ಇಂದು ಜಾತಿ, ಧರ್ಮ, ಭಾಷೆ, ಬಣ್ಣ, ಪ್ರದೇಶ ಮುಂತಾದವುಗಳ ಹೆಸರಿನಲ್ಲಿ ಅದು ಇರುತ್ತದೆ. ಅನಾದಿಕಾಲದಿಂದಲೂ ಸಾಮರಸ್ಯಕ್ಕೆ ಧಕ್ಕೆ ತರಲಾಗುತ್ತಿದೆ. ನಾವು ಸಾಂಘಿಕ ಹೋರಾಟಕ್ಕೆ ಮುಂಚೆ ಶತ್ರು ಯಾರು ಎಂಬುದನ್ನು ಗುರುತಿಸಿಕೊಳ್ಳಬೇಕು. ಬ್ರಹ್ಮರೂಪಿ ರಾಕ್ಷಸ ಯಾರು? ಆತನ ಆಕೃತಿಗಳು ಯಾವುವು ಎಂದು ಕಂಡುಕೊಳ್ಳಬೇಕು. ವಿಚಾರ ಸಂಕಿರಣ ಇತ್ಯಾದಿಗಳ ಮೂಲಕ ನಾವು ವಿದ್ಯಾರ್ಥಿಗಳನ್ನು ತಲುಪಬೇಕು. ಇಂದು ಅಂಬೇಡ್ಕರ್ ಮತ್ತು ಗೋಲ್ವಾಲ್ಕರ್ ಅವರನ್ನು ಸಮೀಕರಿಸುವ ಪ್ರಯತ್ನಗಳಾಗುತ್ತಿವೆ. ಇಂತಹ ಅಪಾಯಗಳ ವಿರುದ್ಧ ಎಲ್ಲರೂ ಒಗ್ಗಟ್ಟಿನಿಂದ ಚಳುವಳಿ ರೂಪಿಸಬೇಕು ಎಂದರು. ಸೌಹಾರ್ದ ಕರ್ನಾಟಕ ಸಂಯೋಜಕರಲ್ಲೊಬ್ಬರಾದ ಆರ್. ರಾಮಕೃಷ್ಣ ಕಾರ್ಯಕ್ರಮ ನಿರೂಪಿಸಿ ವಂದನಾರ್ಪಣೆ ಮಾಡಿದರು. ಸಮಾರೋಪ ಸಮಾರಂಭದಲ್ಲಿ ಸೌಹಾರ್ದ ಕರ್ನಾಟಕದ ಸಂಯೋಜಕರು ಹಾಗೂ ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ಮುಂತಾದವರು ಹಾಜರಿದ್ದರು. ಕೆ.ಜೆ.ವಿ.ಎಸ್. ಮುಖಂಡರಾದ ಇ. ಬಸವರಾಜು ಅವರು ಹಾಡಿದ 'ಹೆಜ್ಜೆ ಹೆಜ್ಜೆ ಜೋಡಿಸಿ ಮುಂದೆ ಮುಂದೆ ಸಾಗುವ' ಎಂಬ ಸೌಹಾರ್ದ ಗೀತೆಗೆ ಎಲ್ಲರೂ ದನಿಗೂಡಿಸಿ ಹಾಡುವುದರೊಂದಿಗೆ ಶಿಬಿರವು ಮುಕ್ತಾಯಗೊಂಡಿತು. ●

'ಹೊಸ ಭಾರತ'ದ ಕಥನ: ಭಾರತೀಯ ಸಂವಿಧಾನದ ವಿನಾಶ







ಸೀತಾರಾಮ್ ಯೆಚೂರಿ

ನಮ್ಮ 73ನೇ ಸ್ವಾತಂತ್ರ್ಯ ವಾರ್ಷಿಕೋತ್ಸವ ಸಮೀಪಿಸುತ್ತಿರುವಂತೆ ಭಾರತದ ಭವಿಷ್ಯದ ಬಗ್ಗೆ ಒಂದು ಹೊಸ ರಾಷ್ಟ್ರೀಯ ಕಥನವನ್ನು ನಮಗೆ ಬರೆದು ಕೊಡಲಾಗುತ್ತಿದೆ. 'ಹೊಸ ಭಾರತ'ದ ಈ ಕಥನದ ಪ್ರಕಾರ ಆಗಸ್ಟ್ 15, 1947 ಭಾರತ ಸ್ವಾತಂತ್ರ್ಯ ಗಳಿಸಿದ ದಿನ, ಆಗಸ್ಟ್ 5, 2019 ಸಂವಿಧಾನದ ಕಲಮು 370 ಮತ್ತು 35ಎ ರದ್ದುಗೊಳಿಸಿದ ದಿನ; ಮತ್ತು ಆಗಸ್ಟ್ 5, 2020, ಪ್ರಧಾನ ಮಂತ್ರಿಗಳು ಔಪಚಾರಿಕವಾಗಿ ರಾಮಮಂದಿರ ನಿರ್ಮಾಣವನ್ನು ಆರಂಭಿಸಿದ ದಿನ, ಭಾರತದ ನಿಜವಾದ ಸ್ವಾತಂತ್ರ್ಯದ ದಿನ.

ಈ ಹೊಸ ಕಥನ ಭಾರತದ ಸ್ವಾತಂತ್ರ್ಯ ಗಾಥೆಯ ಮತ್ತು ಭಾರತೀಯ ಸಂವಿಧಾನದ ಅಡಿಯಲ್ಲಿ ಮೂಡಿಬಂದ ಗಣತಂತ್ರದ ಸಂಪೂರ್ಣ ನಿರಾಕರಣೆಯಾಗಿದೆ, ಅದಕ್ಕೆ ತದ್ವಿರುದ್ಧವಾಗಿದೆ. ಇದು ಪ್ರಧಾನ ಮಂತ್ರಿ ಮೋದಿಯ ಭಾಷಣದ ಸಾರ. ಈ ಬಗ್ಗೆ ಮುಂದೆ ನೋಡೋಣ.

ಭಾರತೀಯ ಸಂವಿಧಾನ ನಮ್ಮ ಜನಗಳು ಮತ್ತು ನಮ್ಮ ದೇಶದ ಜೀವಾಳವಾದ ಶ್ರೀಮಂತ ಬಹುಳತೆ ಮತ್ತು ವೈವಿಧ್ಯತೆಯನ್ನು ಬಿಂಬಿಸುತ್ತದೆ. ಈ ವೈವಿಧ್ಯತೆಯಲ್ಲಿ ಸರ್ವಸಾಮಾನ್ಯತೆಯ ಎಳೆಗಳನ್ನು ಗಟ್ಟಿಗೊಳಿಸಿದಾಗ ಮತ್ತು ಈ ಬಹುಳತೆಯ ಪ್ರತಿಯೊಂದು ಆಯಾಮವನ್ನು–ಭಾಷಿಕ, ಜನಾಂಗೀಯ, ಧಾರ್ಮಿಕ ಇತ್ಯಾದಿಗಳನ್ನು–ಗೌರವಿಸಿದಾಗ ಹಾಗೂ ಸಮಾನತೆಯ ಆಧಾರದಲ್ಲಿ ಕಂಡಾಗ ಮಾತ್ರವೇ ಭಾರತದ ಐಕ್ಯತೆಯನ್ನು ಕ್ರೋಡೀಕರಿಸಲು ಸಾಧ್ಯ. ಈ ವೈವಿಧ್ಯತೆಯ ಮೇಲೆ, ಯಾವುದೇ ತೆರನ ಏಕರೂಪತೆಯನ್ನು ಹೇರುವ ಪ್ರಯತ್ನ ಒಂದು ಸಾಮಾಜಿಕ ಅಂತಃಸ್ಫೋಟಕ್ಕೆ ದಾರಿ ಮಾಡಿಕೊಡುತ್ತದಷ್ಟೇ. ಆರೆಸ್ಸೆಸ್ ಮತ್ತು ಅದರ ರಾಜಕೀಯ ಅಂಗವಾದ ಬಿಜೆಪಿಯು ಸರಕಾರವನ್ನು ಮತ್ತು ಪ್ರಭುತ್ವವನ್ನು ಬಳಸಿಕೊಂಡು ಹೇರಬಯಸುವ ಇಂತಹ ಒಂದು ಧಾರ್ಮಿಕ ಏಕರೂಪತೆ, ಅಗತ್ಯವಾಗಿಯೇ ಪ್ರಜಾಪ್ರಭುತ್ವ, ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ಹೊರಗೆಸೆದೇ ಬರಲು ಸಾಧ್ಯ. ಇದು ಒಂದು ಸರ್ವಾಧಿಕಾರಶಾಹಿ/ನಿರಂಕುಶಾಧಿಕಾರದ ಅಡಿಯಲ್ಲಿ, ಅದು ತನ್ನ 'ಆಂತರಿಕ ಶತ್ರುಗಳು' ಎಂದು ನಿರೂಪಿಸುವವರ ವಿರುದ್ಧ ಫ್ಯಾಸಿಸ್ಟ್ ತೆರನ ವಿಧಾನಗಳನ್ನು ಬಳಸಿಕೊಂಡು ಬರುತ್ತದೆ.

ಇಂತಹ ಒಂದು 'ಹೊಸ ಭಾರತ'ದ ಸ್ಥಾಪನೆ ಮೋದಿ ಸರಕಾರದ ಉತ್ಪನ್ನವೇನೂ ಅಲ್ಲ, ಅದಕ್ಕೆ ಸುಮಾರು ಒಂದು ಶತಮಾನದ ಚರಿತ್ರೆಯಿದೆ–1925ರಲ್ಲಿ ಆರೆಸ್ಸೆಸ್‌ನ ಸ್ಥಾಪನೆಯಿಂದ ಆರಂಭಿಸಿ, ಹಿಂದುತ್ವದ ಬಗ್ಗೆ ಸಾವರ್ಕರ್ ಸಿದ್ಧಾಂತಗಳು ಮತ್ತು 1939ರಲ್ಲಿ ಗೋಲ್ವಾಲ್ಕರ್‌ರವರ ಒಂದು ಫ್ಯಾಸಿಸ್ಟ್ ತೆರನ 'ಹಿಂದೂರಾಷ್ಟ್ರ'ವನ್ನು ಸಾಧಿಸುವ ಸೈದ್ಧಾಂತಿಕ ಹಾಗೂ ಸಂಘಟನಾ ರಚನೆಯ ವರೆಗಿನ ಚರಿತ್ರೆ.

ಭಾರತೀಯ ಜನತೆ ಈ ಕಣ್ಣೋಟವನ್ನು ಮತ್ತೆ–ಮತ್ತೆ ತಿರಸ್ಕರಿಸಿದ್ದಾರೆ, ಸ್ವಾತಂತ್ರ್ಯ ಆಂದೋಲನ ಇದನ್ನು ಸ್ವತಂತ್ರ ಭಾರತ ಒಂದು ಜಾತ್ಯತೀತ ಪ್ರಜಾಸತ್ತಾತ್ಮಕ ಗಣತಂತ್ರ ಎಂದು ಸಾರುವ ಮೂಲಕ ದೃಢವಾಗಿ ತಿರಸ್ಕರಿಸಿದೆ. ಇದು 1947ರಲ್ಲಿ ದೇಶದ ವಿಭಜನೆ ಮತ್ತು ಪಾಕಿಸ್ತಾನದ ರಚನೆಯೊಂದಿಗೆ ಈಡೇರಿದ ಇಸ್ಲಾಮೀ ಗಣತಂತ್ರದ ಕಣ್ಣೋಟಕ್ಕಿಂತಲೂ ಸಂಪೂರ್ಣ ಭಿನ್ನವಾಗಿತ್ತು. ಆದರೂ ಭಾರತೀಯ ಗಣತಂತ್ರದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪದ ಬದಲು ಆರೆಸ್ಸೆಸ್ ಕಣ್ಣೋಟವನ್ನು ಸ್ಥಾಪಿಸುವ ಪ್ರಯತ್ನ ಈ ಎಲ್ಲ ದಶಕಗಳಲ್ಲೂ ಮುಂದುವರೆದು ಈಗಿನ ಸ್ಥಿತಿಯನ್ನು ತಲುಪಿದೆ.

ಭಾರತೀಯ ಸಂವಿಧಾನದ ಮೇಲೆ ಪ್ರಹಾರಗಳು

ಈ 'ಹೊಸ ಭಾರತ'ಕ್ಕೆ ಮೊದಲು ಮತ್ತು ಅತ್ಯಂತ ಮುಖ್ಯವಾಗಿ ಬೇಕಾಗಿರುವುದು

ಮೋದಿ ಮತ್ತು ಬಿಜೆಪಿ/ಆರೆಸ್ಸೆಸ್‌ನ 'ಹೊಸ ಭಾರತ'ಕ್ಕೆ ಮೊದಲು ಮತ್ತು ಅತ್ಯಂತ ಮುಖ್ಯವಾಗಿ ಬೇಕಾಗಿರುವುದು ಭಾರತೀಯ ಸಂವಿಧಾನದಲ್ಲಿ ನಿರೂಪಿಸಿದ ಮತ್ತು ಮೂರ್ತಗೊಂಡಿರುವ ಹಳೇ ಭಾರತದ ನಾಶ. ಈ ಬಿಜೆಪಿ ಸರಕಾರದ ಕಳೆದ ಆರು ವರ್ಷಗಳಲ್ಲಿ ನಮ್ಮ ಸಂವಿಧಾನದ ಪ್ರತಿಯೊಂದು ಬುನಾದಿ ಸ್ಥಂಭಗಳನ್ನು–ಜಾತ್ಯತೀತ ಪ್ರಜಾಪ್ರಭುತ್ವ, ಒಕ್ಕೂಟತತ್ವ, ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಸ್ವಾವಲಂಬನೆಯನ್ನು– ಶಿಥಿಲಗೊಳಿಸಿ ಸಂವಿಧಾನದ ಮೇಲೆ ಈ ಪ್ರಹಾರ ತೀವ್ರಗೊಂಡಿರುವುದನ್ನು ನೋಡಿದ್ದೇವೆ, ಕಳೆದ ಆರು ವರ್ಷಗಳಲ್ಲಿ ಭಾರತದ ಆರ್ಥಿಕ ಸ್ವಾವಲಂಬನೆಯನ್ನು ಮತ್ತು ಬುನಾದಿಗಳನ್ನು ಕೂಡ ಶಿಥಿಲಗೊಳಿಸಿದ್ದನ್ನು ಕೂಡ ನೋಡಿದ್ದೇವೆ.
ಈ 'ಹೊಸ ಭಾರತ'ದ ಈ ಅಪಾ'ಯಗಳನ್ನು ಪ್ರತಿರೋಧಿಸಬೇಕಾಗಿದೆ, ಸೋಲಿಸಬೇಕಾಗಿದೆ. ಇದು ಈ ಸ್ವಾತಂತ್ರ್ಯ ದಿನದಂದು ಭಾರತೀಯ ಜನತೆ ಕೈಗೊಳ್ಳುವ ಯಾವುದೇ ಪ್ರತಿಜ್ಞೆಯ ಅರ್ಥ.

ಭಾರತೀಯ ಸಂವಿಧಾನದಲ್ಲಿ ನಿರೂಪಿಸಿದ ಮತ್ತು ಮೂರ್ತಗೊಂಡಿರುವ ಹಳೇ ಭಾರತದ ನಾಶ. ಮೋದಿ ಪ್ರಧಾನ ಮಂತ್ರಿಯಾಗಿರುವ ಈ ಬಿಜೆಪಿ ಸರಕಾರದ ಕಳೆದ ಆರು ವರ್ಷಗಳಲ್ಲಿ ನಮ್ಮ ಸಂವಿಧಾನದ ಪ್ರತಿಯೊಂದು ಬುನಾದಿ ಸ್ಥಂಭಗಳನ್ನು–ಜಾತ್ಯತೀತ ಪ್ರಜಾಪ್ರಭುತ್ವ, ಒಕ್ಕೂಟತತ್ವ, ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಸ್ವಾವಲಂಬನೆಯನ್ನು–ಶಿಥಿಲಗೊಳಿಸಿ ಸಂವಿಧಾನದ ಮೇಲೆ ಈ ಪ್ರಹಾರ ತೀವ್ರಗೊಂಡಿರುವುದನ್ನು ನೋಡಿದ್ದೇವೆ.

ಸಂವಿಧಾನದ ಮೇಲೆ ಈ ಪ್ರಹಾರದೊಂದಿಗೆ ಅಗತ್ಯವಾಗಿಯೇ ಎಲ್ಲ ಸಂವಿಧಾನಿಕ ಸಂಸ್ಥೆಗಳನ್ನು, ಪ್ರಾಧಿಕಾರಗಳನ್ನು ಶಿಥಿಲಗೊಳಿಸಲಾಗಿದೆ, ಅವನ್ನು ನಿಷ್ಪ್ರಯೋಜಕಗೊಳಿಸಲಾಗಿದೆ. ಇವು ಸಂವಿಧಾನದ ಕಾರ್ಯನಿರ್ವಹಣೆ ಮತ್ತು ಜನಗಳಿಗೆ ಸಂವಿಧಾನಿಕ ಖಾತ್ರಿಗಳನ್ನು ಕಾಯ್ದುಕೊಳ್ಳುವುದಕ್ಕಾಗಿ ರೂಪಿಸಿದ್ದ ತಡೆ ಸಾಧನಗಳು. ನಮ್ಮ ಗಣತಂತ್ರದ ಮೂರು ಅಂಗಗಳನ್ನು ಸಂವಿಧಾನ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗ ಎಂದು ನಿರೂಪಿಸಿದೆ. ಇವುಗಳಲ್ಲಿ ಪ್ರತಿಯೊಂದೂ ತಮ್ಮ ಕರ್ತವ್ಯಗಳನ್ನು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ಪ್ರತ್ಯೇಕವಾಗಿವೆ, ಆದರೆ ಪರಸ್ಪರ ಪೂರಕವಾಗಿವೆ.

ಶಾಸಕಾಂಗ

ಶಾಸಕಾಂಗ, ಅಂದರೆ ಸಂಸತ್ತನ್ನು ತೀವ್ರವಾಗಿ ಶಿಥಿಲಗೊಳಿಸಿ, ಅದನ್ನು 'ಬಹುಮತದ ದಬ್ಬಾಳಿಕೆ'ಯ ಮಟ್ಟಕ್ಕೆ ಇಳಿಸಲಾಗಿದೆ. ಸಂಸದೀಯ ವಿಧಿ–ವಿಧಾನಗಳು, ಸಮಿತಿಗಳ ನಿರ್ವಹಣೆಯ ವಿಧಾನಗಳು ಮತ್ತು ಕಲಾಪಗಳು ಎಲ್ಲವನ್ನೂ ಶಿಥಿಲಗೊಳಿಸಲಾಗಿದೆ.

ಜನತೆಯ ಸಾರ್ವಭೌಮತ್ವವನ್ನು ಜನತೆಗೆ ಜವಾಬುದಾರರಾದ ಶಾಸಕರು ಚಲಾಯಿಸುತ್ತಾರೆ ಮತ್ತು ಸರಕಾರ ಈ ಶಾಸಕಾಂಗಕ್ಕೆ ಜವಾಬುದಾರವಾಗಿರುತ್ತದೆ ಎಂಬುದು ಭಾರತೀಯ ಸಂವಿಧಾನದ ಕೇಂದ್ರ ಅಂಶ, 'ನಾವು, ಜನತೆ' ನಮ್ಮ ಸಾರ್ವಭೌಮತ್ವವನ್ನು ಹೀಗೆ ಚಲಾಯಿಸುತ್ತೇವೆ. ಇದನ್ನು ಈಗ ಶಿಥಿಲಗೊಳಿಸಲಾಗುತ್ತಿದೆ ಎಂಬರ್ಥದಲ್ಲಿ ಇದು ಅಪಾಯಕಾರಿ. ಸಂಸತ್ತು ಕ್ರಿಯಾಹೀನವಾದರೆ, ಜನತೆಗೆ ಉತ್ತರದಾಯಿಯಾಗುವುದನ್ನು ಕೈಬಿಡಲಾಗುತ್ತದೆ ಮತ್ತು ಸರಕಾರ ಶಾಸಕಾಂಗಕ್ಕೆ ಉತ್ತರದಾಯಿಯಾಗದೆ ತಪ್ಪಿಸಿಕೊಳ್ಳುತ್ತದೆ.

ನ್ಯಾಯಾಂಗ


ಒಂದು ಸ್ವತಂತ್ರ ನ್ಯಾಯಾಂಗವನ್ನು ಸ್ಥಾಪಿಸಿರುವುದು ಕಾರ್ಯಾಂಗದ ಕ್ರಿಯೆಗಳ ಮೂಲಕ ಸಂವಿಧಾನಿಕ ಅಂಶಗಳ ಉಲ್ಲಂಘನೆಯಾಗುವುದಿಲ್ಲ ಎಂದು ಖಾತ್ರಿಪಡಿಸಲು ಮತ್ತು ಸಂವಿಧಾನ ಜನತೆಗೆ ನೀಡಿರುವ ಮೂಲಭೂತ ಹಕ್ಕುಗಳು ಮತ್ತು ಖಾತ್ರಿಗಳನ್ನು ಎತ್ತಿ ಹಿಡಿಯಲು. ಕಳೆದ ಆರು ವರ್ಷಗಳಲ್ಲಿ ಆತಂಕ ಉಂಟುಮಾಡುವ ರೀತಿಯಲ್ಲಿ ಗಮನಕ್ಕೆ ಬಂದಿರುವಂತೆ, ನ್ಯಾಯಾಂಗದ ನಿಷ್ಪಕ್ಷಪಾತತೆ ಮತ್ತು ಸ್ವಾತಂತ್ರ್ಯಕ್ಕೆ ಧಕ್ಕೆಯಾದರೆ, ನ್ಯಾಯಾಂಗದ ಮೇಲ್ವಿಚಾರಣೆ, ಅದರ ಜತೆಗೆ ಜನತೆಯ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳ ರಕ್ಷಣೆಯೂ ಅಸ್ತಿತ್ವವನ್ನು ಕಳಕೊಳ್ಳುತ್ತವೆ.

ಚುನಾವಣಾ ಆಯೋಗ


ಭಾರತದ ಚುನಾವಣಾ ಅಯೋಗದ ಸ್ವಾತಂತ್ರ್ಯ ಮತ್ತು ನಿಷ್ಪಕ್ಷಪಾತತೆ ನಮ್ಮ ಪ್ರಜಾಪ್ರಭುತ್ವದ ಆರೋಗ್ಯವನ್ನು ಕಾಪಾಡುವ ಮೂಲಾಧಾರ. ಇದನ್ನು ಅದು ಎಲ್ಲ ಸ್ಪರ್ಧಿಗಳಿಗೆ ಸಮಾನ ಅವಕಾಶಗಳನ್ನು ಒದಗಿಸು ಒಂದು ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳನ್ನು ನಡೆಸುವ ಮೂಲಕ ಮಾಡುತ್ತದೆ. ಇದಕ್ಕೆ ಧಕ್ಕೆಯಾದರೆ, ಆಗ ಸರಕಾರಗಳು ಜನತೆಯ ತೀರ್ಪು ಅಥವ ಜನಾದೇಶವಾಗಿ ಉಳಿಯುವುದಿಲ್ಲ.

ಸಿಬಿಐ, ಜಾರಿ ನಿರ್ದೇಶನಾಲಯ, ವಿಚಕ್ಷಣಾ ಆಯೋಗ ಮುಂತಾದ ಸಂವಿಧಾನಿಕ ಪ್ರಾಧಿಕಾರಗಳನ್ನು ರೂಪಿಸಿರುವುದು ಕ್ರಿಮಿನಲ್ ಮತ್ತು ಸಿವಿಲ್ ಅಪರಾಧಗಳ ಸರಿಯಾದ ತನಿಖೆಯಾಗಬೇಕು ಮತ್ತು ತಪ್ಪಿತಸ್ಥರನ್ನು ಸಂವಿಧಾನ ಸ್ಥಾಪಿಸಿರುವ ನಾಡಿನ ಕಾನೂನಿನ ಅಡಿಯಲ್ಲಿ ಶಿಕ್ಷಿಸಬೇಕು ಎಂದು. ಇವುಗಳಿಗೆ ಧಕ್ಕೆಯಾದರೆ, ಇವು ಸರಕಾರದ ರಾಜಕೀಯ ಅಂಗಗಳಂತೆ ಕೆಲಸ ಮಾಡಲಾರಂಭಿಸಿದರೆ, ಆಗ ಆಳುವ ಪಕ್ಷ ಮತ್ತು ಅದರ ಸದಸ್ಯರ ಎಲ್ಲ ಅಪರಾಧಗಳು ಮತ್ತು ಭ್ರಷ್ಟಾಚಾರಗಳು ರಕ್ಷಣೆ ಪಡೆಯುತ್ತವೆ, ಅವುಗಳ ವಿರುದ್ಧ ಯಾವ ಕ್ರಮವೂ ಇರುವುದಿಲ್ಲ, ಅದೇ ವೇಳೆಯಲ್ಲಿ ವಿರೋಧಿಗಳಿಗೆ ಕಿರುಕುಳ ಕೊಡಲಾಗುತ್ತದೆ, ಅವರನ್ನು ಬೆದರಿಸಲಾಗುತ್ತದೆ ಮತ್ತು ಅವರ ಬಾಯಿ ಮುಚ್ಚಿಸಲಾಗುತ್ತದೆ.

ಸಂವಿಧಾನ ಮತ್ತು ಅದರ ಸಂಸ್ಥೆಗಳ ಇಂತಹ ಒಂದು ಸರ್ವಾಂಗೀಣ ಸವೆತ ವ್ಯಾಪಕವಾದ ಭ್ರಷ್ಟಾಚಾರ ಮತ್ತು 'ಬಂಟ ಬಂಡವಾಳಶಾಹಿ'(ಕ್ರೋನಿ ಕ್ಯಾಪಿಟಲಿಸಂ)ಗೆ ದಾರಿ ಮಾಡಿಕೊಡುತ್ತದೆ. ಇದು ಆಳುವ ಪಕ್ಷಕ್ಕೆ ಬೃಹತ್ ಪ್ರಮಾಣದಲ್ಲಿ ಹಣಬಲದ ಶೇಖರಣೆಯ ದಾರಿಯಾಗುತ್ತದೆ. ಇದು ಒಂದೇ ಹೊಡೆತದಲ್ಲಿ ಪ್ರಜಾಪ್ರಭುತ್ವದ ಗುಣಮಟ್ಟವನ್ನು ಶಿಥಿಲಗೊಳಿಸುತ್ತದೆ. ಇದು ಯಾವುದೇ ಚುನವಣೆಯಲ್ಲಿ ಒಂದು ಸರಕಾರಕ್ಕೆ ಸಿಕ್ಕ ಜನಾದೇಶವನ್ನು ಕುದುರೆ ವ್ಯಾಪಾರದ ಮೂಲಕ ಉಲ್ಲಂಘಿಸುವ ಪರಿಸ್ಥಿತಿಗಳನ್ನು ನಿರ್ಮಿಸುತ್ತದೆ. ಈ ಮೂಲಕ ಈಗ ಕೇಳಬರುವ 'ಬಿಜೆಪಿ ಚುನಾವಣೆ ಸೋಲಬಹುದು, ಆದರೂ ಸರಕಾರ ರಚನೆ ಅದರದ್ದೇ' ಎಂಬ ರಾಗಾಲಾಪನೆ ➚



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ



ವ್ಯಂಗ್ಯಚಿತ್ರ: ಶೇಖರ್ ಗುರೇರ

ನಡೆಯುವಂತಾಗುತ್ತದೆ.

ವಿವೇಚನೆಯ ಮೇಲೆ ಪ್ರಹಾರ

ಇಂತಹ 'ಹೊಸ ಭಾರತ'ದ ಒಂದು ಕಥನ ಯಶಸ್ವಿಯಾಗಬೇಕಾದರೆ ಭಾರತದ ಚರಿತ್ರೆಯನ್ನು, ಅದು ಈ ಕಥನದ ಸೈದ್ಧಾಂತಿಕ ಹೂರಣವನ್ನು ಪೋಷಿಸುವಂತೆ ಮಾಡಲು ಹೊಸದಾಗಿ ಬರೆಯಬೇಕಾಗುತ್ತದೆ. ಇದಕ್ಕನುಗುಣವಾಗಿ ಭಾರತೀಯ ಶಿಕ್ಷಣ ವ್ಯವಸ್ಥೆಯನ್ನು, ಅದು ವಿಚಾರ ಮತ್ತು ಆಚರಣೆಯಲ್ಲಿ ವಿವೇಚನಾಶೂನ್ಯತೆಯನ್ನು ಪ್ರೋತ್ಸಾಹಿಸುವಂತೆ, ವೈಜ್ಞಾನಿಕ ಮನೋಭಾವವನ್ನು ಪೋಷಿಸುವ ಬದಲು ಕಂದಾಚಾರ/ ಪುರಾಣ/ ಕುರುಡ ನಂಬಿಕೆಯನ್ನು ಪ್ರೋತ್ಸಾಹಿಸುವಂತೆ ಪುನರ್ರೂಪಿಸಬೇಕಾಗುತ್ತದೆ. ಸಾಂಸ್ಕೃತಿಕ ರಂಗದಲ್ಲಿ ಸಂಸ್ಥೆಗಳು ಮತ್ತು ಅಕಾಡೆಮಿಗಳ ಸ್ವರೂಪವನ್ನು, ಅವು ಭಾರತೀಯ ಸಂಸ್ಕೃತಿಯ ಸಮ್ಮಿಶ್ರ ವಿಕಾಸವನ್ನು ಮರೆಮಾಚುವಂತೆ ಬದಲಿಸಬೇಕು, ಇದಕ್ಕಾಗಿ ಒಂದು ಏಕರೂಪತೆಯನ್ನು ಮತ್ತು ಏಕ–ಸಂಸ್ಕೃತಿ ಕಥನವನ್ನು ಹೇರಲಾಗುತ್ತದೆ. ಇದು ಭಾರತದ ವೈವಿಧ್ಯಮಯ ಮತ್ತು ಬಹುತ್ವದ ಸ್ವರೂಪದಿಂದ ವಿಕಾಸಗೊಂಡ ಸಂಸ್ಕೃತಿಗೆ ಸಂಪೂರ್ಣ ವಿರುದ್ಧವಾಗಿದೆ. ಇತಿಹಾಸದ ಪುನರ್ಲೇಖನ ಮತ್ತು ಪುನರ್ರಚನೆ ಮಾಡಬೇಕಾಗುತ್ತದೆ. ಭಾರತದ ಸಮ್ಮಿಶ್ರ ಇತಿಹಾಸದ ಅಧ್ಯಯನದ ಸ್ಥಾನದಲ್ಲಿ ಭಾರತೀಯ ಪೌರಾಣಿಕ ಗ್ರಂಥಗಳು ಬರುತ್ತವೆ. ಪುರಾತತ್ವಶಾಸ್ತ್ರ ನಮ್ಮ ಇತಿಹಾಸದ ಒಂದು ವೈಜ್ಞಾನಿಕ ಅಧ್ಯಯನವನ್ನು ನಡೆಸುವ ಬದಲಾಗಿ ಹಿಂದುತ್ವದ ಅವೈಜ್ಞಾನಿಕ ಹೇಳಿಕೆಗಳನ್ನು, ಚರಿತ್ರೆಯನ್ನು ಸಾಬೀತು ಮಾಡಲು ಸಾಕ್ಷ್ಯಗಳನ್ನು ಉತ್ಪಾದಿಸಬೇಕಾಗುತ್ತದೆ.

ಹೊಸ ಸಾಂಕೇತಿಕತೆ

ಇಂತಹ 'ಹೊಸ ಭಾರತ'ದ ಯಶಸ್ಸನ್ನು ನಮ್ಮ ಸಮಾಜದಲ್ಲಿ ಒಂದು ಹೊಸ ಸಾಂಕೇತಿಕತೆಯನ್ನು ನಿರ್ಮಿಸುವ ಮೂಲಕ ಮಾತ್ರವೇ ಕಾಯ್ದುಕೊಳ್ಳಲು ಸಾಧ್ಯ. ಇದಕ್ಕೆ ನೆಹರೂರವರ 'ಆಧುನಿಕ ಭಾರತದ ಮಂದಿರ'ಗಳಿಗೆ ಪ್ರತಿಯಾಗಿ ಮಹಾಸೋಂಕಿನ ಸಮಯದಲ್ಲಿ ಭಾರೀ ವೆಚ್ಚದಲ್ಲಿ, ಹಿಟ್ಲರನ ಕುಖ್ಯಾತ ಬರ್ಲಿನ್ ಗುಮ್ಮಟವನ್ನು ಹೋಲುವಂತಹ ಸೆಂಟ್ರಲ್ ವಿಸ್ತಾ, ಭಾರೀ ಪ್ರತಿಮೆಗಳು, ಬುಲೆಟ್ ರೈಲುಗಳು ಮತ್ತು ಇಂತಹುದೇ ಭ್ರಾಮಕ ಉತ್ಪನ್ನಗಳು ಬರುತ್ತವೆ.



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಾರ್ತಾಭಾರತಿ

ಅಲ್ಲದೆ, ಈ 'ಹೊಸ ಭಾರತ'ದ ಕಥನ ಜನಗಳ ಮೇಲೆ ಪ್ರಜ್ಞೆಯ ಮೇಲೆ ಸುಳ್ಳು ಸುದ್ದಿಗಳನ್ನು ಸುರಿಯುವ, ಹುಸಿ ಕಥನಗಳನ್ನು ಹೆಣೆಯುವ ಮತ್ತು ಭಾರತೀಯ ಜನತೆಯನ್ನು ಪೀಡಿಸುತ್ತಿರುವ ನಿಜವಾದ ಸಮಸ್ಯೆಗಳು ಮತ್ತು ಅದು ಉಂಟುಮಾಡುವ ಸಂಕಟಗಳನ್ನು ಹಿನ್ನೆಲೆಗೆ ತಳ್ಳುವಲ್ಲಿ ಶಾಮೀಲಾಗುವ ಒಂದು ಮಾಧ್ಯಮವಿಲ್ಲದೆ ಬಹಳ ದಿನ ಉಳಿಯಲಾರದು.

ದಲಿತರು, ಆದಿವಾಸಿಗಳು, ಮಹಿಳೆಯರು ಮತ್ತು ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಪ್ರಚಾರಗಳು ಮತ್ತು ಹಿಂಸಾಚಾರದ ಮೂಲಕ ಸಾಮಾಜಿಕ ಉದ್ವಿಗ್ನತೆಗಳನ್ನು ಹರಡಿಸುವುದು ಈ 'ಹೊಸ ಭಾರತ'ದ ಭಾಗವಾಗಿ ಬರಬೇಕು, ಇಲ್ಲವಾದರೆ, ಕೋಮುವಾದಿ ಹಿಂದುತ್ವ ವೋಟ್ ಬ್ಯಾಂಕನ್ನು ತನ್ನ ಜೀವನಾಡಿಯಾಗಿ ಕ್ರೋಡೀಕರಿಸಲು ಅದಕ್ಕೆ ಸಾಧ್ಯವಾಗದು.

ಆಗಸ್ಟ್ 5ರ ಅಯೋಧ್ಯೆ ಭಾಷಣ

ಅಯೋಧ್ಯೆಯಲ್ಲಿ ಮಂದಿರ ನಿರ್ಮಾಣದ ಕೆಲಸವನ್ನು ಆರಂಭಿಸಿದ ಮೋದಿ ಭಾಷಣದಲ್ಲಿ, ಒಂದರ್ಥದಲ್ಲಿ, 'ಹೊಸ ಭಾರತ'ದ ಈ ಕಣ್ಣೋಟ ಮೂರ್ತೀಭವಿಸಿತ್ತು.

ಸುಪ್ರಿಂ ಕೋರ್ಟ್ ಅಯೋಧ್ಯಾ ವಿವಾದದ ಮೇಲೆ ಒಂದು ತೀರ್ಪು ನೀಡಿತು, ಆದರೆ ನ್ಯಾಯವನ್ನಲ್ಲ. ಅದು ಬಾಬ್ರಿ ಮಸೀದಿ ಧ್ವಂಸ ಒಂದು ಕಾನೂನಿನ ಕ್ರಿಮಿನಲ್ ಉಲ್ಲಂಘನೆ ಎಂದು ಹೇಳಿತು, ಅದರಲ್ಲಿ ತೊಡಗಿದ್ದವರನ್ನು ತ್ವರಿತವಾಗಿ ಶಿಕ್ಷಿಸಬೇಕು ಎಂದಿತು. ವಿವಾದಿತ ಸ್ಥಳದಲ್ಲಿ ಮಂದಿರ ನಿರ್ಮಾಣದ ಕೆಲಸವನ್ನು ಮಸೀದಿಯ ಧ್ವಂಸದಲ್ಲಿ ತೊಡಗಿದ್ದವರಿಗೇ ಒಪ್ಪಿಸಿತು. ಆದರೆ ಈ ನಿರ್ಮಾಣವನ್ನು ಒಂದು ಟ್ರಸ್ಟ್ ಕೈಗೊಳ್ಳಬೇಕಿತ್ತು.

ಪ್ರಧಾನ ಮಂತ್ರಿಗಳು ಮತ್ತು ಸರಕಾರ ಈ ಕೆಲಸವನ್ನು ಭಂಡತನದಿಂದ ತಾವೇ ವಹಿಸಿಕೊಂಡರು, ಮಂದಿರ ನಿರ್ಮಾಣದ ಆರಂಭವನ್ನು ಒಂದು ಅಧಿಕೃತ ಸರಕಾರೀ ಸಮಾರಂಭವಾಗಿ ಪರಿವರ್ತಿಸಿದರು. ಜಾತ್ಯತೀತ ಪ್ರಜಾಸತ್ತಾತ್ಮಕ ಸಂವಿಧಾನದ ಅಡಿಯಲ್ಲಿ ಪ್ರತಿಜ್ಞೆ ಕೈಗೊಂಡು ಅಧಿಕಾರದಲ್ಲಿರುವ ಪ್ರಧಾನ ಮಂತ್ರಿ ಅದನ್ನೇ ಉಲ್ಲಂಘಿಸಲು ಮುಂದಾದರು. . ಪ್ರತಿಯೊಬ್ಬ ನಾಗರಿಕರಿಗೆ ಸಂವಿಧಾನ ಧರ್ಮದ ಆಯ್ಕೆಯ ಖಾತ್ರಿಯನ್ನು ಕೊಟ್ಟಿದೆ. ಸರಕಾರ ಅದನ್ನು ರಕ್ಷಿಸಬೇಕು ಮತ್ತು ಖಾತ್ರಿಪಡಿಸಬೇಕು. ಸರಕಾರಕ್ಕೆ ತನ್ನದೇ ಆದ ಧರ್ಮ ಎಂಬುದಿಲ್ಲ.

ಈ ಅನುಲ್ಲಂಘನೀಯ ಸಂವಿಧಾನಿಕ ಪ್ರತಿಪಾದನೆಯನ್ನು ಸ್ವತಃ ಪ್ರಧಾನ ಮಂತ್ರಿಗಳೇ ಗಾಳಿಗೆ ತೂರಿದರು. ಈ ಬಹಿರಂಗ ಉಲ್ಲಂಘನೆ 'ಹೊಸ ಭಾರತ'ವನ್ನು ಆರೆಸ್ಸೆಸ್‌ನ ರಾಜಕೀಯ ಯೋಜನೆಯ ಲಾಂಛನವಾಗಿಸುವ ಸಂಕೇತವಾಗಿದೆ.

ಅವರ ಭಾಷಣದ ಅತ್ಯಂತ ಕೆಟ್ಟ ಅಂಶವೆಂದರೆ ಈ ಮಂದಿರ ನಿರ್ಮಾಣದ ಆಂದೋಲನವನ್ನು ರಾಷ್ಟ್ರೀಯ ಆಂದೋಲನದೊಂದಿಗೆ ಹೋಲಿಸಿದ್ದು. "ನಮ್ಮ ದೇಶದಲ್ಲಿ ಸ್ವಾತಂತ್ರ್ಯಕ್ಕಾಗಿ ನಿಸ್ವಾರ್ಥ ತ್ಯಾಗವಿಲ್ಲದ ಸ್ಥಳವೇ ಇಲ್ಲ. ಆಗಸ್ಟ್ 15 ಲಕ್ಷಾಂತರ ಜನಗಳ ತ್ಯಾಗಗಳು ಮತ್ತು ಸ್ವಾತಂತ್ರ್ಯದ ಆಳವಾದ ಹಂಬಲದ ಸಾಕಾರ.

ಅದೇ ರೀತಿಯಲ್ಲಿ, ರಾಮಮಂದಿರದ ನಿರ್ಮಾಣಕ್ಕಾಗಿ ಹಲವು ಪೀಳಿಗೆಗಳವರು ಹಲವು ಶತಮಾನಗಳ ಕಾಲ ನಿಸ್ವಾರ್ಥ ತ್ಯಾಗಗಳನ್ನು ಮಾಡಿದ್ದಾರೆ" ಎಂದು ಅವರು ಹೇಳಿದರು.

ಸ್ವಾತಂತ್ರ್ಯ ಹೋರಾಟ ಎಲ್ಲರನ್ನೂ ಒಳಗೊಳ್ಳುವ ಒಂದು ಭಾರತದ ಕಣ್ಣೋಟವನ್ನು ಹೊಂದಿತ್ತು, ತದ್ವಿರುದ್ಧವಾಗಿ, ಆರೆಸ್ಸೆಸ್‌ನದ್ದು ಹಲವರನ್ನು ಹೊರಗಿಡುವ ಒಂದು ಭಾರತದ ಕಣ್ಣೋಟ. ಈ ಎಲ್ಲರನ್ನೂ ಒಳಗೊಳ್ಳುವ ಕಣ್ಣೋಟ ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಮಹಾನ್ ಪ್ರಮಾಣದಲ್ಲಿ ಸಾಮೂಹಿಕ ಅಣಿನೆರಿಕೆಗೆ ಸ್ಫೂರ್ತಿ ನೀಡಿತು. ಅದರ ಅಂತಿಮ ಫಲಶ್ರುತಿ ಆಗಸ್ಟ್ 15, 1947ರ ಸ್ವಾತಂತ್ರ್ಯ. ಹಲವರನ್ನು ಹೊರಗಿಡುವ 'ಹೊಸ ಭಾರತ'ದ ಪ್ರಸಕ್ತ ಕಥನ ಭಾರತದ ಸ್ವಾತಂತ್ರ್ಯ ಹೋರಾಟ ಪ್ರತಿನಿಧಿಸಿದ ಪ್ರತಿಯೊಂದು ತತ್ವದ ನೇರ ನಿರಾಕರಣೆಯಾಗಿದೆ.

ಮಹತ್ವದ ಸಂಗತಿಯೆಂದರೆ, ಆರೆಸ್ಸೆಸ್ ಎಂದೂ ಭಾರತದ ಸ್ವಾತಂತ್ರ್ಯ ಹೋರಾಟದ ಭಾಗವಾಗಿರಲಿಲ್ಲ. ಆರೆಸ್ಸೆಸ್‌ನ ಬಗ್ಗೆ ಸಹಾನುಭೂತಿಪರ ವ್ಯಾಖ್ಯಾನಗಳು (ವಾಲ್ಟರ್ ಕೆ ಆಂಡರ್ಸನ್ ಮತ್ತು ಶ್ರೀಧರ ದಾಮ್ಲೆಯವರ 'ದಿ ಬ್ರದರ್‌ಹುಡ್ ಇನ್ ಸ್ಯಾಫ್ರನ್' ಇವುಗಳಲ್ಲೊಂದು) ಕೂಡ ಸ್ವಾತಂತ್ರ್ಯ ಆಂದೋಲನದಲ್ಲಿ ಆರೆಸ್ಸೆಸ್‌ನ ಸಂಪೂರ್ಣ ಗೈರು ಹಾಜರಿ ಎಂದೇ ಹೇಳಬಹುದಾದನ್ನು, ಮತ್ತು ಅದರಿಂದಾಗಿ ಅದು ಬ್ರಿಟಿಶರಿಂದ ಗಳಿಸಿದ ರಿಯಾಯ್ತಿಗಳನ್ನು ವಿವರವಾಗಿ ಕೊಟ್ಟಿವೆ. ಆರೆಸ್ಸೆಸ್‌ನ ಸಿದ್ಧಾಂತಿ, ದಿವಂಗತ ನಾನಾಜಿ ದೇಶಮುಖ್ ಕೂಡ "ಆರೆಸ್ಸೆಸ್ ಒಂದು ಸಂಘಟನೆಯಾಗಿ ವಿಮೋಚನಾ ಹೋರಾಟದಲ್ಲಿ ಪಾತ್ರ ವಹಿಸಲಿಲ್ಲ ಏಕೆ?" ಎಂಬ ಪ್ರಶ್ನೆಯನ್ನು ಎತ್ತಿದರು.

1942ರ ಕ್ವಿಟ್ ಇಂಡಿಯಾ ಆಂದೋಲನದ ವೇಳೆಯಲ್ಲಿ ಬಾಂಬೆ ಗೃಹ ಇಲಾಖೆ "ಸಂಘ ಕಟ್ಟುನಿಟ್ಟಾಗಿ ಕಾನೂನಿನ ಒಳಗೇ ತನ್ನನ್ನು ಇರಿಸಿಕೊಂಡಿತು, ನಿರ್ದಿಷ್ಟವಾಗಿ, ಆಗಸ್ಟ್ 1942ರಲ್ಲಿ ಭುಗಿಲೆದ್ದ ಗಲಭೆಗಳಲ್ಲಿ ಭಾಗವಹಿಸದೆ ದೂರವೇ ಉಳಿಯಿತು" ಎಂದು ದಾಖಲಿಸಿದೆ.

ಈ ಸತ್ಯಗಳನ್ನು ಮರೆಮಾಚಲು, ಆರೆಸೆಸ್/ಬಿಜೆಪಿ ಕಮ್ಯುನಿಸ್ಟರ ವಿರುದ್ಧ, ಅವರು 1942ರ ಕ್ವಿಟ್ ಇಂಡಿಯಾ ಚಳುವಳಿಗೆ ವಿಶ್ವಾಸಘಾತ ಮಾಡಿದರು ಎಂದು ನಿಂದಿಸುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಕ್ವಿಟ್ ಇಂಡಿಯ ಆಂದೋಲನದ 50ನೇ ವಾರ್ಷಿಕೋತ್ಸವದ ಸ್ಮರಣಾರ್ಥ, ಆಗಸ್ಟ್ 9, 1942ರಂದು ನಡೆದ ಸಂಸತ್ತಿನ ಮಧ್ಯರಾತ್ರಿಯ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತ ಆಗಿನ ರಾಷ್ಟ್ರಪತಿ ಶಂಕರ್ ದಯಾಲ್ ಶರ್ಮರವರು ಏನು ಹೇಳಿದ್ದರು ಎಂದು ನೆನಪಿಸಿಕೊಳ್ಳುವುದು ಒಳ್ಳೆಯದು. "ಕಾನ್ಪುರ, ಜಮಷೇದ್‌ಪುರ ಮತ್ತು ಅಹಮದಾಬಾದಿನ ಗಿರಣಿಗಳಲ್ಲಿ ವ್ಯಾಪಕವಾದ ಮುಷ್ಕರಗಳ ನಂತರ, ದಿಲ್ಲಿಯಿಂದ ಲಂಡನಿನಲ್ಲಿದ್ದ ಗೃಹ ಕಾರ್ಯದರ್ಶಿಗೆ ಕಳಿಸಿದ ಸಪ್ಟಂಬರ್ 5, 1942ರ ಒಂದು ಟಿಪ್ಪಣಿ ಭಾರತ ಕಮ್ಯುನಿಸ್ಟ್ ಪಕ್ಷದ ಬಗ್ಗೆ ವರದಿ ಮಾಡುತ್ತ ಅದರ ಹಲವಾರು ಸದಸ್ಯರ ವರ್ತನೆ, ಅದು ಬ್ರಿಟಿಶ್–ವಿರೋಧಿ ಕ್ರಾಂತಿಕಾರಿಗಳಿಂದ ಕೂಡಿದೆ ಎಂದು ಸದಾ ಸ್ಪಷ್ಟವಾಗಿರುವ ಸಂಗತಿಯನ್ನು ಸಾಬೀತು ಮಾಡುತ್ತದೆ ಎಂದಿತು" ಎಂದು ರಾಷ್ಟ್ರಪತಿ ಶರ್ಮ ಅವರು ಹೇಳಿದರು.

ಈ ಬಗ್ಗೆ ಬೇರೇನಾದರೂ ಹೇಳುವ ಅಗತ್ಯವಿದೆಯೇ?

ಭಾರತದ ಭವಿಷ್ಯದ ನಾಶವನ್ನು ತಡೆಯಬೇಕು

ಈ 'ಹೊಸಭಾರತ' ಭಾರತೀಯ ಇತಿಹಾಸದ ಪುನರ್ಲೇಖನ ಮಾಡುತ್ತದಷ್ಟೇ ಅಲ್ಲ, ಭಾರತೀಯ ಸಂವಿಧಾನ, ಅದರ ಸಹಯೋಗಿ ಸಂಸ್ಥೆಗಳು, ಪ್ರಾಧಿಕಾರಗಳು, ಅದು ಜನರಿಗೆ ನೀಡಿರುವ ಖಾತ್ರಿಗಳು, ಜನರ ಬದುಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ನಾಶಮಾಡುತ್ತದಷ್ಟೇ ಅಲ್ಲ, ಘರ್ಷಣೆ ಮತ್ತು ದ್ವೇಷವನ್ನು ಪ್ರೋತ್ಸಾಹಿಸಿ ಹಾಗೂ ದಲಿತರು, ಆದಿವಾಸಿಗಳು, ಮಹಿಳೆಯರು ಮತ್ತು ಧರ್ಮಿಕ ಅಲ್ಪಸಂಖ್ಯಾತರ ಮೇಲೆ ಹೆಚ್ಚೆಚ್ಚು ದಾಳಿಗಳನ್ನು ನಡೆಸಿ ಭಾರತದ ಭವಿಷ್ಯವನ್ನು ಕೂಡ ಶಿಥಿಲಗೊಳಿಸುತ್ತದೆ.

ಈ 'ಹೊಸ ಭಾರತ' ಭಾರತದ ಆರ್ಥಿಕ ಸ್ವಾವಲಂಬನೆಯನ್ನು ಮತ್ತು ಬುನಾದಿಗಳನ್ನು ಕೂಡ ಶಿಥಿಲಗೊಳಿಸುತ್ತದೆ. ಕಳೆದ ಆರು ವರ್ಷಗಳಲ್ಲಿ ಬಾರತದ ಅರ್ಥವ್ಯವಸ್ಥೆಯ ನಾಶ ಇದಕ್ಕೆ ಸಾಕ್ಷಿ. ರಾಷ್ಟ್ರೀಯ ಆಸ್ತಿಗಳ ಲೂಟಿ, ಸಾರ್ವಜನಿಕ ವಲಯದ ಸಾರಾಸಗಟು ಖಾಸಗೀಕರಣ, ಭಾರತದ ಖನಿಜ ಸಂಪತ್ತಿನ, ಭಾರತದ ಅರಣ್ಯಗಳ, ಹಸಿರು ಆವರಣದ ಲೂಟಿ, ಮತ್ತು ಕಾರ್ಮಿಕ ವರ್ಗ ಹಾಗೂ ದುಡಿಯುವ ಜನರ ಸಂವಿಧಾನಿಕ ಹಕ್ಕುಗಳ ರದ್ಧತಿಯ ಪ್ರಸಕ್ತ ಆರ್ಥಿಕ ನೀಲನಕ್ಷೆ ಭಾರತದ ಸಂಪತ್ತನ್ನು ಸಾರಾಸಗಟಾಗಿ ವಿದೇಶಿ ಮತ್ತು ದೇಶೀ ಕಾರ್ಪೊರೇಟ್‌ಗಳ ಗರಿಷ್ಟ ಲಾಭಗಳಿಗಾಗಿ ಬಿಟ್ಟುಕೊಡುವುದನ್ನು ತೋರಿಸುತ್ತದೆ. ಭಾರತದ ಕೃಷಿಯ ಕಂಪನೀಕರಣ, ಅಗತ್ಯ ಸರಕುಗಳ ಕಾಯ್ದೆಯನ್ನು, ರೈತರಿಗೆ ದೊರೆತಿರುವ ಕನಿಷ್ಟ ಬೆಂಬಲ ಬೆಲೆ, ಬೆಲೆ ಹತೋಟಿಗಳು, ಖರೀದಿ ಮುಂತಾದ ಕನಿಷ್ಟ ರಕ್ಷಣೆಗಳನ್ನೂ ರದ್ದು ಮಾಡುವ ಈಗಿನ ಸುಗ್ರೀವಾಜ್ಞೆಗಳು ಯಾವುದೇ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಸಂಪೂರ್ಣ ನಾಶಕ್ಕೆ ದಾರಿ ಮಾಡಿಕೊಡುತ್ತವೆ, ಕೃಷಿ ವ್ಯಾಪಾರೀ ಕಾರ್ಪೊರೇಟ್‌ಗಳ ಲಾಭಗಳನ್ನು ಹಿಗ್ಗಿಸಿ ಆಹಾರ ಕೊರತೆಯ ಅಪಾಯವನ್ನು ಸೃಷ್ಟಿಸುತ್ತಿವೆ. ಇದು ನಮ್ಮ ಅನ್ನದಾತರ ವಿನಾಶ.

ಈ 'ಹೊಸ ಭಾರತ', ಹೀಗೆ, ನಮ್ಮ ಸಂವಿಧಾನಿಕ ವ್ಯವಸ್ಥೆಯ ಅಸ್ತಿತ್ವಕ್ಕೇ ಬಿಕ್ಕಟ್ಟನ್ನು ತರುತ್ತದೆ. ಇದು ವಿಶಾಲ ಭಾರತೀಯ ಜನಸ್ತೋಮಗಳ ಜೀವನೋಪಾಯ, ಸ್ವಾತಂತ್ರ್ಯ, ಘನತೆ ಮತ್ತು ಸಮೃದ್ಧಿಯ ಅಸ್ತಿತ್ವವನ್ನೂ ಬಿಕ್ಕಟ್ಟಿಗೆ ಒಳಗಾಗಿಸುತ್ತದೆ, ಭಾರತೀಯ ಬಹುತ್ವ, ಅದರ ಭಾಷಾ ವೈವಿಧ್ಯತೆ ಹಾಗೂ ಒಕ್ಕೂಟ ತತ್ವದ ಅಸ್ತಿತ್ವಕ್ಕೂ ಸಂಚಕಾರ ತರುತ್ತದೆ, ಮತ್ತು ಪ್ರಜಾಪ್ರಭುತ್ವ, ಜನತೆಯ ಹಕ್ಕುಗಳು ಹಾಗೂ ವಿವೇಚನಾಶೀಲತೆ ಮತ್ತು ತರ್ಕಶೀಲತೆಗೂ ಬಿಕ್ಕಟ್ಟು ತರುತ್ತದೆ.

ಈ 'ಹೊಸ ಭಾರತ'ದ ಈ ಅಪಾಯಗಳನ್ನು ಪ್ರತಿರೋಧಿಸಬೇಕಾಗಿದೆ, ಸೋಲಿಸಬೇಕಾಗಿದೆ. ಇದು ಈ ಸ್ವಾತಂತ್ರ್ಯ ದಿನದಂದು ಭಾರತೀಯ ಜನತೆ ಕೈಗೊಳ್ಳುವ ಯಾವುದೇ ಪ್ರತಿಜ್ಞೆಯ ಅರ್ಥ.

(ಸಂಪುಟ 14, ಸಂಚಿಕೆ 34, ಆಗಸ್ಟ್ 17–23, 2020 ರಲ್ಲಿ ಜನಶಕ್ತಿಯಲ್ಲಿ ಪ್ರಕಟವಾದ ಲೇಖನ)



ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್‌ಪೋಸ್ಟ್

ಶ್ರೀಲಂಕಾ ಅಧ್ಯಕ್ಷರ ಚುನಾವಣೆ: ಪರ್ಯಾಯಕ್ಕಾಗಿ ಜನರ ಮತ

ಶ್ರೀಲಂಕಾದ ಒಂಬತ್ತನೇ ಅಧ್ಯಕ್ಷರನ್ನು ಆಯ್ಕೆ ಮಾಡುವ ಚುನಾವಣೆ ಸೆಪ್ಟೆಂಬರ್ 21ರಂದು ನಡೆಯಿತು. ಶ್ರೀಲಂಕಾದ ಜನರು ಎಡಪಂಥೀಯ ನಾಯಕನನ್ನು ಆಯ್ಕೆ ಮಾಡುವ ಮೂಲಕ ಐತಿಹಾಸಿಕ ಸಾಧನೆ ಮಾಡಿದ್ದಾರೆ. ಜನತಾ ವಿಮುಕ್ತಿ ಪೆರಮುನಾ (ಜೆವಿಪಿ) ಅಂದರೆ ಪೀಪಲ್ಸ್ ಲಿಬರೇಶನ್ ಫ್ರಂಟ್ ಜಯ ಸಾಧಿಸಿದೆ. ಇದರ ಅಧ್ಯಕ್ಷ ಅನುರ ಕುಮಾರ ದಿಸ್ಸನಾಯಕೆ ಶ್ರೀಲಂಕಾದ ಒಂಬತ್ತನೇ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಆರ್ಥಿಕ ಬಿಕ್ಕಟ್ಟಿನಲ್ಲಿ ತೇಲುತ್ತಿರುವ ಶ್ರೀಲಂಕಾಕ್ಕೆ ಇದೊಂದು ಸವಾಲಿನ ಚುನಾವಣೆಯಾಗಿತ್ತು. ವಿದೇಶಿ ವಿನಿಮಯದ ಸಗಟು ಹರಿವಿನ ನಂತರ ಇದು ಮೊದಲ ಪ್ರಮುಖ ಚುನಾವಣೆಯಾಗಿದೆ. ಸ್ವಾತಂತ್ರ್ಯದ ನಂತರ ಶ್ರೀಲಂಕಾದ 76 ವರ್ಷಗಳ ಇತಿಹಾಸದಲ್ಲಿ ಇದು ಅತ್ಯಂತ ಪ್ರಮುಖ ಚುನಾವಣೆ ಎನ್ನಲಾಗಿದೆ. ಈ ಚುನಾವಣೆಯ ಕುರಿತು ಒಂದು ವಿಶ್ಲೇಷಣೆ ಇಲ್ಲಿದೆ.

ಚತುಷ್ಕೋನ ಸ್ಪರ್ಧೆ

22 ಚುನಾವಣಾ ಜಿಲ್ಲೆಗಳಾಗಿ ವಿಂಗಡಿಸಲಾದ ಶ್ರೀಲಂಕಾದಲ್ಲಿ 1 ಕೋಟಿ 71 ಲಕ್ಷ ಮತದಾರರು ಅಧ್ಯಕ್ಷೀಯ ಚುನಾವಣೆಯಲ್ಲಿ ಮತ ಚಲಾಯಿಸಲು ಅರ್ಹರಾಗಿದ್ದಾರೆ. 2019ರ ಅಧ್ಯಕ್ಷೀಯ ಚುನಾವಣೆಯಲ್ಲಿ 35 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಪ್ರಸಕ್ತ ಚುನಾವಣೆಯಲ್ಲಿ 39 ಅಭ್ಯರ್ಥಿಗಳ ಪೈಕಿ ಒಬ್ಬರು ನಿಧನರಾಗಿದ್ದು, 38 ಅಭ್ಯರ್ಥಿಗಳು ಕಣದಲ್ಲಿದ್ದರು. 42 ವರ್ಷಗಳ ಅಧ್ಯಕ್ಷೀಯ ಚುನಾವಣೆಯ ಇತಿಹಾಸದಲ್ಲಿ ಇದು ಅತ್ಯಂತ ಪೈಪೋಟಿಯ ಚುನಾವಣೆಯಾಗಿತ್ತು. ಇದು ಮಹಿಳಾ ಅಭ್ಯರ್ಥಿಗಳಿಲ್ಲದ ಚುನಾವಣೆಯೂ ಹೌದು. ಅಭ್ಯರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿರುವುದು ಪ್ರಜಾಪ್ರಭುತ್ವದ ಬಿಕ್ಕಟ್ಟನ್ನು ಸೂಚಿಸುತ್ತದೆ ಎನ್ನಲಾಗಿತ್ತು. ಇಲ್ಲಿಯವರೆಗೆ ಶ್ರೀಲಂಕಾ ಅಧ್ಯಕ್ಷೀಯ ಚುನಾವಣೆ ದ್ವಿಮುಖ ಸ್ಪರ್ಧೆಯಾಗಿತ್ತು. ಆದರೆ ಇದೀಗ ಚತುಷ್ಕೋನ ಸ್ಪರ್ಧೆ ಎಂಬಂತೆ ರಾಜಕೀಯ ತಜ್ಞರು ಗುರುತಿಸಿದ್ದರು. ಈ ಚುನಾವಣೆ ಎಲ್ಲರ ಗಮನ ಸೆಳೆದಿತ್ತು.

ಹಂಗಾಮಿ ಅಧ್ಯಕ್ಷರಾಗಿದ್ದ ರನಿಲ್ ವಿಕ್ರಮಸಿಂಘೆ ಅವರ ಯುನೈಟೆಡ್ ನ್ಯಾಷನಲ್ ಪಾರ್ಟಿ(ಯುಎನ್‌ಪಿ)ಗೆ ಸೇರಿದ ಸಜಿತ್ ಪ್ರೇಮದಾಸ ಅವರು ಪಕ್ಷದ ನಾಯಕತ್ವಕ್ಕೆ ರಾಜೀನಾಮೆ ನೀಡಿ, ಯುನೈಟೆಡ್ ಪೀಪಲ್ ಫ್ರಂಟ್ ಹೆಸರಿನಲ್ಲಿ ಎರಡನೇ ಬಾರಿಗೆ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಅಲ್ಲದೆ, ರಾಜಪಕ್ಸೆ ಅವರ ಶ್ರೀಲಂಕಾ ಪೊದುಜನ ಪೆರಮುನಾ (Sri Lanka Podujana Peramuna) ಪಕ್ಷವು ಅಂತಿಮ ಹಂತದಲ್ಲಿ ಎರಡು ಬಾರಿ ಅಧ್ಯಕ್ಷರಾಗಿದ್ದ ರಾಜಪಕ್ಸೆ ಅವರ ಹಿರಿಯ ಪುತ್ರ ನಮಲ್ ರಾಜಪಕ್ಸೆ ಅವರನ್ನು ತನ್ನ ಅಭ್ಯರ್ಥಿಯನ್ನಾಗಿ ಘೋಷಿಸಿತು. ಜನತಾ ವಿಮುಕ್ತಿ ಪೆರಮುನಾ (ಜೆವಿಪಿ) ನಾಯಕ ಅನುರ ಕುಮಾರ ಡಿಸ್ಸನಾಯಕೆ ಅವರು ನ್ಯಾಷನಲ್ ಪೀಪಲ್ಸ್ ಪವರ್ (ಎನ್‌ಪಿಪಿ) ಎಂಬ ಮೈತ್ರಿಕೂಟವನ್ನು ರಚಿಸಿದ್ದು, ಮೂವರಿಗೂ ಪ್ರಮುಖ ಸವಾಲಾಗಿ ಎನ್‌ಇಪಿ ಅಭ್ಯರ್ಥಿಯಾಗಿ ಕಣಕ್ಕೆ ಧುಮುಕಿದ್ದರು. ಎಲ್ಲರ ಗಮನ ಡಿಸ್ಸನಾಯಕೆ ಕಡೆಗೆ ಹೊರಳಿತ್ತು. ಗೆಲುವಿನ ಗೆರೆ ತಲುಪಲು ಸಾಧ್ಯವಿಲ್ಲ ಎಂದು ತಿಳಿದಿದ್ದರೂ ಇನ್ನೂ ಕೆಲವು ಪ್ರಮುಖರು ಅಭ್ಯರ್ಥಿಗಳಾಗಿ ಸ್ಪರ್ಧಿಸಿದ್ದರು.

ಈ ಸಂದರ್ಭದಲ್ಲಿ, ತಮಿಳು ಮಾತನಾಡುವ ಸಮುದಾಯಕ್ಕೆ ಸಂಬಂಧಿಸಿದಂತೆ, ಮೂರು ಸಮುದಾಯ ಆಧಾರಿತ ಅಭ್ಯರ್ಥಿಗಳಾದ ಶ್ರೀಲಂಕಾ ತಮಿಳರು, ಹೈಲ್ಯಾಂಡ್ ತಮಿಳರು ಮತ್ತು ಮುಸ್ಲಿಮರು ಸ್ಪರ್ಧಿಸಿದ್ದರು. ಈಶಾನ್ಯ ತಮಿಳು ಜನರಿಗೆ ಸಂಬಂಧಿಸಿದಂತೆ, ಅರಿಯನೇತ್ರನ್ ಅವರು ಸಾಮಾನ್ಯ ಅಭ್ಯರ್ಥಿಯಾಗಿದ್ದರು. ಅದೇ ರೀತಿ ಮಾಜಿ ಸಂಸದ ತಿಲಕರಾಜ್ ಮಲೆನಾಡಿನಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಇವರನ್ನು ಹೊರತುಪಡಿಸಿ, ವಾಯುವ್ಯ ಪುತ್ತಲಂ ಜಿಲ್ಲೆಯ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಇದ್ರೂಸ್ ಮೊಹಮ್ಮದ್ ಇಲ್ಯಾಸ್ (79) ಅವರು ಹೃದಯಾಘಾತದಿಂದ ನಿಧನರಾದರು.

ರನಿಲ್ ವಿಕ್ರಮಸಿಂಘೆ

38 ಅಭ್ಯರ್ಥಿಗಳು ಚುನಾವಣೆಗೆ ಸ್ಪರ್ಧಿಸಿದ್ದರೂ ಕೆಲವರು ಮಾತ್ರ ಪ್ರಾಮುಖ್ಯತೆ ಪಡೆದಿದ್ದರು. ಈ ಪೈಕಿ ಹಂಗಾಮಿ ಅಧ್ಯಕ್ಷರಾಗಿದ್ದ ರನಿಲ್ ವಿಕ್ರಮಸಿಂಘೆ ಅವರು ತಮ್ಮ ಬ್ಯಾನರ್ ಅಡಿಯಲ್ಲಿ ನಡೆಯುತ್ತಿರುವ ಯುನೈಟೆಡ್ ನ್ಯಾಶನಲ್ ಪಕ್ಷವನ್ನು ತೊರೆದು, 19 ವರ್ಷಗಳ ನಂತರ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಇದಕ್ಕೆ ಮುಖ್ಯ ಕಾರಣ ಅವರ ಯುನೈಟೆಡ್ ನ್ಯಾಷನಲ್ ಪಾರ್ಟಿ ತುಂಬಾ ದುರ್ಬಲವಾಗಿರುವುದು. ಇತ್ತೀಚಿನ ದಿನಗಳಲ್ಲಿ ಮುಖ್ಯವಾಹಿನಿಯ ಪಕ್ಷವು ಅತ್ಯಂತ ಕೆಟ್ಟ ಕುಸಿತವನ್ನು ಅನುಭವಿಸಿದ್ದರೆ, ಅದು ಯುನೈಟೆಡ್ ನ್ಯಾಶನಲ್ ಪಕ್ಷವಾಗಿದೆ. ರನಿಲ್ ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿದರೂ ಅವರು ಸ್ವತಂತ್ರ ಅಭ್ಯರ್ಥಿಯಾಗಿರಲಿಲ್ಲ ಮತ್ತು ಅವರ ಹಿಂದೆ ಹಲವು ಪಕ್ಷಗಳಿವೆ, ಆದರೆ ಅವೆಲ್ಲವೂ ಜನರಿಂದ ತಿರಸ್ಕರಿಸಲ್ಪಟ್ಟ ದುರ್ಬಲ ಪಕ್ಷಗಳಾಗಿವೆ.

ಕಳೆದ ರಾಷ್ಟ್ರೀಯ ಅಸೆಂಬ್ಲಿ ಚುನಾವಣೆಯಲ್ಲಿ ಅವರ ಯುನೈಟೆಡ್ ನ್ಯಾಷನಲ್ ಪಕ್ಷವು ಹೀನಾಯ ಸೋಲನ್ನು ಅನುಭವಿಸಿತು ಮತ್ತು ಒಂದೇ ಒಂದು ಕ್ಷೇತ್ರವನ್ನು ಸಹ ಗೆಲ್ಲಲಿಲ್ಲ. ಅಂದು, ತಮ್ಮ ವಿರುದ್ಧದ ಮತಗಳನ್ನು ವಿಭಜಿಸಲು ಹಲವು



ಸಣ್ಣ ಪಕ್ಷಗಳನ್ನು ಒಡೆದು ಕೆಲವರನ್ನು ತಮ್ಮ ಪರ ಅಭ್ಯರ್ಥಿಗಳನ್ನಾಗಿ ಕಣಕ್ಕಿಳಿಸಿದ್ದರು ಎನ್ನಲಾಗಿದೆ. ರನಿಲ್ ಈಗಾಗಲೇ ಯುನೈಟೆಡ್ ನ್ಯಾಶನಲ್ ಪಕ್ಷದ ಸದಸ್ಯರಾಗಿದ್ದಾರೆ, ರಾಜಪಕ್ಸೆ ನೇತೃತ್ವದ ಶ್ರೀಲಂಕಾ ಪೊದುಜನ ಪೆರಾಮುನಾ ಪಾರ್ಟಿಯ ಭಾಗ, ಮೈತ್ರಿಪಾಲ ಸಿರಿಸೇನಾ ಅವರ ಶ್ರೀಲಂಕಾ ಫ್ರೀಡಂ ಪಾರ್ಟಿಯ ಭಾಗ, ಜೀವನ್ ತೊಂಡಮಾನ್ ನೇತೃತ್ವದ ಶ್ರೀಲಂಕಾ ವರ್ಕರ್ಸ್ ಕಾಂಗ್ರೆಸ್, ಸಚಿವ ಡಗ್ಲಾಸ್ ದೇವಾನಂದಾ ಅವರ ಈಳಂ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ, ಈಶಾನ್ಯದಲ್ಲಿ ಕೆಲವು ತಮಿಳರು, ಇಸ್ಲಾಮಿಕ್ ಚಳವಳಿಗಳ ನಾಯಕರಿಂದ ರನಿಲ್ ಗೆ ಬೆಂಬಲವಿದೆ ಎಂದು ಹೇಳಲಾಗಿತ್ತು. ಹೀಗಿದ್ದರೂ ರನಿಲ್ ಗೆಲುವಿನ ಸಾಧ್ಯತೆ ಕಡಿಮೆ ಎಂದಿದ್ದರು ರಾಜಕೀಯ ವಿಶ್ಲೇಷಕರು.

2022ರ ಆರ್ಥಿಕ ಬಿಕ್ಕಟ್ಟನ್ನು ಭಾಗಶಃ ಪರಿಹರಿಸಿದವರು ಎಂದು ರನಿಲ್ ವಿಕ್ರಮಸಿಂಘೆ ಹೆಸರುವಾಸಿಯಾಗಿದ್ದರೂ, ಜನರು ಅವರನ್ನು ಸಂಪೂರ್ಣವಾಗಿ ನಂಬಲು ಸಿದ್ಧರಿಲ್ಲ. ಮುಂದೆ ರಾಜಪಕ್ಸೆ ಜತೆ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂಬುದಕ್ಕೆ ಗ್ಯಾರಂಟಿ ಇಲ್ಲ ಎಂದು ಜನ ಹೇಳುತ್ತಿದ್ದು, ರಾಜಪಕ್ಸೆ ಆಡಳಿತದಲ್ಲಿದ್ದ ಭ್ರಷ್ಟರು ಅವರ ಹಿಂದೆ ಇರುವುದನ್ನು ಜನ ಬಯಸಲಿಲ್ಲ. ಆದರೆ, ಉತ್ತರ ಶ್ರೀಲಂಕಾದ ಕೆಲವು ತಮಿಳು ಪಕ್ಷಗಳು ಮತ್ತು ಮಲೆನಾಡಿನ ಪ್ರಮುಖ ಕಾರ್ಮಿಕ ಸಂಘಟನೆಯಾದ ಶ್ರೀಲಂಕಾ ಲೇಬರ್ ಕಾಂಗ್ರೆಸ್ ಬೆಂಬಲ ವ್ಯಕ್ತಪಡಿಸಿದ್ದರೂ, ಅವರು ಗೆಲ್ಲಲಾಗಲಿಲ್ಲ. ಚುನಾವಣೆಗಳು ಸಮೀಪಿಸುತ್ತಿದ್ದಂತೆ, ಅವರು ತಮಿಳು ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ಅವಲಂಭಿಸಿ ಕೆಲವು ಘೋಷಣೆಗಳನ್ನು ಮಾಡಿದರು. 13ನೇ ಸಾಂವಿಧಾನಿಕ ತಿದ್ದುಪಡಿಯಲ್ಲಿ ಉಲ್ಲೇಖಿಸಿರುವ ಅಧಿಕಾರಕ್ಕೆ ಸಂಬಂಧಿಸಿದಂತೆ ರನಿಲ್ ಅವರ ಭರವಸೆಗಳು ಮತಗಳನ್ನು ಪಡೆಯುವಲ್ಲಿ ವಿಫಲವಾಗಿವೆ.

ಸಜಿತ್ ಪ್ರೇಮದಾಸ

2019 ರಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಗೋಟಾಬಯ ಅವರು ರಾಜಪಕ್ಸೆ ವಿರುದ್ಧ ಮೊದಲ ಬಾರಿಗೆ ಸ್ಪರ್ಧಿಸಿದ್ದರು ಮತ್ತು ಶೇ.41.99 ರಷ್ಟು ಮತಗಳೊಂದಿಗೆ ಎರಡನೇ ಸ್ಥಾನವನ್ನು ಗಳಿಸಿದ್ದರು. 1988ರಲ್ಲಿ ಅಧ್ಯಕ್ಷರಾಗಿದ್ದ ರಣಸಿಂಗ್ ಪ್ರೇಮದಾಸ ಅವರ ಪುತ್ರ ಸಜಿತ್ ಪ್ರೇಮದಾಸ ಅವರು ಯುನೈಟೆಡ್ ಪೀಪಲ್ಸ್ ಪವರ್ (Samagi Jana Balawegaya) ಹೆಸರಿನಲ್ಲಿ ಸ್ಪರ್ಧಿಸಿದ್ದರು. ಯುನೈಟೆಡ್ ನ್ಯಾಶನಲ್ ಪಾರ್ಟಿಯ ಬಹುಪಾಲು ಭಾಗವು ಅವರ ಪರವಾಗಿದೆ, ಉತ್ತರ ಶ್ರೀಲಂಕಾದ ತಮಿಳ್ ರಸುಕ್ ಪಕ್ಷದ ಜೊತೆಗೆ, ಕೆಲವು ತಮಿಳು ಸಂಘಟನೆಗಳಲ್ಲದೆ, ಇಸ್ಲಾಮಿಕ್ ಸಮುದಾಯ ಆಧಾರಿತ ಪಕ್ಷಗಳಾದ ರವೂಬ್ ಹಕೀಮ್ ನೇತೃತ್ವದ ಶ್ರೀಲಂಕಾ ಮುಸ್ಲಿಂ ಕಾಂಗ್ರೆಸ್ ಮತ್ತು ರಿಶಾದ್ ಬದಿಯುದ್ದೀನ್ ನೇತೃತ್ವದ ಆಲ್ ಶ್ರೀಲಂಕಾ ಪೀಪಲ್ಸ್ ಕಾಂಗ್ರೆಸ್ ಅವರನ್ನು ಬೆಂಬಲಿಸಲು ಮುಂದೆ ಬಂದಿದ್ದವು.

ಭಾರತದ ಒತ್ತಡ...?

ಹಿಂದಿನ ಆಡಳಿತದ ತಪ್ಪುಗಳ ವಿರುದ್ಧ ಹೋರಾಟ ನಡೆಸುತ್ತಿರುವ ಸಜಿತ್ ಪ್ರೇಮದಾಸ ಅವರು ತಮ್ಮ ಯುನೈಟೆಡ್ ಪೀಪಲ್ಸ್ ಪವರ್ ಪಕ್ಷಕ್ಕೆ ಹಲವರನ್ನು ಕರೆತಂದಿದ್ದರು. ನಿರ್ದಿಷ್ಟವಾಗಿ ಹೇಳುವುದಾದರೆ, ರಾಜಪಕ್ಸೆ ಅವರ ಭ್ರಷ್ಟ ಆಡಳಿತದಲ್ಲಿದ್ದ ಅನೇಕರು ಸೇರಿದಂತೆ, "ಕಳ್ಳರನ್ನು ಕಿತ್ತುಹಾಕುತ್ತೇನೆ" ಎಂದು ಸಜಿತ್ ಹೇಳಿರುವುದು ಹಾಸ್ಯಾಸ್ಪದ ಎಂಬ ಟೀಕೆಗಳು ಕೇಳಿಬಂದ್ದವು.

ಶ್ರೀಲಂಕಾದ ತಮಿಳು ಜನತೆ ಘೋಷಿಸಿರುವ ಸಾಮಾನ್ಯ ಅಭ್ಯರ್ಥಿಯಾದ ಸಜಿತ್ ಪ್ರೇಮದಾಸ ಅವರನ್ನು ಸಂಪೂರ್ಣವಾಗಿ ಬೆಂಬಲಿಸುವುದಾಗಿ ತಮಿಳ್ ರಸುಕ್ ಪಕ್ಷ ಹೇಳಿಕೊಂಡಿತ್ತು. ಇದು ಎಲ್ಲರ ಗಮನ ಸೆಳೆದಿತ್ತು. ಇದರ ಹಿಂದೆ ಭಾರತದ ಒತ್ತಡವಿದೆ ಎಂದು ಹೇಳಲಾಗುತ್ತದೆ.

ಕಳೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಉತ್ತರದ ತಮಿಳು ಜನರ ಬಹುಪಾಲು ಮತಗಳನ್ನು ಸಜಿತ್ ಗೆದ್ದುಕೊಂಡಿದ್ದಾರೆ ಎಂಬ ಅಂಶವನ್ನು ಆಧರಿಸಿ, ಈ ಬಾರಿಯೂ ಅದನ್ನು ಪಡೆಯುವ ಪ್ರಯತ್ನದ ಭಾಗವಾಗಿ ಸಜಿತ್, ಪ್ರಾಂತೀಯ ವಿಧಾನಸಭಾ ಚುನಾವಣೆಯನ್ನು ನಡೆಸುವ ಮತ್ತು ತಮಿಳು ಜನರ ಹಕ್ಕುಗಳ ರಕ್ಷಣೆಯ ಭರವಸೆ ನೀಡಿದ್ದರು. ಅವರ ಪ್ರಚಾರದ ಘೋಷಣೆಗಳು ಸಿಂಹಳೀಯ ಜನಸಾಮಾನ್ಯರನ್ನು ಆಕರ್ಷಿಸಲಿಲ್ಲ.

ಅನುರ ಕುಮಾರ ಡಿಸ್ಸನಾಯಕೆ

2019ರ ಅಧ್ಯಕ್ಷೀಯ ಚುನಾವಣೆಯಲ್ಲಿ ಕೇವಲ ಶೇ.3.16 ಮತಗಳನ್ನು ಪಡೆದ ಅನುರ ಕುಮಾರ ದಿಸ್ಸನಾಯಕೆ ನೇತೃತ್ವದ ಜೆವಿಪಿ (ಪೀಪಲ್ಸ್ ಲಿಬರೇಶನ್ ಫ್ರಂಟ್) ಪ್ರಮುಖ ಸ್ಪರ್ಧಿಯಾಗಿ ಹೊರಹೊಮ್ಮಿತು. 'ನ್ಯಾಷನಲ್ ಪೀಪಲ್ಸ್ ಪವರ್' ಹೆಸರಿನಲ್ಲಿ ಕ್ಷೇತ್ರಕ್ಕೆ ಕಾಲಿಟ್ಟ ಅನುರ ಕುಮಾರ ದಿಸ್ಸನಾಯಕೆ ಅವರ ಹಿಂದೆ ➚

ಒಬ್ಬ ಮತದಾರನಿಗೆ ಮೂರು ಮತಗಳು

ಶ್ರೀಲಂಕಾದ ಅಧ್ಯಕ್ಷೀಯ ಚುನಾವಣೆಯಲ್ಲಿ ಒಬ್ಬ ಮತದಾರನಿಗೆ ಮೂರು ಮತಗಳಿರುತ್ತವೆ. ಇದನ್ನು 1,2,3 ಎಂದು ಸೂಚಿಸಲಾಗುತ್ತದೆ. ಒಬ್ಬರು ತಮ್ಮ ಮತವನ್ನು ಮೊದಲ ಆಯ್ಕೆ, ಎರಡನೇ ಆಯ್ಕೆ ಮತ್ತು ಮೂರನೇ ಆಯ್ಕೆಯಾಗಿ ಮೂರು ಜನರಿಗೆ ಚಲಾಯಿಸಬಹುದು. ಆದರೆ ಒಬ್ಬರು ಮೂರೂ ಮತಗಳನ್ನು ಒಬ್ಬ ಅಭ್ಯರ್ಥಿಗೇ ಹಾಕುವಂತಿಲ್ಲ. ಮೂರೂ ಮತಗಳನ್ನು ಹಾಕಲೇಬೇಕು ಎಂಬ ಒತ್ತಾಯವೂ ಇಲ್ಲ. ಮೊದಲ ಮತವನ್ನು ಒಬ್ಬ ವ್ಯಕ್ತಿಗೆ ಮಾತ್ರ ನೀಡಬಹುದು. ಅಂತಹ ಪ್ರಾಥಮಿಕ ಮತದಾನದ ಶೇ. 50ಕ್ಕಿಂತ ಹೆಚ್ಚು ಪಡೆದ ವ್ಯಕ್ತಿಯನ್ನು ವಿಜೇತ ಎಂದು ಪರಿಗಣಿಸಲಾಗುತ್ತದೆ. ಯಾರೂ ಶೇ. 50ಕ್ಕಿಂತ ಹೆಚ್ಚು ಪಡೆಯದಿದ್ದರೆ, ದಾಖಲಾದ 2 ನೇ 3 ನೇ ಪ್ರಾಶಸ್ತ್ಯದ ಮತಗಳನ್ನು ಪರಿಗಣಿಸಲಾಗುತ್ತದೆ. ಮೊದಲ ಎರಡು ಸ್ಥಾನ ಪಡೆದವರನ್ನು ಹೊರತುಪಡಿಸಿ ಎಲ್ಲರೂ ಸ್ಪರ್ಧೆಯಿಂದ ಹೊರಹಾಕಲ್ಪಡುತ್ತಾರೆ. ಹೊರಹಾಕಲ್ಪಟ್ಟ ಅಭ್ಯರ್ಥಿಗಳ ಮತಪತ್ರದಲ್ಲಿ ದಾಖಲಾದ 2 ಮತ್ತು 3ನೇ ಪ್ರಾಶಸ್ತ್ಯದ ಮತಗಳಿಂದ ಎರಡನೇ ಹಂತದ ಇಬ್ಬರು ಅಭ್ಯರ್ಥಿಗಳ ಮತಗಳನ್ನು ಎಣಿಕೆ ಮಾಡಿ, ಮೊದಲ ಹಂತದ ಲೆಕ್ಕಕ್ಕೆ ಸೇರಿಸಿ, ಅತಿ ಹೆಚ್ಚು ಮತ ಪಡೆದವರನ್ನು ವಿಜೇತರೆಂದು ಘೋಷಿಸಲಾಗುತ್ತದೆ. ಸಮಾನ ಸಂಖ್ಯೆಯ ಮತಗಳ ಸಂದರ್ಭದಲ್ಲಿ, ವಿಜೇತರನ್ನು ಲಾಟರಿ ಮೂಲಕ ಆಯ್ಕೆ ಮಾಡಲಾಗುತ್ತದೆ.

ಇಲ್ಲಿಯವರೆಗೆ ನಡೆದ ಶ್ರೀಲಂಕಾ ಅಧ್ಯಕ್ಷೀಯ ಚುನಾವಣೆಯಲ್ಲಿ ಎರಡು ಮತ್ತು ಮೂರನೇ ಮತಗಳನ್ನು ಎಣಿಸುವ ಅಗತ್ಯ ಬಂದಿರಲಿಲ್ಲ. ಈ ಚುನಾವಣೆಯಲ್ಲಿ ಎರಡನೇ ಪ್ರಾಶಸ್ತ್ಯದ ಮತಗಳನ್ನು ಎಣಿಸಲಾಗಿದೆ.

ಯಾವುದು "ಧರ್ಮ" ಮಾರ್ಗ...... ಪುಟ 6 ರಿಂದ

ವ್ಯವಹಾರಿಕವಾಗಿ ದೇವರ ಹೆಸರಿನಲ್ಲಿ ಮಾರಾಟಕ್ಕೆ ಇಟ್ಟಿರುವ ಲಡ್ಡು ಪ್ರಾಣಿಗಳ ಕೊಬ್ಬಿನಿಂದ ಮಾಡಲ್ಪಟ್ಟಿತೆಂದು, ಇದರಿಂದ ಯಾರೋ ಕಂಡರಿಯದ ಮಾದರಿಯಲ್ಲಿ ಮಾಲಿನ್ಯಗೊಂಡಿತು ಎಂಬ ಕಾರಣಕ್ಕಾಗಿ ಅಲ್ಲಿನ ಮೂಲಭೂತವಾದಿಗಳು ಮಾಡುತ್ತಿರುವ ಬಹುದೊಡ್ಡ ಶುದ್ಧಿಕರಣವನ್ನು ಗಂಭೀರವಾಗಿ ಗಮನಿಸಿದಾಗ, ಇದೇ ತಿಮ್ಮಪ್ಪನ ಸನ್ನಿಧಾನದಲ್ಲಿ ಅವರು ಮಾಡುವ ಪವಿತ್ರ ಪೂಜೆಗಳಲ್ಲೇ ಇನ್ನೂ ಹೆಚ್ಚಿನ ಪವಿತ್ರ ಪೂಜೆಗಳನ್ನು– ದೇವರಿಗೆ ಪೂರಕವಾದ ಪುರಸ್ಕಾರವನ್ನು ಮಾಡಿ ಶುದ್ಧಿ ಮಾಡುತ್ತಿರುವ ಜನ ವರ್ಗ ಸತಶತಮಾನಗಳಿಂದ ತಾವೇ ಅದೇ ದೇವರ ಹೆಸರಿನಿಂದಲೇ ತಮ್ಮಂತೆ ಇರುವ ಬಹುದೊಡ್ಡ ಶ್ರಮಿಕ ಜನವರ್ಗವನ್ನು ಅಸ್ಪೃಶ್ಯರನ್ನಾಗಿಸಿ ತಮ್ಮ ಶಾಶ್ವತ ಮನೆ ಹಾಗೂ ಮನವನ್ನು ಶಾಶ್ವತವಾಗಿ ಮಲಿನಗೊಳಿಸಿಕೊಂಡಿರುವ ತಮ್ಮ ಮನಸ್ಸುಗಳನ್ನು ಮಾತ್ರ ಶುದ್ಧೀಕರಿಸಿಕೊಳ್ಳಲು ಯಾವ ಕ್ಷಣದಲೂ ಮುಂದಾಗುವುದಿಲ್ಲ. ಏಕೆಂದರೆ, ಈ ವಿಷಯದಲ್ಲಿ ಮಾತ್ರ ಅವರು ಪಿತ್ರಾರ್ಜಿತವಾಗಿ ಶಾಶ್ವತ ದೃಷ್ಟಿಕೋನದಿಂದ ಅಜ್ಞಾನ ಅಂಧಕಾರದಿಂದ ಮಲಿನಗೊಂಡವರೇ. ಈ ಹಂತದಲ್ಲಿ ಮಾತ್ರ ಈ ಜನ ವರ್ಗ ನಾವು ಶ್ರೇಷ್ಠರು–ಈ ನೆಲದಲ್ಲಿ ದೇವರ ವಾರಸುದಾರಿಕೆಯ ಹಿನ್ನೆಲೆಯಿಂದ ಸ್ಪೃಶ್ಯರು–ಇವರು ದೇವರು ಹಾಗೂ ಧರ್ಮದ ಹಿನ್ನೆಲೆಯಿಂದ ಅಸ್ಪೃಶ್ಯರು ಎಂದು ಹೇಳಿಕೊಂಡು ಶತಶತಮಾನಗಳಿಂದಲೂ ಹಂದಿ, ದನ, ಕತ್ತೆ, ಕುರಿ ಮೇಕೆಗಳ ಕೊಬ್ಬನ್ನು ದಿನನಿತ್ಯ–ಪ್ರತಿಕ್ಷಣ ತಿನ್ನುತ್ತಿರುವವರೇ ಆಗಿದ್ದಾರೆ.

ಈ ಅರ್ಥದಲ್ಲಿಯೇ ಹೇಳುವುದಾದರೆ ಭಾರತದಲ್ಲಿ 'ಧರ್ಮ' ಸಮಯ ಸಂದರ್ಭಕ್ಕನುಸಾರವಾಗಿ ಕ್ಷಣಾರ್ಥದಲ್ಲಿ ಬಂದು ಹೋಗುವ "ಪೊಳ್ಳು" ಸಾಧನ ಮಾದರಿಯ ಕೈಗೊಂಬೆಯಾಗಿದೆ. ಆದ್ದರಿಂದ ಇದು ಭಾರತದಲ್ಲಿ ಗಟ್ಟಿಯಾಗಿ ನಿಲ್ಲುವುದರಕ್ಕಿಂತ ಸಮಯ ಸಂದರ್ಭಕ್ಕೆ ಅನುಸಾರವಾಗಿ ಬೀಳುವುದೇ ಹೆಚ್ಚಾಗಿದೆ.

ಆದರೆ,

'ಜಾತಿ' ಶಾಶ್ವತವಾಗಿ ಪ್ರತಿ ಕ್ಷಣ ಭಾರತೀಯರ ಮನ ಹಾಗೂ ಮನೆಯಲ್ಲಿ ಮನೆ ಮಾಡಿಕೊಂಡಿರುವ ಹಾಗೂ ಯಾವ ಸಂದರ್ಭದಲ್ಲಿಯೂ ಅಲುಗಾಡದ ಮಾದರಿಯ "ಗಟ್ಟಿ" ಸಾಧನವಾಗಿದೆ. ಈ ಸಾಧನ ಎಂತದ್ದೇ ಭೂಕಂಪ ಸುನಾಮಿಗಳಿಗೂ ಜಗ್ಗಿಲ್ಲ–ಬಗ್ಗಿಲ್ಲ. ಇದು ಮಾತ್ರ ಯಾವುದೇ ಸಂದರ್ಭದಲ್ಲಿಯೂ ಬದಲಾವಣೆಗೆ ಬಯಸುವುದಿಲ್ಲ. ರಾಜಪ್ರಭುತ್ವದ ಭಾರತದಲ್ಲಿ ಇದರ ಪ್ರಭಾವ ಯಥಾ ಸ್ಥಿತಿಯ ಮಾದರಿಯ ರೂಪವಾಗಿದ್ದರೆ–ಪ್ರಜಾಪ್ರಭುತ್ವದ ಭಾರತದಲ್ಲಿ ಇದರ ಪ್ರಭಾವ ಇನ್ನೂ ಹೆಚ್ಚು ಹೆಚ್ಚು ಗಟ್ಟಿಗೊಂಡು ಬೀದಿ ಬೀದಿಯಲ್ಲಿ ಕಿರಿಚಾಡುವ ಮಾದರಿದ್ದಾಗಿದೆ.

ನಿಜಾರ್ಥದಲ್ಲಿ 'ಧರ್ಮ' ಎಂಬುವುದು ಜಂಗಮದ ರೀತಿ. ಇದನ್ನು ಅರ್ಥ ಮಾಡಿಕೊಳ್ಳುವುದು ಬಹು ಕಠಿಣ. ಏಕೆಂದರೆ ಇದು ಜ್ಞಾನಕ್ಕೆ (ನಾಲೆಡ್ಜ್) ಸಂಬಂಧ ಪಟ್ಟದ್ದು. ಆದರೆ..., 'ಜಾತಿ' ಸ್ಥಾವರದ ರೀತಿ. ಇದು ಶತಶತಮಾನಗಳಿಂದ ಅಲುಗಾಡದೆ ನಿಂತಲ್ಲೇ ನಿಂತಿರುವ (ಅಜ್ಞಾನ) ಅಜ್ಞಾನದ ಸಾಧನದ ಮಾದರಿಯದು. ಈ ಅಜ್ಞಾನದ ಜಾತಿ ಎಂಬ ಸ್ಥಾವರ ಸುಮ್ಮನೆ ನಿಂತಿಲ್ಲ. ತಾನು ಕಾಲ ಕಾಲಕ್ಕೆ ತನಗೆ ಅರಿವಿಲ್ಲದೆ ತಾನು ಸೇರ್ಪಡೆಗೊಂಡಿರುವ ಧರ್ಮದ ಒಳಗಡೆ ಪ್ರತಿದಿನ–ಪ್ರತಿಕ್ಷಣ ದೇವರಮಕ್ಕಳು ಎಂದು ತಮಗೆ ತಾವೇ ಹೇಳಿಕೊಳ್ಳುವವರಿಂದ ಪೂಜೆಯ ಜೊತೆ ಅರ್ಚನವನ್ನು ಅದ್ದೂರಿಯಾಗಿ, ಅಜ್ಞಾನದ "ನಾನತ್ವದ" ಹಿನ್ನೆಲೆಯಿಂದ ಮಾಡಿಸಿಕೊಂಡು ನಾನು ಶ್ರೇಷ್ಠ ಎಂದು ಮೆರೆಯುತ್ತಿದ್ದಾನೆ.

ಇಂತಹ ಅಜ್ಞಾನದ ಸಾಧನಗಳಿಂದ ನಾವು ಬಲಿಷ್ಠ ಭಾರತವನ್ನು ಕಟ್ಟಲಾಗದೆ ಶತಶತಮಾನಗಳ ಬಹುದೊಡ್ಡ ಜನ ಮುಖ ಚರಿತ್ರೆಯನ್ನು ಒಳಗೊಂಡಿರುವ ನಮ್ಮ ದೇಶ ಪ್ರತಿದಿನ ಸೊರಗುತ್ತಿದ್ದೇವೆ. ಇದರಿಂದ ಭಾರತ–ಭಾರತೀಯ ಹಾಗೂ ಭಾರತೀಯತೆಯೂ ಸಹ ಸೊರಗುತಿದೆ.

ಇಷ್ಟಾದರೂ ನಾವ್ಯಾರೂ ಸಹ ನಿರಾಶೆ ಆಗುವುದು ಬೇಡ. ಭಾರತ ಎಂದೆಂದಿಗೂ ಆಶಾವಾದಿಗಳಿಗೆ ಜನ್ಮ ನೀಡಿದ ನೆಲೆ. ಬುದ್ಧ, ಬಸವ, ಕನಕ, ಅಂಬೇಡ್ಕರ್ ಅವರು ಈ ನೆಲದ ನಿಜ ಆಶಾವಾದಿಗಳು. ಇವರ ಆಶಾವಾದದ ತತ್ವ ಸಿದ್ಧಾಂತವನ್ನು ಮೈಗೂಡಿಸಿಕೊಂಡು ಬಲಿಷ್ಠ ಭಾರತವನ್ನು ಗಟ್ಟಿಯಾಗಿ ಕಟ್ಟಬೇಕಾಗಿದೆ. ಬಾಬಾಸಾಹೇಬ್ ಅಂಬೇಡ್ಕರ್ ಅವರು ನಿಜ ಧರ್ಮದ ಸಾರದಲ್ಲಿ ರೂಪಿಸಿರುವ ಭಾರತದ ಬೃಹತ್ ಲಿಖಿತ ಸಂವಿಧಾನ ಆಶಾವಾದಿಗಳ ಭಾರತವನ್ನು ಬಲಿಷ್ಠವಾಗಿ ಕಟ್ಟಲು ರಾಷ್ಟ್ರೀಯ ಹೆದ್ದಾರಿಯನ್ನು ನಿರ್ಮಿಸಿಕೊಟ್ಟಿದೆ. ನಾವು ಈ ರಾಷ್ಟ್ರೀಯ ಹೆದ್ದಾರಿಯಲ್ಲಿ ಮುನ್ನಡೆಯದೆ ಕೇವಲ ಅಡ್ಡ ದಾರಿಯಲ್ಲಿ ಹೋಗುತ್ತಿರುವ ಕಾರಣಕ್ಕಾಗಿ ಒಂದು ಕೋಟಿ ನಲವತ್ತು ಲಕ್ಷ ಜನ ಸಂಖ್ಯೆಯನ್ನು ಹೊಂದಿರುವ ಬೃಹತ್ ಭಾರತ ಅಪೌಷ್ಟಿಕತೆಯಿಂದ ಶಕ್ತಿಹೀನವಾಗಿ ನರಳುತ್ತಿದೆ.

(ನಾನು ಸ್ಪೃಶ್ಯ– ನೀನು ಅಸ್ಪೃಶ್ಯ, ನನ್ನದು ಶ್ರೇಷ್ಠ ಕುಲ–ನಿನ್ನದು ಕನಿಷ್ಠ ಕುಲ, ನಾನು ಊರಿನವ– ನೀನು ಕೇರಿನವ, ನಾನು ಮೊದಲಿಗ–ನೀನು ಪಂಚಮ, ನಾನು ಸತ್ತರೆ ಸ್ವರ್ಗಕ್ಕೆ ಹೋಗುತ್ತೇನೆ– ನೀನು ಸತ್ತರೆ ನರಕಕ್ಕೆ ಹೋಗುತ್ತೀಯಾ, ನಾನು ಸಸ್ಯ ಆಹಾರಿ ಅದಕ್ಕಾಗಿ ಶ್ರೇಷ್ಠ–ನೀನು ಮಾಂಸ ಆಹಾರಿ ಅದಕ್ಕಾಗಿ ಕನಿಷ್ಠ ಇತ್ಯಾದಿ ಇತ್ಯಾದಿ ಇಂದು ಹೇಳಿಕೊಂಡೆ ಸೊರಗುತಿದೆ. ಈ ಅನೀತಿ ಅಧರ್ಮವನ್ನೇ ವೈಭವ ಎಂದು ಹೇಳಿಕೊಂಡ ಪ್ರಪಂಚದ ಏಕೈಕ ರಾಷ್ಟ್ರ ಎಂದರೆ ಅದು ಭಾರತ ಎಂದು ಹೇಳಲು ದುಃಖವಾಗುತ್ತದೆ).

ಪ್ರಾಕೃತಿಕವಾಗಿ ಬಹು ಶ್ರೀಮಂತಿಕೆಯನ್ನು ಹೊಂದಿರುವ ಭಾರತ ತನ್ನ ಒಡಲಾಳದ ಮನ ಹಾಗೂ ಮನೆ ತುಂಬಾ ದವಸ ಧಾನ್ಯಗಳನ್ನು ತುಂಬಿಸಿಕೊಂಡಿದ್ದರೂ ಸಹ ಅವುಗಳನ್ನು ಸಮನಾಗಿ ಹಂಚಿಕೊಂಡು, ಸಮೃದ್ಧಿಯಾಗಿ ಬಳಸಿಕೊಂಡು ಅಡುಗೆ ಮಾಡಿ ಊಟ ಮಾಡದೆ ಕೆಲವೇ ಕೆಲವು ಜನ ವರ್ಗದಲ್ಲಿ ಶೇಖರಣೆ ಮಾಡಿಕೊಂಡು ಸಂಪತ್ತನ್ನು ವ್ಯರ್ಥ ಮಾಡುತ್ತಿದೆ. ಭಾರತದ ಬಹು ದೊಡ್ಡ ಜನ ವರ್ಗ ಹಸಿವಿನಿಂದ ನರಳಿ ಅಜ್ಞಾನದ ಅಪೌಷ್ಟಿಕತೆಯ ನೆಲೆಯಾಗುತ್ತಿದೆ. ಎಪ್ಪತ್ತೆಂಟು ವಸಂತಗಳನ್ನು ಪೂರ್ಣಗೊಳಿಸಿದ ಇಂದಿನ ಪ್ರಜಾಪ್ರಭುತ್ವ ಭಾರತದಲ್ಲಿಯೂ ಸಹ ಅದೇ ಮಾದರಿಯ ತತ್ವ ಸಿದ್ಧಾಂತವೇ ಮೆರೆಯುತ್ತಿದೆ.

ಇದಾಗಬಾರದು. ಏಕೆಂದರೆ ಈಗ ನಮ್ಮ ದೇಶವನ್ನು ಆಳ್ವಿಕೆ ಮಾಡುವ ಸರ್ಕಾರದ ಮುಖ್ಯಸ್ಥನು ರಾಜನ ಹೊಟ್ಟೆಯಿಂದ ಹುಟ್ಟುವುದಿಲ್ಲ. ಬದಲಿಗೆ ಪ್ರಜೆಗಳ ವೋಟಿನಿಂದ ಆಯ್ಕೆಯಾಗುತ್ತಾನೆ.

ಪ್ರಜೆಗಳ ವೋಟಿನಿಂದ ಆಯ್ಕೆಯಾಗುವ ಪ್ರತಿಯೊಬ್ಬ ಜನನಾಯಕನು ಸಹ ಸರ್ವ ಜನಾಂಗದ ಹಿತಕ್ಕಾಗಿ ಕೆಲಸ ಮಾಡಬೇಕೆ ಹೊರತು–ತನ್ನ ಜಾತಿಗೆ ಅಥವಾ ತನ್ನ ಧರ್ಮಕ್ಕೆ ಮಾತ್ರ ಸೀಮಿತವಾಗಿ ಗರ್ವದಿಂದ ಆಳ್ವಿಕೆ ಮಾಡಿದರೆ ಇದು ದೇಶಕ್ಕೆ ಮಾರಕ–ಅದೇ ಸಂವಿಧಾನದ ತತ್ವ ಸಿದ್ಧಾಂತದ ಅಡಿಯಲ್ಲಿ ತೆರೆದ ಕಣ್ಣಿನಿಂದ ಭಾರತವನ್ನು ನೋಡಿ ಸಮ ಸಮಾಜ ಸ್ಥಾಪಿಸುವ ಹಿನ್ನೆಲೆಯಿಂದ ಆಳ್ವಿಕೆ ಮಾಡಿದರೆ ನಮ್ಮ ದೇಶಕ್ಕೆ ಪೂರಕ.

ಜನ ಸೇರುತ್ತಿದ್ದರು. ಇದನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ರಾಜಕೀಯ ವಿಶ್ಲೇಷಕರು ಶ್ರೀಲಂಕಾ ಅಧ್ಯಕ್ಷೀಯ ಚುನಾವಣೆ ದ್ವಿಮುಖ ಸ್ಪರ್ಧೆಯತ್ತ ಸಾಗುತ್ತಿದ್ದುದನ್ನು ಕಂಡರು. ಸಜಿತ್ ನೇತೃತ್ವದ "ಯುನೈಟೆಡ್ ಪೀಪಲ್ಸ್ ಪವರ್" ಮತ್ತು ಅನುರ ಕುಮಾರ ಡಿಸ್ಸನಾಯಕೆ ಅವರ ನ್ಯಾಷನಲ್ ಪೀಪಲ್ಸ್ ಪವರ್' ನಡುವೆ ತೀವ್ರ ಪೈಪೋಟಿ ಏರ್ಪಟ್ಟಿರುದನ್ನು ಅವರು ಗಮನಿಸಿದರು. ಕಳೆದ 76 ವರ್ಷಗಳಿಂದ ಶ್ರೀಲಂಕಾವನ್ನು ಒಂದರ ನಂತರ ಒಂದು ಎಂಬಂತೆ ಆಳುತ್ತಿರುವ ಎರಡು ಬಲಪಂಥೀಯ ಪಕ್ಷಗಳಿಗೆ ಪರ್ಯಾಯ ಎಂಬ ಘೋಷಣೆಯೊಂದಿಗೆ, ಜೆವಿಪಿ ಶ್ರೀಲಂಕಾ ರಾಜಕೀಯದಲ್ಲಿ ಒಂದು ಶಕ್ತಿಯಾಗಿ ಹೊರಹೊಮ್ಮಿದೆ.

ಪೀಪಲ್ಸ್ ಲಿಬರೇಶನ್ ಫ್ರಂಟ್ (ಜೆವಿಪಿ)

ಚೀನೀ ಪರವಾದ ಕಮ್ಯುನಿಸ್ಟ್ ಪಕ್ಷದಿಂದ ಪಕ್ಷಾಂತರಗೊಂಡ ರೋಹನ್ ವಿಜಯವೀರ (Rohana Wijeweera) ಅವರು 1965 ರಲ್ಲಿ ಪೀಪಲ್ಸ್ ಲಿಬರೇಶನ್ ಫ್ರಂಟ್ (ಜೆವಿಪಿ– Janatha Vimukthi Peramuna) ಸ್ಥಾಪಿಸಿದರು. ಮಾರ್ಕ್ಸಿಸ್ಟ್–ಲೆನಿನಿಸ್ಟ್ ತತ್ವಗಳನ್ನು ಅದರ ಮೂಲ ತತ್ವಗಳಾಗಿ ಅನುಸರಿಸುವುದಾಗಿ ಅದು ಹೇಳಿಕೊಂಡಿದೆ. ಈ ವ್ಯವಸ್ಥೆಯ ಆರಂಭದ ದಿನಗಳಲ್ಲಿ ಅದು ಸಶಸ್ತ್ರ ಕ್ರಾಂತಿಯ ಮೂಲಕ ಅಧಿಕಾರವನ್ನು ಪಡೆಯಲು ಪ್ರಯತ್ನಿಸಿತು. ಆದರೆ ಭಾರೀ ಜೀವಹಾನಿ ಮತ್ತು ವೈಫಲ್ಯವನ್ನು ಅದು ಎದುರಿಸಿತು. ಆದರೆ 1977ರಲ್ಲಿ ಅದು ಜನರ ಸಹಭಾಗಿತ್ವದೊಂದಿಗೆ ಪ್ರಜಾಪ್ರಭುತ್ವದ ಚುನಾವಣಾ ವ್ಯವಸ್ಥೆಗೆ ಬದಲಾಯಿಸಲು ಪ್ರಾರಂಭಿಸಿತು. ಎಡಪಂಥೀಯ ನೀತಿಗಳನ್ನು ಅನುಸರಿಸುತ್ತೇವೆ ಎನ್ನುವ ಜೆವಿಪಿ ಪಕ್ಷವು 27 ಸಣ್ಣ ಸಂಘಟನೆಗಳನ್ನು ಒಗ್ಗೂಡಿಸಿ ಎನ್‌ಪಿಪಿ (ನ್ಯಾಷನಲ್ ಪೀಪಲ್ಸ್ ಪವರ್) ಎಂಬ ರಾಷ್ಟ್ರೀಯ ಜನಾಂದೋಲನವನ್ನು ಹುಟ್ಟುಹಾಕಿ, ಅನುರ ಕುಮಾರ ಡಿಸ್ಸನಾಯಕೆ ಅವರನ್ನು ಅಧ್ಯಕ್ಷೀಯ ಅಭ್ಯರ್ಥಿಯಾಗಿಸಿತು.

ಕಳೆದ 76 ವರ್ಷಗಳ ಆಡಳಿತವು ಜನರಲ್ಲಿ ಒಂದು ರೀತಿಯ ಬೇಸರವನ್ನು ಉಂಟುಮಾಡಿದ್ದರೆ, 2019ರಲ್ಲಿ, ಗೋತಬಯ ರಾಜಪಕ್ಸೆ ಅವರ ಆಡಳಿತವು ಜನರನ್ನು ತೀವ್ರ ಅತೃಪ್ತಿಗೊಳಿಸಿತು. ಇದರ ಪರಿಣಾಮವಾಗಿ ರಾಜಪಕ್ಸೆ ಅವರನ್ನು ಬೆಂಬಲಿಸುತ್ತಿದ್ದ ವಿದ್ಯಾವಂತ, ಸಿಂಹಳೀಯ ಮಧ್ಯಮ ವರ್ಗದ ಲಕ್ಷಗಟ್ಟಲೆ ಜನರು ಜೆವಿಪಿಯತ್ತ ಸಾಗತೊಡಗಿತು. 2022ರಲ್ಲಿ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಇದು ವೇಗಗೊಳ್ಳಲು ಪ್ರಾರಂಭಿಸಿತು. ಆ ನಿಟ್ಟಿನಲ್ಲಿ ನಡೆದ ಪ್ರತಿಭಟನೆಯ ನಂತರ ಅನುರ ಕುಮಾರ ಡಿಸ್ಸನಾಯಕೆ ಪರ ಅಲೆ ಅವ್ಯಾಹತವಾಗಿ ಹರಿಯತೊಡಗಿತು. ಹೆಚ್ಚುತ್ತಿರುವ ನಗರ ಮತ್ತು ಗ್ರಾಮೀಣ ಮಧ್ಯಮ ವರ್ಗವು ವ್ಯವಸ್ಥೆಯಲ್ಲಿ ತಕ್ಷಣದ ಬದಲಾವಣೆಯ ಅಗತ್ಯವಿದೆ ಎಂದು ಬಯಸಿದ್ದು, ಅನುರ ಕುಮಾರ ಡಿಸ್ಸನಾಯಕೆ ನೇತೃತ್ವದ ಎನ್‌ಪಿಪಿ ಮೈತ್ರಿ "ಬದಲಾವಣೆ ಒಂದೇ ಪರಿಹಾರ" ಎಂಬ ಘೋಷಣೆಯನ್ನು ಮುಂದಿಟ್ಟಿತು. ಹಾಗೆಯೇ 'ಸಮೃದ್ಧ ನಾಡು, ಸುಂದರ ಬದುಕು' ಎಂಬ ಘೋಷವಾಕ್ಯದಡಿ ಹಲವು ಕ್ರಾಂತಿಕಾರಕ ಯೋಜನೆಗಳನ್ನು ಮುಂದಿಟ್ಟಿರುವುದನ್ನು ಕಾಣಬಹುದು.

ಅತ್ಯಂತ ಶಾಂತವಾಗಿ ಜನಬೆಂಬಲ ಸಂಗ್ರಹಿಸುತ್ತಿರುವ ಎನ್‌ಪಿಪಿ ನೈಜ ಮಧ್ಯಮ ವರ್ಗದವರ ಮುಖವನ್ನು ಮುಂದಿಟ್ಟು ಯಶಸ್ವಿಯಾಗಿದೆ. ಇದು ಜನರ ಶತ್ರು ಯಾರು ಎಂದು ಸ್ಪಷ್ಟವಾಗಿ ಗುರುತಿಸುತ್ತದೆ. ಒಂದೊಮ್ಮೆ, ದಿಸ್ಸನಾಯಕೆ ಆಡಳಿತ ನಡೆಸುತ್ತಾರೆ ಎಂಬ ಮನಃಸ್ಥಿತಿಗೆ ಹಲವರು ಬರಲಾರಂಭಿಸಿದ್ದಾರೆ ಎಂಬುದನ್ನು ಸಮೀಕ್ಷೆಗಳು ದೃಢಪಡಿಸಿದ್ದನ್ನು ತಿಳಿದ ಭಾರತ ಸರ್ಕಾರ, ಡಿಸ್ಸನಾಯಕೆ ಅವರನ್ನು ದೆಹಲಿಗೆ ಆಹ್ವಾನಿಸಿತು ಎನ್ನಲಾಗಿದೆ.

ನಮಲ್ ರಾಜಪಕ್ಸೆ

ಮಾಜಿ ಅಧ್ಯಕ್ಷ ಮಹಿಂದ ರಾಜಪಕ್ಸೆ ಅವರ ಪುತ್ರ ನಮಲ್ ರಾಜಪಕ್ಸೆ ಅವರು ಶ್ರೀಲಂಕಾ ಪೊದುಜನ ಪೆರಮುನ (SLPP) ಪಕ್ಷದಿಂದ ನಾಲ್ಕನೇ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು. ಸೋಲುವುದು ಖಚಿತವಾದರೂ, ರಾಜಪಕ್ಸೆಯ ಭಿನ್ನಮತೀಯರ ಅಸ್ತಿತ್ವವನ್ನು ನಿಲ್ಲಿಸಿ ಮುಂದಿನ ರಾಜಕೀಯದಲ್ಲಿ ಪಯಣ ಬೆಳೆಸಲು, ರಾಜಪಕ್ಸೆಯ ನಿಷ್ಠರನ್ನು ಉಳಿಸಿಕೊಳ್ಳಲು ಹಲವು ಯೋಜನೆಗಳೊಂದಿಗೆ ಚುನಾವಣಾ ಕ್ಷೇತ್ರಕ್ಕೆ ಧುಮುಕಿದ್ದರು.

ಬಲಪಂಥೀಯ ಪಕ್ಷಗಳು ಸೋಲನುಭವಿಸಿವೆ. ಆದರೆ...

ಶ್ರೀಲಂಕಾದಲ್ಲಿ ನಡೆಯಲಿರುವ ಅಧ್ಯಕ್ಷೀಯ ಚುನಾವಣೆ ಸಂಪೂರ್ಣವಾಗಿ ವಿಭಿನ್ನಸ್ವರೂಪವನ್ನು ಹೊಂದಿದೆ ಎಂಬುದನ್ನು ಗಮನಿಸಬಹುದು. 20 ವರ್ಷಗಳ ಇತಿಹಾಸದಲ್ಲಿ ಜಾತೀಯತೆ ಇಲ್ಲದೇ ಈ ಬಾರಿಯ ಚುನಾವಣೆ ನಡೆದಿದೆ ಎನ್ನಬಹುದು. ತಮಿಳು ಪ್ರತ್ಯೇಕತಾವಾದ, ತಮಿಳು ಜನಾಂಗೀಯವಾದ, ಇಸ್ಲಾಮಿಕ್ ಉಗ್ರವಾದ, ಗುಪ್ತ ವರ್ಣಭೇದ ನೀತಿ ಇತ್ಯಾದಿಗಳನ್ನು ಬಹಿರಂಗವಾಗಿ ಚರ್ಚಿಸದ ಮೊದಲ ಚುನಾವಣೆ ಇದು. ನಮಲ್ ರಾಜಪಕ್ಸೆ ಹೊರತುಪಡಿಸಿ, ಇತರ ಮೂವರು ಪ್ರಮುಖ ಸ್ಪರ್ಧಿಗಳೂ ಅಲ್ಪಸಂಖ್ಯಾತರ ಹಿತಾಸಕ್ತಿಗಳ ಬಗ್ಗೆ ಮಾತನಾಡಿದ್ದಾರೆ.

ಈ ಬಾರಿಯ ಚುನಾವಣೆಯಲ್ಲಿ ಬಲಪಂಥೀಯ ಪಕ್ಷಗಳು ಸೋಲನುಭವಿಸಿವೆ. ಆದರೆ ಈಗ ರಚನೆಯಾದ ಸರ್ಕಾರ ಸಂಪೂರ್ಣ ಎಡಪಂಥೀಯ ಸರ್ಕಾರ ಎಂದು ಹೇಳಲು ಸಾಧ್ಯವಿಲ್ಲ.

ಆಗ್ನೇಯ ಏಷ್ಯಾದಲ್ಲಿ ಶ್ರೀಲಂಕಾ ಪ್ರಮುಖ ಕೇಂದ್ರವಾಗಿರುವುದರಿಂದ, ಭದ್ರತೆಯ ನೆಪದಲ್ಲಿ ಭಾರತ, ಚೀನಾ ಮತ್ತು ಯುನೈಟೆಡ್ ಸ್ಟೇಟ್ಸ್ ಶ್ರೀಲಂಕಾದ ಅಧ್ಯಕ್ಷೀಯ ಚುನಾವಣೆಯನ್ನು ಸೂಕ್ಷ್ಮವಾಗಿ ಗಮನಿಸಿವೆ. ಶ್ರೀಲಂಕಾದ ರಾಜಕೀಯ ಪಕ್ಷಗಳ ಮೇಲೆ ತಮಗೆ ಅನುಕೂಲಕರವಾದ ಸರ್ಕಾರ ರಚಿಸುವಂತೆ ಒತ್ತಡ ಹೇರುವ ಪ್ರಯತ್ನ ಮಾಡಿದ್ದರು ಎಂದೂ ಹೇಳಲಾಗಿದೆ. ಅದರಲ್ಲೂ ಭಾರತೀಯ ಭದ್ರತೆಗೆ ಸಂಬಂಧಿಸಿದ ಉನ್ನತ ಅಧಿಕಾರಿಗಳು ಶ್ರೀಲಂಕಾದಲ್ಲಿ ಕೆಲವು ರಾಜಕೀಯ ಮುಖಂಡರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ ಎಂಬುದೂ ಗೊತ್ತಾಗಿದೆ.

–ಸಿ.ಸಿದ್ದಯ್ಯ

(ಪ್ರೊ.ಎಸ್.ಝುಡ್.ಜಯಸಿಂಗ್ (ಶ್ರೀಲಂಕಾದ ಪೆರಡೇನಿಯ ವಿಶ್ವವಿದ್ಯಾಲಯದ ಸಹಾಯಕ ಉಪನ್ಯಾಸಕರು (ನಿವೃತ್ತ)– ಇವರ ಲೇಖನದಿಂದ ಮತ್ತು ಇತರೆ ಮೂಲಗಳಿಂದ ಮಾಹಿತಿಗಳನ್ನು ಪಡೆಯಲಾಗಿದೆ.)

NEW No. MAG(3)/NPP/205/2021-2022
JANASHAKTHI KANNADA VARA PATRIKE September 30-October 6, 2024 Price: Rs. 10/- Date of Publication: 27 September 2024 RNI No. KARKAN /2006/17926 Posted on 03-10-2024
Posted at BG PSO, BG - 560026 **Posted at Periodical Rate -** Rs. 2

ಸೌಹಾರ್ದ ಶಿಬಿರ: ದ್ವೇಷ ಹರಡಿ ಕೋಮುಗಲಭೆ ಹುಟ್ಟುಹಾಕುವುದು, ದೇಶಭಕ್ತಿ, ಧರ್ಮದ ಹೆಸರಿನಲ್ಲಿ ಸುಳ್ಳು ವ್ಯಾಖ್ಯಾನ ದೇಶದ್ರೋಹ

ನಮ್ಮ ಸಮಾಜದಲ್ಲಿನ ವೈರುಧ್ಯಗಳ ನಡುವೆಯೂ ಇರುವ, ಸೌಹಾರ್ದತೆ–ವೈವಿಧ್ಯತೆಗಳ ನಾನಾ ಆಯಾಮಗಳನ್ನು ಮತ್ತಷ್ಟು ಅರಿತುಕೊಂಡು, ನಮ್ಮ ಸಮಾಜದಲ್ಲಿನ ಶಾಂತಿ–ಸಹಬಾಳ್ವೆ–ಸೌಹಾರ್ದ ಪರಂಪರೆಯನ್ನು ಕಾಪಾಡಿಕೊಂಡು, ಬಲಪಡಿಸಿಕೊಂಡು ಹೋಗುವ ನಿಟ್ಟಿನಲ್ಲಿ, ಸಮಾನ ಮನಸ್ಕ ಸಂಘಟನೆ, ಚಳುವಳಿ, ಮನಸ್ಸುಗಳ ವೇದಿಕೆಯಾದ 'ಸೌಹಾರ್ದ ಕರ್ನಾಟಕ'ದ ಮೂಲಕ ಸಮಗ್ರ ಕ್ರಿಯಾ ಯೋಜನೆ ರೂಪಿಸಿ ಅದರ ಜಾರಿಯ ಮುಂದಕ್ಕೊಯ್ಯುವ ದೃಷ್ಟಿಯಿಂದ 'ಸೌಹಾರ್ದತೆ: ವೈವಿಧ್ಯತೆ' ಎಂಬ ವಿಷಯದ ಕುರಿತ ರಾಜ್ಯಮಟ್ಟದ ಚಿಂತನ ಶಿಬಿರವೊಂದನ್ನು ಸೆಪ್ಟೆಂಬರ್–28–29, 2024 ರಂದು ಎರಡು ದಿನಗಳ ಕಾಲ ಬೆಂಗಳೂರಿನಲ್ಲಿ ಯೋಜಿಸಲಾಗಿತ್ತು. ವಿಮಾ ನೌಕಕರ ಸಮುದಾಯ ಭವನ, 'ಸೌಹಾರ್ದ'ದಲ್ಲಿ ನಡೆದ ಈ ಶಿಬಿರದ ಕುರಿತು ಒಂದು ವರದಿ.

–ಡಾ. ಅಜಯ್‌ಕುಮಾರ್ ಸಿಂಹ, ಐ.ಪಿ.ಎಸ್–

ಸಮಾಜದಲ್ಲಿ ದ್ವೇಷ ಹರಡಿ ಕೋಮುಗಲಭೆ ಹುಟ್ಟುಹಾಕುವುದು, ದೇಶಭಕ್ತಿ, ಧರ್ಮದ ಹೆಸರಿನಲ್ಲಿ ಸುಳ್ಳು ವ್ಯಾಖ್ಯಾನ ಮಾಡುವುದು ಸಮಾಜ ದ್ರೋಹ, ದೇಶದ್ರೋಹ ಎಂದು ಸಾಹಿತಿಗಳು, ನಿವೃತ್ತ ಪೊಲೀಸ್ ಮಹಾನಿರ್ದೇಶಕರೂ ಆದ ಡಾ. ಅಜಯ್‌ಕುಮಾರ್ ಸಿಂಹ, ಐ.ಪಿ.ಎಸ್ ಅವರು ಹೇಳಿದರು. ರಾಜ್ಯ ಮಟ್ಟದ 'ಸೌಹಾರ್ದತೆ: ವೈವಿಧ್ಯತೆ' ಚಿಂತನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು ನಮ್ಮ ಸಮಾಜದಲ್ಲಿ ಪ್ರಕೃತಿಯಲ್ಲಿ ಎಲ್ಲೆಲ್ಲೆಯೂ ವೈವಿಧ್ಯತೆ ಇದೆ. ವೈವಿಧ್ಯತೆ ಇಲ್ಲದೇ ಪ್ರಪಂಚವೇ ಇಲ್ಲ. ನಮ್ಮ ದೇಹದಲ್ಲಿಯೂ ಹಲವಾರು ಅಂಗಗಳಿವೆ. ಮೂಳೆಗಳು, ಸ್ನಾಯುಗಳು, ರಕ್ತ ಇತ್ಯಾದಿಗಳಿವೆ. ಈ ಅಂಗಾಂಗಗಳ ನಡುವಿನ ಹೊಂದಾಣಿಕೆ ಕೆಟ್ಟರೆ ಜೀವಕ್ಕೆ ಅಪಾಯ. ಹಾಗೆಯೇ ನಮ್ಮ ಸಮಾಜ ಮಟ್ಟದಲ್ಲಿ ಸೌಹಾರ್ದತೆ ಇರುವುದು ಅಗತ್ಯ. ಸೌಹಾರ್ದತೆ ಕನ್ನಡ ಸಂಸ್ಕೃತಿಯ ಮಹತ್ವದ ಆಧಾರ ಸ್ತಂಭ. 'ಸರ್ವಜನಾಂಗದ ಶಾಂತಿಯ ತೋಟ' ಎಂಬುದು ಕವಿಯ ಕಲ್ಪನೆ ಮಾತ್ರವಲ್ಲ. ಅದು ನಮ್ಮ ಹೆಮ್ಮೆಯ ಪರಂಪರೆ ಎಂದರು.

ಮುಂದುವರಿದು ಮಾತನಾಡಿದ ಡಾ.ಅಜಯ್ ಕುಮಾರ್ ಸಿಂಹ, ವೈರುಧ್ಯಗಳ ನಡುವೆಯೂ ಹೊಂದಾಣಿಕೆಯನ್ನು ಕಾಪಾಡುವುದು, ಬಲಪಡಿಸುವುದು ಅಗತ್ಯ.. ಇಲ್ಲವಾದಲ್ಲಿ ನಮ್ಮ ಸಮಾಜದಲ್ಲಿ ಶಾಂತಿ ಕಾಪಾಡಲು ಆಗುವುದಿಲ್ಲ. ಪ್ರಗತಿ, ವಿಕಾಸ ಆಗುವುದಿಲ್ಲ. ನಮ್ಮ ಎಲ್ಲ ಶಕ್ತಿ ಶಾಂತಿ ಕಾಪಾಡುವುದರಲ್ಲಿ ಹೊರಟು ಹೋಗುತ್ತದೆ. ನಮ್ಮ ಸಮಾಜದಲ್ಲಿ ಪರಿಪೂರ್ಣ ಸೌಹಾರ್ದತೆ ಯಾವತ್ತೂ ಇರಲಿಲ್ಲ. ಇರುವುದಿಲ್ಲ. ವೈರುಧ್ಯತೆ ಇರುತ್ತದೆ. ಆದರೆ ಅದು ಬೇಧ ಭಾವಕ್ಕೆ ಆಧಾರ ಆಗಬಾರದು. ಆದರೆ ಇದು ಇತ್ತೀಚೆಗೆ ಜಾಸ್ತಿಯಾಗುತ್ತಿದೆ. ನಮ್ಮ ಸಮಾಜದಲ್ಲಿ ಕೆಲವರು ಸೌಹಾರ್ದತೆಯನ್ನು ನಾಶಮಾಡಲು, ಕಿತ್ತು ಹಾಕಲು ಅಸತ್ಯ, ಅರ್ಧಸತ್ಯಗಳನ್ನು ಹೇಳುವುದು ಮಾಡುತ್ತಿದ್ದಾರೆ. ಟಿ.ವಿ. ಚರ್ಚೆ, ಪ್ರಚಾರಗಳಲ್ಲಿ ಬರೀ ದ್ವೇಷದ ವಿಚಾರವನ್ನು ಹರಡುತ್ತಿದ್ದಾರೆ. ಅಲ್ಲಿ ಬೇರೇನೂ ಇಲ್ಲ. ದ್ವೇಷದಿಂದ ಕೋಮುಗಲಭೆಗಳು ಉಂಟಾಗುತ್ತವೆ. ಮಾನವೀಯತೆ ಕಡಿಮೆಯಾಗುತ್ತದೆ. ಸಮಾಜದಲ್ಲಿ ಸೌಹಾರ್ದತೆಯನ್ನು ಕಾಪಾಡುವುದು ಎಲ್ಲರ ಕರ್ತವ್ಯ. ನಾವೆಲ್ಲರೂ ಇದರಲ್ಲಿ ಭಾಗವಹಿಸಬೇಕು. ಅದೇ ದೇಶಪ್ರೇಮ. ಕಳ್ಳರು, ದುಷ್ಟರ ನಡುವೆ ಗಾಢವಾದ ಸಂಬಂಧ–ಸ್ನೇಹ ಇರುತ್ತದೆ. ಒಳ್ಳೆಯ ಜನರೂ ಒಂದುಗೂಡಬೇಕು. ಈ ನಿಟ್ಟಿನಲ್ಲಿ ಇಂತಹ ಚಿಂತನ ಶಿಬಿರ ಐತಿಹಾಸಿಕ, ಅರ್ಥಪೂರ್ಣ. ಇಂತಹ ಕೆಲಸ ಐತಿಹಾಸಿಕ ಅವಶ್ಯಕತೆ. ಇಂತಹ ಪ್ರಯತ್ನಗಳಿಗೆ ನಿರ್ಣಾಯಕ ಪಾತ್ರ ಇದೆ ಎಂದರು.

ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರು, ನಿವೃತ್ತ ಐ.ಪಿ.ಎಸ್. ಅಧಿಕಾರಿಗಳೂ ಆದ ಶ್ರೀ ಯು. ನಿಸಾರ್ ಅಹಮದ್ ಅವರು ಮುಖ್ಯಅತಿಥಿಯಾಗಿ ಪಾಲ್ಗೊಂಡು ಮಾತನಾಡಿ ನಮ್ಮ ಸಮಾಜದಲ್ಲಿ ಸೌಹಾರ್ದತೆ ಉಳಿಯುವುದು ಅತ್ಯಂತ ಅನಿವಾರ್ಯ. ಸೌಹಾರ್ದಪರವಾದ ಎಲ್ಲರೂ ಒಗ್ಗಟ್ಟಿನಿಂದ ಸೌಹಾರ್ದತೆಯನ್ನು ಕಾಪಾಡಿಕೊಳ್ಳಲು ಕೆಲಸ ಮಾಡೋಣ ಎಂದರು.





ಶಾಂತಿಯನ್ನು ಕೆಡಿಸುತ್ತಿರುವುದು ಸರಕಾರಗಳೇ

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಹಿರಿಯ ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿಯವರು ಮಾತನಾಡಿ, ಇವತ್ತು ನಮ್ಮ ಸಮಾಜದಲ್ಲಿ ಶಾಂತಿಯನ್ನು ಕೆಡಿಸುತ್ತಿರುವುದು ಸರಕಾರಗಳೇ. ಆಡಳಿತ ನಡೆಸುತ್ತಿರುವ ಸರಕಾರಗಳೇ ಶಾಂತಿ ಕೆಡಿಸಿದರೆ ಪರಿಹಾರ ಕೊಡುವುದು ಯಾರು? ಹಿಂದೆಯೂ ಅಲ್ಲಲ್ಲಿ ಕೋಮುಗಲಭೆಗಳಾಗುತ್ತಿದ್ದವು. ಆದರೆ ಜನರು ಮತ್ತೆ ಹೊಂದಿಕೊಂಡು ಹೋಗುತ್ತಿದ್ದರು. ಆದರೆ ಈಗ ಶಾಶ್ವತ ದ್ವೇಷವನ್ನು ಹರಡಲಾಗುತ್ತಿದೆ. ಮುಸಲ್ಮಾನರು ಅನ್ಯರು ಎಂದು ಹೇಳಲಾಗುತ್ತಿದೆ. ಈಗ ಇಷ್ಟು ನೇರವಾಗಿಯೇ ವಿರೋಧಿಸಲಾಗುತ್ತಿದೆ. ಮುಸಲ್ಮಾನರು ಅನ್ಯರು ಎನ್ನುವುದಕ್ಕೆ ಆಧಾರವಿಲ್ಲ. ಇದು ಸುಳ್ಳು. ಈ ಆಧಾರದಲ್ಲಿ ಅನ್ನ, ವಸತಿ, ಬಟ್ಟೆ ನಿರಾಕರಿಸುವುದು ಕ್ರೌರ್ಯ. ಯಾವ ಧರ್ಮವೂ ಇನ್ನೊಬ್ಬರ ಅನ್ನಕ್ಕೆ ಕೈ ಹಾಕಿ ಎಂದು ಹೇಳಿಲ್ಲ ಎಂದರು.

ಬುಲ್ಡೋಜರ್ ಸಂಸ್ಕೃತಿ ತಲೆ ಎತ್ತಿದೆ

ಉತ್ತರ ಪ್ರದೇಶದಲ್ಲಿ ಕವಾಡಿ ಎಂಬ ವಾರ್ಷಿಕ ಹಬ್ಬದಲ್ಲಿ ಅಂಗಡಿ, ಮಳಿಗೆಗಳ ಬೋರ್ಡುಗಳಲ್ಲಿ ಮಾಲಿಕರ ಹೆಸರು, ವಿವರ ಹಾಕಬೇಕೆಂದು ಆದೇಶಿಸಲಾಯಿತು. ದೇವಸ್ಥಾನಗಳ ಬಳಿ, ಜಾತ್ರೆಗಳಲ್ಲಿ ಹಿಂದುಗಳು ಮಾತ್ರವೇ ತೆಂಗಿನ ಕಾಯಿ, ಹೂವು ಇತ್ಯಾದಿಗಳನ್ನು ಮಾರಬೇಕೆಂದರು. ಕಳೆದ ಹತ್ತು ವರ್ಷಗಳಲ್ಲಿ ಬುಲ್ಡೋಜರ್ ಸಂಸ್ಕೃತಿ ತಲೆ ಎತ್ತಿದೆ. ಮುಸ್ಲಿಮರು ಅಪರಾಧಿಗಳು ಎಂದು ತೀರ್ಮಾನಿಸಿ ಮನೆ, ಅಂಗಡಿಗಳನ್ನು ಒಡೆಯಲಾಗುತ್ತಿದೆ. ಬಡವರೇ ಇಂತಹ ದೌರ್ಜನ್ಯಗಳಿಗೆ ಸಿಲುಕುತ್ತಾರೆ. ಶ್ರೀಮಂತರು ಯಾರೂ ಸಿಕ್ಕಿಬೀಳುವುದಿಲ್ಲ. ಈ ವಿಷಯದಲ್ಲಿ ಬಹಳ ಕಾಲ ನ್ಯಾಯಾಲಯಗಳೂ ಸುಮ್ಮನಿದ್ದವು. ಇತ್ತೀಚೆಗೆ ಸುಪ್ರಿಂ ಕೋರ್ಟ್ ತಡೆ ಆದೇಶ ಕೊಟ್ಟ ಮೇಲೂ ಬುಲ್ಡೋಜರ್ ಕಾರ್ಯಾಚರಣೆಗಳು ನಡೆದಿವೆ. ದೆಹಲಿ, ಉತ್ತರ ಪ್ರದೇಶ, ಹರ್ಯಾಣ, ಅಸ್ಸಾಂ ಮುಂತಾದ ರಾಜ್ಯಗಳಲ್ಲಿ ನಡೆಯುತ್ತಿರುವ ಈ ಕ್ರೂರ ದೌರ್ಜನ್ಯವನ್ನು ಎಲ್ಲರೂ ಖಂಡಿಸಬೇಕು ಎಂದರು.

ನಮ್ಮ ಸಮಾಜದಲ್ಲಿ ಹಿಡಿ ಮಂದಿ ಕೇಂದ್ರದಲ್ಲಿ ಕೂತು ನಿರ್ಧಾರ ತೆಗೆದುಕೊಳ್ಳುತ್ತಾರೆ. ಕಡಿಮೆ ಪ್ರಜಾಪ್ರಭುತ್ವ, ಹೆಚ್ಚು ನಿರಂಕುಶಾಧಿಕಾರ ಇದೆ. ಸಮಾಜದಲ್ಲಿ ಕೆಲವೇ ಜನರ ಕೈಯಲ್ಲಿ ಸಂಪನ್ಮೂಲ ಇದೆ. ಬಡವರು ಶ್ರೀಮಂತರ ನಡುವೆ ದೊಡ್ಡ ಕಂದರವೇ ಇದೆ. ಬಡವರು ಬಡವರಾಗುತ್ತಾ, ಶ್ರೀಮಂತರು ಇನ್ನಷ್ಟು ಶ್ರೀಮಂತರಾಗುತ್ತಾ ಹೋಗುತ್ತಿದ್ದಾರೆ. ಶ್ರೀಮಂತರ ಪರ ಇರುವ ಸರಕಾರಗಳು ಜನರಿಗೆ ವಿಷಕಾರಿ ಮದ್ದು ಉಣಿಸಿ, ತನ್ನ ಧರ್ಮವನ್ನು ಮೋಹಿಸುವುದನ್ನು ಹಾಗೂ ಇನ್ನೊಬ್ಬರನ್ನು ದ್ವೇಷಿಸುವುದನ್ನು ಕಲಿಸುತ್ತಿವೆ. ನಮ್ಮ ಸಮಾಜದಲ್ಲಿನ ಪಿರಮಿಡ್ ವ್ಯವಸ್ಥೆಯಲ್ಲಿ ಕೆಳಗಿರುವ ಅಲ್ಪಸಂಖ್ಯಾತರು, ದಲಿತರು, ಹಿಂದುಳಿದವರು ತೊಂದರೆಗೆ ಒಳಗಾಗುತ್ತಾರೆ. ಡಾ. ಬಾಬಾ ಸಾಹೇಬ ಅಂಬೇಡ್ಕರರು ಭಕ್ತಿ ಎಂಬುದು ರಾಜಕೀಯದಲ್ಲಿ ಸರ್ವಾಧಿಕಾರಕ್ಕೆ ದಾರಿ ಮಾಡಿಕೊಡುತ್ತದೆ ಎಂದು ಎಚ್ಚರಿಸಿದ್ದಾರೆ ಎಂದು ಮೂಡ್ನಾಕೂಡು ಅವರು ತಿಳಿಸಿದರು.

ಮೈಸೂರಿನ ಹಳ್ಳಿಯೊಂದರಲ್ಲಿ ದಲಿತರು ಪ್ರವೇಶ ಮಾಡಿದರು ಎಂಬ ಕಾರಣಕ್ಕೆ ಮತ್ತೊಂದು ದೇವಸ್ಥಾನ ಕಟ್ಟಿಸುವುದು ನಡೆದಿದೆ. ಇಂತಹ ಕಾರಣಕ್ಕೆ ಮೇಲ್ಜಾತಿಯ ಜನರು ಆತ್ಮಹತ್ಯೆಯ ಪ್ರಯತ್ನ ಮಾಡಿರುವುದೂ ಇದೆ. ನಮ್ಮದು ಸರ್ವಜನಾಂಗದ ಶಾಂತಿಯ ತೋಟ ಎಂದಿದ್ದರೂ ಒಳಗೊಳಗೆ ಬೇಯುತ್ತಿರುವ ಸಮಾಜವಾಗಿದೆ. ಒಳಗೆ ಗೋಡೆಗಳು ಇವೆ. ಉಸಿರಾಡಲಾಗಲಾರಂತಹ ಪರಿಸ್ಥಿತಿಯೂ ಇದೆ.

ಒಂದು ದೇಶ, ಒಂದು ಜಾತಿ ಎಂದು ಮಾಡಿಬಿಡಿ

ಸಾವಿರಾರು ಭಾಷೆ, ಸಂಸ್ಕೃತಿಯ ದೇಶ ನಮ್ಮದು. ಇಲ್ಲಿ ಒಂದು ಭಾಷೆ, ಒಂದು ಸಂಸ್ಕೃತಿ ಮಾಡಲು ಹೊರಟಿರುವವರು, ಹಾಗೆಯೇ 'ಒಂದು ದೇಶ, ಒಂದು ಜಾತಿ' ಎಂದು ಮಾಡಿಬಿಡಿ ಎಂದು ಸವಾಲು ಹಾಕಿದ ಚಿನ್ನಸ್ವಾಮಿಯವರು ಹಿಂದೂ ಎನ್ನುವುದನ್ನೇ ಭಾರತೀಯ ಎನ್ನುವುದಕ್ಕೆ ಸಮೀಕರಣ ಮಾಡುವುದು ಅಪಯಾಕಾರಿ. ಭಾರತದಲ್ಲಿ ಹಿಂದೂ, ಮುಸ್ಲಿಂ, ಬೌದ್ಧ, ಜೈನ ಎಲ್ಲರೂ ಇದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಪ್ರಾಧ್ಯಾಪಕರು, ಹಿರಿಯ ಸಾಹಿತ್ಯ ವಿಮರ್ಶಕರೂ ಆದ. ಡಾ. ಎಂ.ಎಸ್.ಆಶಾದೇವಿ ಕರ್ನಾಟಕದ ಸೌಹಾರ್ದ ಪರಂಪರೆಗೆ ಪ್ರಸಕ್ತ ಇರುವ ಸವಾಲುಗಳ ಬಗೆಗೆ ಮಾತನಾಡಿದರು. ಭೈರಪ್ಪನವರ ಆವರಣ ಕಾದಂಬರಿ ಒಂದು ವಿಕೃತಿ. ಅವರ ಮಂದ್ರ, ಕವಲು, ಮುಂತಾದ ಕಾದಂಬರಿಗಳು ಜೀವವಿರೋಧಿಯಾಗಿವೆ. ಗೌರಿ ಲಂಕೇಶ ಜೊತೆ ಆವರಣ ಕಾದಂಬರಿಯ ಕುರಿತು ಚರ್ಚಿಸಿದಾಗ 'ಆವರಣ ಎಂಬ ವಿಕೃತಿ' ಎಂಬ ಕೃತಿ ಹೊರಬರಲು ಕಾರಣವಾಯಿತು. ಎಷ್ಟೋ ಜನರು ಇಂತಹ ಜೀವ ವಿರೋಧಿ ಶಕ್ತಿಗಳನ್ನು ಎದುರು ಹಾಕಿಕೊಳ್ಳಲು ತಯಾರಿಲ್ಲ. ಕಲ್ಬುರ್ಗಿಯವರಿಂದ ಯಾರಿಗೆ ಯಾವ ಅಪಾಯ ಇತ್ತು. ಲಿಂಗಾಯತ ಜಾತಿ ಕರ್ನಾಟಕದ ಮೊದಲ ಧರ್ಮ ಎಂದು ಅವರು ಪ್ರತಿಪಾದಿಸಿದರು. ಜಾತಿ ರಹಿತವಾದ, ಬಹುತ್ವದ ಮತ್ತು ಸಮಾನತೆಯ ಲಿಂಗಾಯತ ಧರ್ಮದ ಐತಿಹಾಸಿಕತೆಯನ್ನು ಸ್ಥಾಪಿಸಲು ಪ್ರಯತ್ನಿಸಿದರು. ಗೌರಿ, ಕಲ್ಬುರ್ಗಿಯವರನ್ನು ಕೊಲ್ಲಲಾಯಿತು ಎಂದು ಅವರು ವಿಷಾದಿಸಿದರು.

ಆರಂಭದಲ್ಲಿ ಸೌಹಾರ್ದ ಕರ್ನಾಟಕದ ಸಮನ್ವಯಕಾರರಾದ ಡಾ.ಎಸ್.ವೈ. ಗುರುಶಾಂತ್ ಪ್ರಸ್ತಾವಿಕ ಮಾತುಗಳನ್ನು ಆಡಿ ಸೌಹಾರ್ದ ಕರ್ನಾಟಕವು ಸೌಹಾರ್ದ ಮಾನವ ಸರಪಳಿ ಸೇರಿದಂತೆ ಇತ್ತೀಚಿನ ವರ್ಷಗಳಲ್ಲಿ ಹಮ್ಮಿಕೊಂಡು ಬಂದ ನಾನಾ ಸೌಹಾರ್ದಪರ ಕಾರ್ಯಚಟುವಟಿಕೆಗಳನ್ನು ವಿವರಿಸಿ, ಪ್ರಸಕ್ತ ಚಿಂತನ ಶಿಬಿರದ ಉದ್ದೇಶದ ಕುರಿತು ವಿವರಿಸಿದರು. ಬಿ.ರಾಜಶೇಖರಮೂರ್ತಿ ಸ್ವಾಗತಿಸಿ, ಕಾರ್ಯಕ್ರಮ ನಿರ್ವಹಣೆ ಮಾಡಿದರು. ಕೊನೆಯಲ್ಲಿ ಕೆ.ಎಸ್. ಲಕ್ಷ್ಮಿ ಸೌಹಾರ್ದ ಗೀತೆಗಳನ್ನು ಹಾಡಿ, ವಂದನಾರ್ಪಣೆಯನ್ನು ಮಾಡಿದರು.

ವಿವಿಧ ಗೋಷ್ಠಿಗಳು 'ಸೌಹಾರ್ದ ಪರಂಪರೆ–ಪ್ರಸಕ್ತ ಸವಾಲುಗಳು'

ಉದ್ಘಾಟನೆಯ ನಂತರ 'ಕರ್ನಾಟಕದ ಸೌಹಾರ್ದ ಪರಂಪರೆ–ಪ್ರಸಕ್ತ ಸವಾಲುಗಳು' ಎಂಬ ಮುಖ್ಯವಿಷಯದ ಮೇಲೆ ನಡೆದ ಗೋಷ್ಠಿಯಲ್ಲಿ ದಲಿತ ಹಕ್ಕು ಸಮಿತಿಯ ರಾಜ್ಯ ಅಧ್ಯಕ್ಷರಾದ

ಪುಟ 10 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**